# ನಾರ್ವೇಜಿಯನ್ ಹ್ಯೂಮನ್ ರೈಟ್ಸ್ ಫಂಡ್

## ಕಾರ್ಯಕ್ಷೇತ್ರದಲ್ಲಿ ಅನುದಾನ ಪಡೆಯುವವರಿಗೆ ಭದ್ರತೆ ಮತ್ತು ರಕ್ಷಣೆಯ ಮಾರ್ಗಸೂಚಿಗಳು



## ಮುಂಜಾನೆಯ ಮಿಡಿತದಲ್ಲಿ

ಚರಿತ್ರೆ, ಬಲಾತ್ಕಾರದ ನೋವಿನ ಹೊರತಾಗಿಯೂ,
ಜೀವಂತವಾಗಿರಲು ಸಾಧ್ಯವಿಲ್ಲ,
ಮತ್ತು ಧೈರ್ಯದಿಂದ ಎದುರಿಸಿದರೆ,
ಮತ್ತೆ ಬದುಕುವ ಅಗತ್ಯವಿಲ್ಲ

– ಮಾಯಾ ಏಂಜೆಲೊ

NHRF

ಮುಖಪುಟ ಚಿತ್ರ: ಹುದಾ ಅಲ್–ಸರಾರಿ, 2020 ಮಾರ್ಟಿನ್ ಎನಾಲ್ಸ್ ಪ್ರಶಸ್ತಿ ಪುರಸ್ಕೃತ, ಯೆಮನ್‌ನ ಮಾನವ ಹಕ್ಕುಗಳ ರಕ್ಷಕರು. ಫೋಟೋ ಬಿ ಮಾರ್ಟಿನ್ ಎನಾಲ್ಸ್ ಫೌಂಡೇಶನ್.

ಗ್ರಾಫಿಕ್ ವಿನ್ಯಾಸ: ವಿಲ್ಹೆಮಿನಾ ವಾಹ್ಲಿನ್, ಮೆಲಿಸ್ಸಾ ಸ್ಟ್ರೈಟರ್ ಮತ್ತು ಬೆಕ್ ಡೆನ್ನಿಸ್ । ಬ್ರೇನ್‌ಚೈಲ್ಡ್ ಮೀಡಿಯಾ.

ವರದಿಯಲ್ಲಿನ ಎಲ್ಲಾ ಫೋಟೋಗಳನ್ನು ಎನ್‌ಎಚ್‌ಆರ್‌ಎಫ್ ಅನುದಾನ ಪಡೆದ ಪಾಲುದಾರರ ಅನುಮತಿಯೊಂದಿಗೆ ಹಂಚಿಕೊಳ್ಳಲಾಗಿದೆ. ಎಲ್ಲಾ ಫೋಟೋಗಳು ಇಲ್ಲಿ ಹೇಳದ್ದನ್ನು ಹೊರತುಪಡಿಸಿ ಮಾನಿಕಾ ಒರ್ಜುಯೆಲಾರವರಿಗೆ ಮಾನ್ಯತೆಯನ್ನು ನೀಡಲಾಗುತ್ತದೆ. "ನಿರೂಪಣೆಯನ್ನು ಪುನ: ಪಡೆದುಕೊಂಡಿರುವುದು (ರೀಕ್ಲೈಮಿಂಗ್ ದಿ ನರೇಟಿವ್)" ವಿಭಾಗದಲ್ಲಿನ ಎಲ್ಲಾ ಫೋಟೋಗಳನ್ನು ತಮ್ಮ ಕಥೆಗಳನ್ನು ಹಂಚಿಕೊಂಡ ಮಹಿಳಾ/ಮಾನವ ಹಕ್ಕುಗಳ ರಕ್ಷಕರಿಂದ ಒದಗಿಸಲಾಗಿದೆ.

ನಾರ್ವೇಜಿಯನ್ ಹ್ಯೂಮನ್ ರೈಟ್ಸ್ ಫಂಡ್ (ಎನ್‌ಎಚ್‌ಆರ್‌ಎಫ್) ಮಾನವ ಹಕ್ಕುಗಳ ರಕ್ಷಣೆಯ ಮೊದಲ ಸಾಲಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂಸ್ಥೆಗಳಿಗೆ ನೇರ ಬೆಂಬಲವನ್ನು ನೀಡುವ ಮೂಲಕ ಅಂತರಾಷ್ಟ್ರೀಯ ಮಟ್ಟದಲ್ಲಿ ಮಾನವ ಹಕ್ಕುಗಳ ರಕ್ಷಣೆ ಮತ್ತು ಉತ್ತೇಜಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತದೆ. ನಮ್ಮ ಕೆಲಸದ ಬಗ್ಗೆ ಮತ್ತು ನಾವು ಯಾರನ್ನು ಬೆಂಬಲಿಸುತ್ತೇವೆ ಎಂಬ ಬಗ್ಗೆ ಹೆಚ್ಚಿನ ಮಾಹಿತಿಗಾಗಿ, ದಯವಿಟ್ಟು ನಮ್ಮ ವೆಬ್‌ಸೈಟ್‌ಗೆ ಭೇಟಿ ನೀಡಿ:

www.nhrf.no

2 ನೇ ಮುದ್ರಣ, ಮೇ 2020

ಅನುವಾದವನ್ನು ನೀಡಿದವರು: ಗುರುಕಿರಣ್ ಕಾಮತ್

---

[ಆಯ್ದ ಭಾಗ] ಮಾಯಾ ಏಂಜೆಲೊ ರವರ ಸಂಪೂರ್ಣವಾಗಿ ಸಂಗ್ರಹಿಸಿದ ಕವನಗಳು (ರಾಂಡಮ್ ಹೌಸ್ ಇಂಕ್., 1994)
https://www.bit.ly/2WvACr0
ಕವಿತೆಯ ಅಧಿಕೃತ ಅನುವಾದವಲ್ಲ. ರಕ್ಷಣೆಯ ಮಾರ್ಗಸೂಚಿಗಳ ಅನುವಾದಕರಿಂದ ಅನುವಾದವನ್ನು ಒದಗಿಸಲಾಗಿದೆ



# ಪರಿವಿಡಿ


| | |
|---|---|
| **ಮುನ್ನುಡಿ** | 4 |
| **ಪರಿಚಯ** | 6 |
| **ಗುರಿ ಮತ್ತು ಉದ್ದೇಶಗಳು** | 8 |
| ಮಾನವ ಹಕ್ಕುಗಳ ರಕ್ಷಕರೆಂದರೆ ಯಾರು? | 9 |
| **ವೈಯಕ್ತಿಕ ಮತ್ತು ಸಾಂಸ್ಥಿಕ ಭದ್ರತೆ** | 13 |
| ಮಹಿಳಾ ಮಾನವ ಹಕ್ಕುಗಳ ರಕ್ಷಕರು | 14 |
| ಅಪಾಯದ ಮೌಲ್ಯಮಾಪನ ಮತ್ತು ಬೆದರಿಕೆಯ ವಿಶ್ಲೇಷಣೆ | 18 |
| ಡಿಜಿಟಲ್ ಭದ್ರತೆ | 24 |
| ಸೈಬರ್ ಕಿರುಕುಳ ಮತ್ತು ಬೆದರಿಕೆಗಳು | 26 |
| ಲಿಂಗ ಮತ್ತು ಸಾಮರ್ಥ್ಯ–ಸೂಕ್ಷ್ಮ ಅಪಾಯದ ಮೌಲ್ಯಮಾಪನ | 27 |
| **ಪಾತ್ರ ಮತ್ತು ಜವಾಬ್ದಾರಿಗಳು** | 30 |
| ಬೆಂಬಲ ಕಾರ್ಯವಿಧಾನಗಳು | 32 |
| ಮಾನವ ಹಕ್ಕುಗಳ ರಕ್ಷಕರಿಗೆ ಸಂಬಂಧಿಸಿದ ವಿಶ್ವ ಸಂಸ್ಥೆಯ (UN) ಕಾರ್ಯವಿಧಾನಗಳು | 33 |
| ಮಾನವ ಹಕ್ಕುಗಳ ರಕ್ಷಕರ ಪರಿಸ್ಥಿತಿ ಕುರಿತ ವಿಶೇಷ ವರದಿಗಾರರು | 34 |
| ಶಾಂತಿಯುತವಾಗಿ ಸಭೆ ಸೇರುವ ಮತ್ತು ಸಂಘಟಿಸುವ ಸ್ವಾತಂತ್ರ್ಯದ ಹಕ್ಕುಗಳ ಕುರಿತ ವಿಶೇಷ ವರದಿಗಾರರು | 35 |
| ಅಭಿಪ್ರಾಯ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕಿನ ಪ್ರಚಾರ ಮತ್ತು ರಕ್ಷಣೆಯ ಕುರಿತ ವಿಶೇಷ ವರದಿಗಾರರು | 36 |
| ಪ್ರತೀಕಾರಗಳು ಮತ್ತು ಬೆದರಿಕೆ | 37 |
| **ಮಾನವ ಹಕ್ಕುಗಳ ರಕ್ಷಕರಿಗೆ ಬೆಂಬಲ ನೀಡುವ ಬಗ್ಗೆ ಅಸ್ತಿತ್ವದಲ್ಲಿರುವ ಮಾರ್ಗಸೂಚಿಗಳು** | 40 |
| ಮಾನವ ಹಕ್ಕುಗಳ ರಕ್ಷಕರಿಗೆ ಯೂರೋಪಿನ ಒಕ್ಕೂಟದ (EU) ಬೆಂಬಲ | 40 |
| ಮಾನವ ಹಕ್ಕುಗಳ ರಕ್ಷಕರಿಗೆ ಬೆಂಬಲ ನೀಡುವ ಕುರಿತು ಯುರೋಪಿನಲ್ಲಿ ಭದ್ರತೆ ಮತ್ತು ಸಹಕಾರಕ್ಕಾಗಿ ಸಂಸ್ಥೆಯ (OSCE) ಮಾರ್ಗಸೂಚಿಗಳು | 42 |
| ಮಾನವ ಹಕ್ಕುಗಳ ರಕ್ಷಕರಿಗೆ ಬೆಂಬಲ ನೀಡುವ ನಾರ್ವೆಯ ಮಾರ್ಗಸೂಚಿಗಳು | 42 |
| ಮಾನವ ಹಕ್ಕುಗಳ ರಕ್ಷಕರಿಗೆ ಬೆಂಬಲ ನೀಡುವ ಸ್ವಿಟ್ಜರ್ಲೆಂಡ್‌ನ ಮಾರ್ಗಸೂಚಿಗಳು | 43 |
| ಮಾನವ ಹಕ್ಕುಗಳ ರಕ್ಷಕರಿಗೆ ಬೆಂಬಲ ನೀಡುವ ಫಿನ್ಲ್ಯಾಂಡಿನ ಮಾರ್ಗಸೂಚಿಗಳು | 43 |
| ಮಾನವ ಹಕ್ಕುಗಳ ರಕ್ಷಕರಿಗೆ ಬೆಂಬಲ ನೀಡುವ ಬಗ್ಗೆ ಕೆನಡಾದ ಮಾರ್ಗಸೂಚಿಗಳು | 43 |
| **ವಿಶೇಷ ಸಂಸ್ಥೆಗಳು** | 46 |
| **ನಿರೂಪಣೆಯನ್ನು ಪುನ: ಪಡೆದುಕೊಂಡಿರುವುದು (ರೀಕ್ಲೈಮಿಂಗ್ ದಿ ನರೇಟಿವ್)** | 54 |

# ಮುನ್ನುಡಿ

ಜಲೀಲಾ, ಮೊಹಾಮದೌ, ಪೌಲೊ ಮತ್ತು ಲೀಟಾ ಇವರೆಲ್ಲರೂ ಕಷ್ಟಕರ ಪ್ರದೇಶಗಳಲ್ಲಿ ಕೆಲಸ ಮಾಡುವ ಮಾನವ ಹಕ್ಕುಗಳ ರಕ್ಷಕರು. ಮರೆತುಹೋದ ಸ್ಥಳಗಳಲ್ಲಿ, ಅಂದರೆ ಎಲ್ಲಿ ರಾಜ್ಯವು ಇನ್ನು ಮುಂದೆ ಕಾರ್ಯನಿರ್ವಹಿಸುವುದಿಲ್ಲವೋ ಅಥವಾ ಘರ್ಷಣೆಗಳು ಹೆಚ್ಚಾಗುವುದೋ ಅಂತಹ ಸ್ಥಳಗಳಲ್ಲಿ ಕೆಲಸ ಮಾಡುತ್ತಾರೆ. ಅವರು ಲೈಂಗಿಕ ಹಿಂಸೆಗೆ/ದೌರ್ಜನ್ಯಕ್ಕೆ ಒಳಗಾದಂತಹ ಮಹಿಳೆಯರಿಗೆ ಬೆಂಬಲವನ್ನು ನೀಡುತ್ತಾರೆ; ಅವರು ಪರಿವರ್ತನಾ ನ್ಯಾಯಕ್ಕಾಗಿ ವಕಾಲತು ನಡೆಸುತ್ತಾರೆ; ಅವರು ನಿರಂಕುಶವಾಗಿ ಬಂಧನಕ್ಕೊಳಗಾದ ಶಾಂತಿಯಿಂದ ಪ್ರತಿಭಟಿಸುವ ಪ್ರತಿಭಟನಾಕಾರರನ್ನು ಭೇಟಿ ಮಾಡುತ್ತಾರೆ. ಅವರು ಕರಾಳವಾದ, ಹೆಚ್ಚು ಪ್ರತ್ಯೇಕಿಸಲಾದ ಸ್ಥಳಗಳಿಗೆ ಮಾನವ ಹಕ್ಕುಗಳನ್ನು ತರುತ್ತಾರೆ. ಯಾರ ಧ್ವನಿಯನ್ನು ಕಸಿದುಕೊಳ್ಳಲಾಗಿದೆಯೋ ಇವರು ಅವರ ಧ್ವನಿಗಳಾಗಿದ್ದಾರೆ. ತಾವು ರಕ್ಷಿಸುವವರಿಗೆ ಹತ್ತಿರವಾಗುವ ನಿಟ್ಟಿನಲ್ಲಿ ಪ್ರತಿದಿನ ಈ ಸಾಮಾನ್ಯ ಮಹಿಳೆಯರು ಮತ್ತು ಪುರುಷರು ಲೆಕ್ಕವಿಲ್ಲದಷ್ಟು ಅಪಾಯಗಳನ್ನು ಎದುರಿಸುತ್ತಾರೆ. ಅವರು ಮಾನವ ಹಕ್ಕುಗಳನ್ನು ರಕ್ಷಿಸುತ್ತಿರುವ ಕಾರಣದಿಂದ ಮಾನವ ಹಕ್ಕುಗಳ ಉಲ್ಲಂಘನೆಯಿಂದ ಲಾಭ ಪಡೆಯುತ್ತಿರುವವರು ಅವರನ್ನು ಗುರಿಯಾಗಿಸುತ್ತಾರೆ. ಪ್ರತಿದಿನ ಅವರು ತಮ್ಮನ್ನು ಮತ್ತು ಅವರ ಅತ್ಯಂತ ಕ್ಷುಲ್ಲಕ ದಿನಚರಿಯನ್ನು ಮರುಶೋಧಿಸಬೇಕು. ಜಲೀಲಾರವರು ಇತರ ರಕ್ಷಕರೊಂದಿಗೆ ಚರ್ಚಿಸುವಾಗ ತಮ್ಮ ಫೋನ್‌ನನ್ನು ಆಫ್ ಮಾಡುತ್ತಾರೆ; ಸೂರ್ಯ ಇನ್ನೂ ಪ್ರಕಾಶಮಾನವಾಗಿರುವಾಗಲೇ ಲಿಟಾ ತಾನು ಮನೆಗೆ ಹಿಂದಿರುಗುವಂತೆ ನೋಡಿಕೊಳ್ಳುತ್ತಾರೆ; ಮತ್ತು ಪೌಲೊ ಆಗಾಗ್ಗೆ ತನ್ನ ಸಾಮಾಜಿಕ ಮಾಧ್ಯಮ ಖಾತೆಗಳ ಪಾಸ್ವರ್ಡ್‌ಗಳನ್ನು ಬದಲಾಯಿಸುತ್ತಾರೆ. ಮೊಹಾಮದೌ ತನ್ನ ಹಳ್ಳಿಯಿಂದ ಹೊರಗೆ ಪ್ರಯಾಣಿಸುವಾಗ, ಬಂಧನಕ್ಕೊಳಗಾಗುವ ಮತ್ತು ಜೈಲಿಗೆ ಕರೆದೊಯ್ಯುವ ಸಾಧ್ಯತೆಗಳ ಬಗ್ಗೆ ತನ್ನ ಕುಟುಂಬಕ್ಕೆ ಸಿದ್ಧತೆಗಳನ್ನು ಸೂಚಿಸುತ್ತಾರೆ.

ಪ್ರತಿದಿನ ಈ ನಾಲ್ಕು ರಕ್ಷಕರು ಸಂಕೀರ್ಣ ಪರಿಸ್ಥಿತಿಯಲ್ಲಿ ಮಾನವ ಹಕ್ಕುಗಳನ್ನು ರಕ್ಷಿಸುವುದರ ಅರ್ಥವನ್ನು ತಮ್ಮ ಮನಸ್ಸಿನಲ್ಲಿ ಮತ್ತು ದೇಹದಲ್ಲಿ ಅನುಭವಿಸುತ್ತಾರೆ ಮತ್ತು ಸಾವಿರಾರು ಇತರ ಮಾನವ ಹಕ್ಕುಗಳ ರಕ್ಷಕರು ಕೂಡ ಕಾರ್ಯಕ್ಷೇತ್ರದಲ್ಲಿ ಅದೇ ರೀತಿಯ ಪರಿಸ್ಥಿತಿಯನ್ನು ಎದುರಿಸುತ್ತಾರೆ. ಅವರು ರಾಜ್ಯದಿಂದ ರಕ್ಷಣೆ ಅಥವಾ ತಮ್ಮ ಸಮುದಾಯಗಳಿಂದ ನಿರಂತರ ರಕ್ಷಣೆಯನ್ನು ಅವಲಂಬಿಸಲು ಸಾಧ್ಯವಾಗುವುದಿಲ್ಲ, ಆದ್ದರಿಂದ ಅವರು ಒಂಟಿಯಾಗಿ ಸುರಕ್ಷಿತವಾಗಿ ಇರುವ ನಿಟ್ಟಿನಲ್ಲಿ ತಮ್ಮನ್ನು ತಾವೇ ರಕ್ಷಿಸಿಕೊಳ್ಳುವ ದೊಡ್ಡ ಜವಾಬ್ದಾರಿಯನ್ನು ಹೊತ್ತುಕೊಳ್ಳುತ್ತಾರೆ. ತಮ್ಮ ಸಂಸ್ಥೆಗಳ ಮತ್ತು ಚಳುವಳಿಗಳ ಬೆಂಬಲವನ್ನು ಹೊಂದಿರುವ ಕೆಲವರು ಅದೃಷ್ಟವಂತರು ಆದರೂ ಕೂಡ ತಮ್ಮ ಸ್ವರಕ್ಷಣೆಯ ಅಭ್ಯಾಸವನ್ನು ಮಾಡಿಕೊಳ್ಳಲೇಬೇಕು. ಕೆಲವೊಮ್ಮೆ ಈ ವೈಯಕ್ತಿಕ ಜವಾಬ್ದಾರಿಯು ಒಂದು ಹೊರೆಯಂತೆ ಭಾಸವಾಗುತ್ತದೆ ಮತ್ತು ಇದರಿಂದ ಅವರ ಮಾನಸಿಕ, ದೈಹಿಕ ಮತ್ತು ಸಾಮಾಜಿಕ ಆರೋಗ್ಯದ ಮೇಲೆ ಶಾಶ್ವತವಾದ ಮತ್ತು ತೀವ್ರವಾದ ಪರಿಣಾಮಗಳನ್ನು ಬೀರುತ್ತದೆ.

ಇತ್ತೀಚಿನ ವರ್ಷಗಳಲ್ಲಿ, ಜಗತ್ತಿನಾದ್ಯಂತ ರಕ್ಷಕರನ್ನು ಬೆಂಬಲಿಸಲು ಮತ್ತು ಅಪಾಯಗಳನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ನಿರ್ದಿಷ್ಟವಾದ ಸಾಧನಗಳನ್ನು ಒದಗಿಸಲು ಹಲವಾರು ಪ್ರಯತ್ನಗಳ ಕೊಡುಗೆಯನ್ನು ನೀಡಿವೆ. ರಕ್ಷಕರು ಸಂಘಟಿತಾತ್ಮಕ ಜಾಲಬಂಧಗಳನ್ನು (ನೆಟ್ವರ್ಕ್) ಮತ್ತು ಕಾರ್ಯತಂತ್ರದ ಮೈತ್ರಿಗಳನ್ನು ಕಟ್ಟುತ್ತಿದ್ದಾರೆ, ಜೊತೆಗೆ ಅವರು ಅಪಾಯಗಳ ವಿಶ್ಲೇಷಣೆ ಮತ್ತು ಡಿಜಿಟಲ್ ಭದ್ರತಾ ತರಬೇತಿಗಳನ್ನು ಅಭಿವೃದ್ಧಿಪಡಿಸಿದ್ದಾರೆ. ಮಹಿಳಾ ಮಾನವ ಹಕ್ಕುಗಳ ರಕ್ಷಕರು ಮತ್ತು ಸ್ಥಳೀಯ ಸಮುದಾಯಗಳು ಭದ್ರತೆಗಾಗಿ ಸಂಘಟಿತಾತ್ಮಕ ಮತ್ತು ಸಮಗ್ರವಾದ ವಿಧಾನಗಳನ್ನು ಅಭಿವೃದ್ಧಿಪಡಿಸುವ ಅಗತ್ಯತೆಯನ್ನು ಅರ್ಥ ಮಾಡಿಕೊಳ್ಳಲು ಸಹಾಯ ಮಾಡಿದ್ದಾರೆ. ಕೆಲವು ರಾಜ್ಯಗಳು ಮಾನವ ಹಕ್ಕುಗಳ ರಕ್ಷಕರುಗಳ ಪ್ರಸ್ತುತ ಕ್ಷೀಣತೆಯ ಪರಿಸ್ಥಿತಿಗೆ ಪ್ರತಿಕ್ರಿಯೆಯಾಗಿ ರಕ್ಷಕರನ್ನು ಉತ್ತಮ ರೀತಿಯಲ್ಲಿ ರಕ್ಷಿಸುವ ಸಲುವಾಗಿ ಕಾನೂನುಗಳನ್ನು ಮತ್ತು ಕಾರ್ಯವಿಧಾನಗಳನ್ನು ಅಭಿವೃದ್ಧಿಪಡಿಸಿವೆ. ಕಳೆದ ಐದು ವರ್ಷಗಳಲ್ಲಿ, ರಕ್ಷಣೆಯ ಕುರಿತಾದ ಅನೇಕ ಉತ್ತಮ ಅಭ್ಯಾಸಗಳ ಬಗ್ಗೆ ನಾನು ಕೇಳಿದ್ದೇನೆ ಮತ್ತು ಕಲಿತಿದ್ದೇನೆ ಮತ್ತು ಈ ತಂತ್ರಗಳನ್ನು ಗುರುತಿಸಲು ಮತ್ತು ಕಾರ್ಯರೂಪಕ್ಕೆ ತರಲು ಸಹಾಯ ಮಾಡುವ ನಿಟ್ಟಿನಲ್ಲಿ ಈ ಮಾರ್ಗಸೂಚಿಗಳನ್ನು ಸಂಪನ್ಮೂಲವಾಗಿ ಒದಗಿಸಲು ಎನ್‌ಹೆಚ್‌ಆರ್‌ಎಫ್ ಮಾಡಿದ ಪ್ರಯತ್ನಗಳಿಂದ ನನಗೆ ಸಂತೋಷವಾಗಿದೆ.

ಪ್ರತಿಯೊಂದು ಪ್ರಯತ್ನವು ಕೆಲವು ರಕ್ಷಕರಿಗೆ ನಿರ್ಣಾಯಕ ಮತ್ತು ಮಹತ್ವದ್ದಾಗಿರುತ್ತದೆ, ಆದರೆ ಆಳವಾದ ವ್ಯವಸ್ಥಿತ ಬದಲಾವಣೆಗಳಿಂದ ಅವುಗಳನ್ನು ಬಲಪಡಿಸಬೇಕು. ರಕ್ಷಕರಿಗೆ ನಾವು ಸುರಕ್ಷಿತ ಮತ್ತು ಪೂರಕವಾದ ವಾತಾವರಣವನ್ನು ಸೃಷ್ಟಿಸಲು ಬಯಸಿದ್ದಲ್ಲಿ, ರಕ್ಷಕರ ವಿರುದ್ಧ ಮಾನವ ಹಕ್ಕುಗಳ ಉಲ್ಲಂಘನೆಯ ಅಪರಾಧಿಗಳಿಗೆ ಶಿಕ್ಷೆಯಾಗದಂತಹ ಮೂಲ ಕಾರಣಗಳನ್ನು ನಾವು ಉದ್ದೇಶಿಸಬೇಕಾಗಿದೆ. ಪ್ರಜಾಪ್ರಭುತ್ವ, ಸಾಮಾಜಿಕ ನ್ಯಾಯ ಮತ್ತು ಕಾನೂನಿನ ಆಡಳಿತಕ್ಕಾಗಿ ರಕ್ಷಕರು ವಹಿಸುವ ದೊಡ್ಡ ಪಾತ್ರಗಳನ್ನೂ ನಾವು ಗುರುತಿಸಬೇಕು ಮತ್ತು ಬೆಂಬಲಿಸಬೇಕು. ಇದನ್ನು ಸಾಧ್ಯವಿರುವ ಎಲ್ಲಾ ರೀತಿಯಲ್ಲಿ: ರಾಜಕೀಯವಾಗಿ, ಸಾಂಸ್ಥಿಕವಾಗಿ, ಖಾಸಗಿಯಾಗಿ, ಶಾಲೆಗಳಲ್ಲಿ, ಮಾಧ್ಯಮಗಳಲ್ಲಿ, ಅತ್ಯಂತ ಸಾಮಾನ್ಯ ಸ್ಥಳಗಳಲ್ಲಿ, ಹಾಗೆಯೇ ಅಂತರರಾಷ್ಟ್ರೀಯ ವೇದಿಕೆಗಳಲ್ಲಿ ಮಾಡಬೇಕಾಗಿದೆ.

ತಮ್ಮ ಸಮಾಜದಿಂದ ಕಡೆಗಣಿಸಲ್ಪಟ್ಟ, ಹೊರಗುಳಿಸಿದ ಮತ್ತು ತಿರಸ್ಕೃತರಾಗಿರುವವರಿಗೆ ಕೊನೆಯ ಭರವಸೆದಾರರಾಗಿ ಈ ರಕ್ಷಕರು ಪ್ರತಿನಿಧಿಸುತ್ತಾರೆ. ಹೆಚ್ಚು ಸಮಾನ, ನ್ಯಾಯಯುತ ಮತ್ತು ಸುಸ್ಥಿರ ಜಗತ್ತಿಗಾಗಿ ಹಾದಿಯನ್ನು ರಚಿಸುವ ಸಲುವಾಗಿ ರಕ್ಷಕರು ಯಥಾಸ್ಥಿತಿಗಳಿಗೆ ಧೈರ್ಯದಿಂದ ಸವಾಲು ಹಾಕುವವರಾಗಿದ್ದಾರೆ. ಮಾನವ ಹಕ್ಕುಗಳ ರಕ್ಷಕರು: ಒಗ್ಗಟ್ಟು, ಸಹಾನುಭೂತಿ ಮತ್ತು ಭರವಸೆಗಳಂತಹ ಮಾನವೀಯತೆಯ ಮೂಲತತ್ವಗಳೊಂದಿಗೆ ನಮ್ಮನ್ನು ಮರುಜೋಡಿಸುತ್ತಾರೆ. ಇತ್ತೀಚಿನ ಇತಿಹಾಸದಲ್ಲಿ ಮಾನವ ಹಕ್ಕುಗಳ ಕೆಲಸದ ವಿರುದ್ಧ ದಬ್ಬಾಳಿಕೆಯು ಮಾರಕ ಹಂತವನ್ನು ತಲುಪಿರುವುದರಿಂದ, ಈ ನಾಯಕರಿಗೆ ನಮ್ಮ ಬೆಂಬಲವನ್ನು ಬಲಪಡಿಸುವುದು ಕಡ್ಡಾಯವಾಗಿದೆ. ಇದು ಕೇವಲ ನ್ಯಾಯದ ವಿಷಯವಲ್ಲ, ಇದು ನಮ್ಮ ಸಾಮಾನ್ಯ ಭವಿಷ್ಯದ ಸಲುವಾಗಿ, ನಮ್ಮ ಮಾನವೀಯತೆಗಾಗಿದೆ. ಈ ನಿಸ್ವಾರ್ಥ, ಅದಮ್ಯ ಜನರನ್ನು ನಾವು ಒಗ್ಗಟ್ಟಿನಿಂದ ರಕ್ಷಿಸಬೇಕು, ಅವರೊಂದಿಗೆ ನಿಲ್ಲಬೇಕು ಮತ್ತು ಕಾರ್ಯನಿರ್ವಹಿಸಬೇಕು.

– ಮೈಕೆಲ್ ಫಾರ್ಸ್ಟ್,
ಮಾನವ ಹಕ್ಕುಗಳ ರಕ್ಷಕರ ಪರಿಸ್ಥಿತಿ ಕುರಿತ ವಿಶ್ವ ಸಂಸ್ಥೆಯ ವಿಶೇಷ ವರದಿಗಾರರು
(ಜೂನ್ 2014 – ಮೇ 2020)







**ಮೇಲೆ:** ಮಾನವ ಹಕ್ಕುಗಳ ರಕ್ಷಕರ ಪರಿಸ್ಥಿತಿಯ ಬಗ್ಗೆ ವಿಶೇಷ ವರದಿಗಾರರಾದ ಮೈಕೆಲ್ ಫಾರ್ಸ್ಟ್ ಅವರು ಮಧ್ಯಪ್ರಾಚ್ಯ ಮತ್ತು ಉತ್ತರ ಆಫ್ರಿಕಾ ಪ್ರದೇಶದ (MENA) ಪರಿಸ್ಥಿತಿಯ ಕುರಿತ ಸಮಾಲೋಚನೆಯ ಸಂದರ್ಭದಲ್ಲಿ ಮಾನವ ಹಕ್ಕು ರಕ್ಷಕರೊಂದಿಗೆ (ಫಾರ್ಸ್ಟ್, ಎಡದಿಂದ ಎರಡನೆಯವರು) ಚಿತ್ರ ಸಲ್ಲಿಕೆ: ಗಲ್ಫ್ ಸೆಂಟರ್ ಫಾರ್ ಹ್ಯೂಮನ್ ರೈಟ್ಸ್, ಎನ್‌ಎಚ್‌ಆರ್‌ಎಫ್ ಅನುದಾನ ಪಡೆದ ಪಾಲುದಾರರು.
**ಕೆಳಗೆ:** ಮಾನವ ಹಕ್ಕುಗಳ ಬಹುಮಾನಗಳು ಮತ್ತು ಗುರುತಿಸುವಿಕೆಯು ಮಾನವ ಹಕ್ಕುಗಳ ರಕ್ಷಕರಿಗೆ ಬೆಂಬಲದ ಪ್ರಮುಖ ರೂಪವಾಗಿದೆ. ಚಿತ್ರದಲ್ಲಿ: 2020 ಮಾರ್ಟಿನ್ ಎನ್ನಲ್ಸ್ ಪ್ರಶಸ್ತಿಯ ಅಂತಿಮ ಸ್ಪರ್ಧಿಗಳು; ಯೆಮನ್‌ನಿಂದ ಹುಡಾ ಅಲ್-ಸರಾರಿ (ಪ್ರಶಸ್ತಿ ವಿಜೇತರು) (ಎಡದಲ್ಲಿ), ಮೆಕ್ಸಿಕೊದಿಂದ ನೋರ್ಮಾ ಲೆಡೆಜ್ಮಾ (ಬಲದಿಂದ ಎರಡನೆಯವರು), ದಕ್ಷಿಣ ಆಫ್ರಿಕಾದಿಂದ ಸಿಜಾನಿ ನ್ಗುಬಾನೆ (ಬಲದಲ್ಲಿ). ಫೋಟೋ: ಬಿ ಮಾರ್ಟಿನ್ ಎನಾಲ್ಸ್ ಫೌಂಡೇಶನ್.

# ಪರಿಚಯ

1988 ರಿಂದ, ನಾರ್ವೇಜಿಯನ್ ಹ್ಯೂಮನ್ ರೈಟ್ಸ್ ಫಂಡ್ (ಎನ್‌ಹೆಚ್‌ಆರ್‌ಎಫ್) ಅಂತಾರಾಷ್ಟ್ರೀಯ ಮಟ್ಟದಲ್ಲಿ ಮಾನವ ಹಕ್ಕಗಳನ್ನು ಉತ್ತೇಜಿಸುವ ಆದೇಶದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿದೆ. ತುಳಿತಕ್ಕೊಳಪಟ್ಟ ಮತ್ತು ದುರ್ಬಲ ಗುಂಪುಗಳ ಹಕ್ಕುಗಳ ರಕ್ಷಣೆ ಮತ್ತು ಉತ್ತೇಜನಕ್ಕಾಗಿ ಮುಂಚೂಣಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ತಳಮಟ್ಟದ ಸಂಸ್ಥೆಗಳಿಗೆ ನಾವು ನೇರವಾದ ಆರ್ಥಿಕ ಬೆಂಬಲವನ್ನು ನೀಡುವ ಮೂಲಕ ಇದನ್ನು ಮಾಡುತ್ತಿದ್ದೇವೆ. ನಮ್ಮ ಬೆಂಬಲವು ನೇರವಾಗಿ ಮಾನವ ಹಕ್ಕುಗಳ ವಿಷಯದ ಎಲ್ಲಾ ಕ್ಷೇತ್ರಗಳಿಗೆ ಮತ್ತು ಮಾನವ ಹಕ್ಕುಗಳ ಪರಸ್ಪರ ಸಂಬಂಧಗಳ ಮೂಲಕ ತಲಪುತ್ತದೆ.

ಮಾನವ ಹಕ್ಕುಗಳನ್ನು ಉತ್ತೇಜಿಸುವ ನಿಟ್ಟಿನಲ್ಲಿ ಅನುದಾನ ಪಡೆಯುವ ಸಂಸ್ಥೆಗಳಿಗೆ ಮತ್ತು ಮಾನವ ಹಕ್ಕುಗಳ ರಕ್ಷಕರಿಗೆ (ಹೆಚ್‌ಆರ್‌ಡಿಗಳಿಗೆ), ಭದ್ರತೆ, ರಕ್ಷಣೆ ಮತ್ತು ಸೂಕ್ತ ಕಾರ್ಯಸ್ಥಳದ ಪರಿಸ್ಥಿಗಳಿಗೆ ಕೇಂದ್ರೀಕೃತವಾಗಿದೆ: ಏಕೆಂದರೆ ಇವು ಅವರು ತಮ್ಮ ಕಾರ್ಯವನ್ನು ನಿರ್ವಹಿಸಲು ಅಗತ್ಯವಾದ ಅವಶ್ಯಕತೆಗಳಾಗಿದೆ. ಎನ್‌ಹೆಚ್‌ಆರ್‌ಎಫ್ ವ್ಯಯಕ್ತಿಕ ಮತ್ತು ಸಾಂಸ್ಥಿಕ ಮಟ್ಟದಲ್ಲಿ ಭದ್ರತೆ ಮತ್ತು ರಕ್ಷಣೆಯ ಮಹತ್ವವನ್ನು ಒತ್ತಿ ಹೇಳುತ್ತದೆ ಮತ್ತು ನಮ್ಮ ಕಾರ್ಯತಂತ್ರದ ಪ್ರಮುಖ ಅಂಶವಾಗಿ ತನ್ನ ಗಮನವನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ಮುಂದುವರಿಸುತ್ತದೆ. ನಮ್ಮ ಪ್ರಸ್ತುತ ಕಾರ್ಯತಂತ್ರದ ಪ್ರಯತ್ನಗಳು ಹೆಚ್‌ಆರ್‌ಡಿಗಳು ತಮ್ಮ ರಕ್ಷಣೆಯನ್ನು ಕಾಪಾಡಿಕೊಳ್ಳುವ ನಿಟ್ಟಿನಲ್ಲಿ ತಮ್ಮ ಸಾಮರ್ಥ್ಯವನ್ನು ಹೆಚ್ಚಿಸುವಲ್ಲಿ ಕಾರ್ಯನಿರ್ವಹಿಸುತ್ತಿರುವ ನವೀನ ಪ್ರಯತ್ನಗಳನ್ನು ಮತ್ತು ಸಂಸ್ಥೆಗಳನ್ನು ಬೆಂಬಲಿಸುವಲ್ಲಿ ನಿರ್ದೇಶಿಸುತ್ತದೆ ಮತ್ತು ಸ್ಥಳೀಯ ಮಾನವ ಹಕ್ಕುಗಳ ರಕ್ಷಕರನ್ನು ರಾಷ್ಟೀಯ ಮತ್ತು ಅಂತಾರಾಷ್ಟ್ರೀಯ ಜಾಲಬಂಧಗಳಿಗೆ (ನೆಟ್ವರ್ಕ್) ಸಂಪರ್ಕವನ್ನು ಹೊಂದಿಸುತ್ತ ಅವರು ಇನ್ನು ಹೆಚ್ಚಾಗಿ ಗುರುತಿಳಿಸಿಕೊಳ್ಳಲು, ತಮ್ಮ ಕಾರ್ಯವನ್ನು ವರ್ಧಿಸಲು ಮತ್ತು ತಮ್ಮ ಪ್ರಭಾವವನ್ನು ಹೆಚ್ಚಿಸಿಕೊಳ್ಳಲು ಅನುವುಮಾಡುತ್ತದೆ.

ಈ ಮಾರ್ಗಸೂಚಿಗಳು ಅನುದಾನ ಪಡೆಯುವವರಿಗೆ ಮತ್ತು ಹೆಚ್‌ಆರ್‌ಡಿಗಳಿಗೆ ಸುರಕ್ಷತೆ ಮತ್ತು ರಕ್ಷಣೆಯನ್ನು ಹೆಚ್ಚಿಸುವ ನಮ್ಮ ಕಾರ್ಯತಂತ್ರದ ಪ್ರಯತ್ನಗಳ ಒಂದು ಭಾಗವಾಗಿದೆ, ಮತ್ತು ಮಾನವ ಹಕ್ಕುಗಳ ಕ್ಷೇತ್ರವು ಇನ್ನೂ ವಿಕಸನಗೊಳ್ಳುತ್ತಾ ಮತ್ತು ಬದಲಾಗುತ್ತಾ ಹೋಗುವಾಗ, ನಾವು ಕೂಡ ನಮ್ಮ ತಳಹದಿಯನ್ನು ನಿರ್ವಹಿಸುವ ನಿಟ್ಟಿನಲ್ಲಿ, ಕಾರ್ಯಪ್ರವೃತ್ತರಾಗಿ ಮುಂದುವರಿಯುವುದು ಮತ್ತು ಬುದ್ದಿವಂತಿಕೆಯಿಂದ ಮತ್ತು ಉದ್ದೇಶಪೂರ್ವಕವಾಗಿ ಪ್ರತಿಕ್ರಯಿಸುವಂತಿರಬೇಕು. ಆದ್ದರಿಂದ, ಈ ಕ್ಷೇತ್ರದಲ್ಲಿ ನುರಿತ ಹೊಸ ಪ್ರಮುಖ ಸಹಭಾಗಿ ಸಂಸ್ಥೆಗಳೊಂದಿಗೆ ಮತ್ತು ನಮ್ಮ ಹಿಂದಿನ ಸಂಚಿಕೆಯನ್ನು ಪ್ರಕಟಿಸಿದಾಗಿನಿಂದ ನಾವು ಪಡೆದುಕೊಂಡ ಕಲಿಕೆಗಳಿಂದ ಕಾರ್ಯಕ್ಷೇತ್ರದಲ್ಲಿನ ಅನುದಾನ ಪಡೆಯುವವರಿಗೆ ಭದ್ರತೆಯ ಮತ್ತು ರಕ್ಷಣೆಯ ಬಗೆಗಿನ ಎನ್‌ಹೆಚ್‌ಆರ್‌ಎಫ್ ಮಾರ್ಗಸೂಚಿಗಳನ್ನು ಪರಿಷ್ಕರಿಸಲು ಮತ್ತು ಪರಿಶೀಲಿಸಲು ನಾವು ಅವಕಾಶವನ್ನು ಪಡೆದುಕೊಂಡಿದ್ದೇವೆ.

ಮಾನವ ಹಕ್ಕುಗಳ ರಕ್ಷಕರು ಮತ್ತು ಸಂಸ್ಥೆಗಳ ರಕ್ಷಣೆಯ ಬಗ್ಗೆ ಕಾರ್ಯನಿರ್ವಹಿಸುವ ಪರಿಣತಿ ಹೊಂದಿರುವ ಮತ್ತು ಅಮೂಲ್ಯವಾದ ಅನುಭವವನ್ನು ಹೊಂದಿರುವ ಸಾಕಷ್ಟು ಸ್ಥಾಪಿತ ಅಂತಾರಾಷ್ಟ್ರೀಯ ಸಂಸ್ಥೆಗಳು ಮತ್ತು ಪಾತ್ರಧಾರಿಗಳು ಇದ್ದಾರೆ, ಆದರೆ ನಮ್ಮ ಮಾರ್ಗಸೂಚಿಗಳು ಈ ಎಲ್ಲಾ ಸಂಸ್ಥೆಗಳ ಕಾರ್ಯವನ್ನು ಬದಲಿಸಲಿಕ್ಕಾಗಿ ಉದ್ದೇಶಿಸುವುದಿಲ್ಲ. ಬದಲಿಗೆ, ನೀವು ಕಾರ್ಯನಿರ್ವಹಿಸುವ ಮಾನವ ಹಕ್ಕುಗಳ ಸಂಸ್ಥೆ ಮತ್ತು ಮಾನವ ಹಕ್ಕುಗಳ ರಕ್ಷಕರಾಗಿರುವ ನಿಮಗೆ ರಕ್ಷಣೆ ಮತ್ತು ಬೆಂಬಲದ ಬಗ್ಗೆ ಎನ್‌ಹೆಚ್‌ಆರ್‌ಎಫ್‌ನ ಒಟ್ಟಾರೆ ಕೆಲಸಕ್ಕೆ ಸಂಬಂಧಿತ ಚೌಕಟ್ಟನ್ನು ಈ ಮಾರ್ಗಸೂಚಿಗಳು ವಿವರಿಸುತ್ತದೆ ಮತ್ತು ಅಪಾಯದಲ್ಲಿರುವ ರಕ್ಷಕರಿಗೆ ಲಭ್ಯವಿರುವ ಬೆಂಬಲ ಕಾರ್ಯವಿಧಾನಗಳ ಬಗ್ಗೆ ಕೆಲವು ಮೇಲ್ನೋಟವನ್ನು ನೀಡುತ್ತದೆ. ಇದಲ್ಲದೆ, ಭದ್ರತೆಯ ಸಮಸ್ಯೆಗಳನ್ನು ಪರಿಹರಿಸುವ ಮತ್ತು ಸಂವಹನ ಮಾಡುವ ನಿಟ್ಟಿನಲ್ಲಿ ನಮ್ಮ ಅನುದಾನ ಪಡೆಯುವವರಿಗೆ, ನಮ್ಮ ಸ್ಥಳೀಯ ಸಲಹೆಗಾರರಿಗೆ ಮತ್ತು ನಮ್ಮದೇ ಆದ ಎನ್‌ಹೆಚ್‌ಆರ್‌ಎಫ್ ಸಚಿವಾಲಯಕ್ಕೆ, ನೀವು ವಹಿಸಬೇಕಾಗುವ ಪಾತ್ರ ಮತ್ತು ಜವಾಬ್ದಾರಿಗಳ ರೂಪುರೇಷೆಗಳನ್ನು ಈ ಮಾರ್ಗಸೂಚಿಯು ವಿವರಿಸುತ್ತದೆ. ಮುಂಚೂಣಿಯಲ್ಲಿರುವ ರಕ್ಷಕರ ಅನುಮತಿ ಮತ್ತು ಉದಾರ ಸಹಾಯದಿಂದ ವ್ಯಯಕ್ತಿಕ ಮತ್ತು ಸಾಂಸ್ಥಿಕ ಭದ್ರತೆಯ ಪಥ್ಯದಲ್ಲಿ ಮಾನವ ಹಕ್ಕುಗಳ ರಕ್ಷಕರಿಗೆ ಭದ್ರತೆಯ ಬಗೆಗಿನ ಕಾರ್ಯವನ್ನು ಸಕ್ರಿಯವಾಗಿ ಉಲ್ಲೇಖಿಸುತ್ತಿದ್ದೇವೆ ಮತ್ತು ನಿಮ್ಮ ಕೆಲಸದಲ್ಲಿ ಮುಂಚೂಣಿಯಲ್ಲಿರುವ ರಕ್ಷಕರ ಕಾರ್ಯಪುಸ್ತಕವನ್ನು ['Front Line Defenders workbook] ಸಕ್ರಿಯವಾಗಿ ಬಳಸಲು ನಾವು ನಿಮಗೆ ಪ್ರೋತ್ಸಾಹಿಸುತ್ತೇವೆ. https://bit.ly/2xUmhdj [2]

2 ರಕ್ಷಣೆಯ ಬಗೆಗಿನ ಕಾರ್ಯಪುಸ್ತಕ: ಅಪಾಯದಲ್ಲಿರುವ ಮಾನವ ಹಕ್ಕುಗಳ ಪ್ರತಿಪಾದಕರಿಗೆ ಪ್ರಯೋಗಿಕ ನಡೆಗಳು
https://bit.ly/2xUmhdj



**ಮಾನವ ಹಕ್ಕುಗಳ ಪ್ರತಿಪಾದಕರ ಮತ್ತು ಸಂಸ್ಥೆಗಳ ಕೆಲಸವನ್ನು ಬಲಪಡಿಸಲು ಜಾಲಬಂಧಗಳನ್ನು (ನೆಟ್ವರ್ಕ್) ಬಲಪಡಿಸುವುದು ಮತ್ತು ಪರಸ್ಪರ ಸೇರುವ ಸಭೆ ಸ್ಥಳಗಳನ್ನು ಕಂಡುಹಿಡಿಯುವುದು ಪ್ರಮುಖವಾಗಿದೆ.**




2018 ರಲ್ಲಿ ಬಾಲಿಯಲ್ಲಿ ನಡೆದ 8ನೇ ಏಷ್ಯಾ ಮಾನವ ಹಕ್ಕುಗಳ ಪ್ರತಿಪಾದಕರ ವೇದಿಕೆಯ ಗುಂಪು ಚಿತ್ರ.



# ಗುರಿ ಮತ್ತು ಉದ್ದೇಶಗಳು

ತಮ್ಮ ಮಾನವ ಹಕ್ಕುಗಳ ಕೆಲಸದ ಸ್ವರೂಪದಿಂದ ಅಪಾಯದಲ್ಲಿರುವ ವ್ಯಕ್ತಿಗಳು ಮತ್ತು ಸಂಸ್ಥೆಗಳಿಗೆ ಬೆಂಬಲ ನೀಡಲು ಎನ್‌ಹೆಚ್‌ಆರ್‌ಎಫ್ ಸಕಾರಾತ್ಮಕ ಕೊಡುಗೆಯನ್ನು ನೀಡುವ ಗುರಿಯನ್ನು ಹೊಂದಿದೆ. ಪ್ರಮುಖವಾಗಿ, ನಿಮ್ಮ ಕಾರ್ಯದಲ್ಲಿ ನಿರತರಾಗಿರುವ ಇತರ ಕುಟುಂಬ ಸದಸ್ಯರನ್ನು ಮತ್ತು ಸ್ಥಳೀಯ ಸಮುದಾಯಗಳನ್ನು ಒಳಗೊಂಡಂತೆ ಹಾಗೂ ನಿಮ್ಮ ಕೆಲಸದಲ್ಲಿ ನಿರತರಾದ ಜನರು ಮತ್ತು ಮಾನವ ಹಕ್ಕುಗಳ ರಕ್ಷಕರು, ಸ್ವಯಂಸೇವಕರು, ಸಂಸ್ಥೆಯ ಎಲ್ಲಾ ಸಿಬ್ಬಂದಿಗಳನ್ನು ಒಳಗೊಂಡಂತೆ ನಿಮ್ಮ ತರಿತ ಜಾಲಬಂಧಗಳಿಗೆ (ನೆಟ್ವರ್ಕ್ಸ್) ಮತ್ತು ನಮ್ಮ ಅನುದಾನ ಪಡೆಯುವ ನಿಮಗೆ ನಮ್ಮ ಬೆಂಬಲವು ನಿರ್ದೇಶಿತಗೊಂಡಿದೆ. ಅರ್ಥಪೂರ್ಣ ಮತ್ತು ಪರಿಣಾಮಕಾರಿ ಮಾನವ ಹಕ್ಕುಗಳ ಕಾರ್ಯವನ್ನು ನಿರ್ವಹಿಸುವಲ್ಲಿ ಅದರಲ್ಲೂ ವಿಶೇಷವಾಗಿ ಪ್ರಸ್ತುತ ಸುರಕ್ಷತೆ ಮತ್ತು ತುರ್ತು ಕಾಳಜಿಯ ಸಂದರ್ಭಗಳಲ್ಲಿ ನಿಮ್ಮ ಸಾಮರ್ಥ್ಯವನ್ನು ನಾವು ಬೆಂಬಲಿಸಲು ಬಯಸುತ್ತೇವೆ.

**ಉದ್ದೇಶಗಳನ್ನು ಈ ಕೆಳಗೆ ಪಟ್ಟಿ ಮಾಡಿದಂತೆ, ಈ ಕ್ಷೇತ್ರದಲ್ಲಿ ನಮ್ಮ ಕಾರ್ಯವು ತಡೆಗಟ್ಟುವ ಮತ್ತು ಸ್ಪಂದಿಸುವ ಎರಡು ಗುರಿಗಳನ್ನು ಹೊಂದಿವೆ. ನಮ್ಮ ಗುರಿಯು:**

ಭದ್ರತೆ ಅಪಾಯಗಳನ್ನು ಎದುರಿಸಲು ಸೂಕ್ತವಾದ ಕಾರ್ಯತಂತ್ರ ಮತ್ತು ಭದ್ರತೆ ಯೋಜನೆಗಳನ್ನು ಅಭಿವೃದ್ಧಿ ಪಡಿಸಲು ಸಂಪನ್ಮೂಲಗಳನ್ನು ನಮ್ಮ ಅನುದಾನ ಪಡೆಯುವವರು ಹೊಂದಿರುವರೆಂದು ಖಾತರಿಪಡಿಸಿಕೊಳ್ಳುವುದು

ನಮ್ಮ ಅನುದಾನ ಪಡೆಯುವವರಿಗೆ ಮಾನವ ಹಕ್ಕುಗಳ ರಕ್ಷಕರ ರಕ್ಷಣೆಯ ಬಗ್ಗೆ ಕಾರ್ಯನಿರ್ವಹಿಸುತ್ತಿರುವ ಸೂಕ್ತ ರಾಷ್ಟೀಯ ಮತ್ತು ಅಂತರಾಷ್ಟೀಯ ರಕ್ಷಕರೊಂದಿಗೆ ಸಂಪರ್ಕವನ್ನು ಕಲ್ಪಿಸುವುದು ಮತ್ತು ಅವರ ಬೆಂಬಲವನ್ನು ಪಡೆಯುವಲ್ಲಿ ಸಹಾಯ

ಭದ್ರತೆ ಸಮಸ್ಯೆಗಳ ಬಗ್ಗೆ ನಮ್ಮ ಅನುದಾನ ಪಡೆಯುವವರ ವಿನಂತಿಗಳಿಗೆ ಸ್ಪಂದಿಸಲು ಅವಶ್ಯವಿರುವ ಸಾಮರ್ಥ್ಯ ಮತ್ತು ಜಾಲಬಂಧವನ್ನು (ನೆಟ್ವರ್ಕ್) ಸ್ಥಳೀಯ ಸಲಹೆಗಾರರು ಮತ್ತು ಎನ್‌ಹೆಚ್‌ಆರ್‌ಎಫ್‌ನ ಸಚಿವಾಲಯವು ಹೊಂದಿದೆ ಎಂಬುವುದನ್ನು ಖಾತರಿಪಡಿಸಿಕೊಳ್ಳುವುದು

**ಅನುದಾನ ಪಡೆಯುವವರ ಭದ್ರತೆಯ ಬಗ್ಗೆ ನಮ್ಮ ಹೆಚ್ಚಿದ ಗಮನದ ಭಾಗವಾಗಿ ಈ ಮಾರ್ಗಸೂಚಿಗಳನ್ನು ಅಭಿವೃದ್ಧಿಪಡಿಸಲಾಗಿದ್ದು, ಇದಕ್ಕಾಗಿ ನಾವು ಈ ಕೆಳಗಿನ ಉದ್ದೇಶಗಳನ್ನು ಹೊಂದಿದ್ದೇವೆ:**

ಅನುದಾನ ಪಡೆಯುವವರಿಗೆ ರಕ್ಷಣಾ ಕಾರ್ಯತಂತ್ರಗಳು ಮತ್ತು ಭದ್ರತೆ ಅಪಾಯಗಳನ್ನು ಹೇಗೆ ತಗ್ಗಿಸಬಹುದು ಎಂಬುದರ ಬಗ್ಗೆ ಅರಿವು ಹೆಚ್ಚಿಸುವುದು

ಅನುದಾನ ಪಡೆಯುವವರಿಗೆ ಪ್ರಮಾಣಕ (ಸಂಬಂಧಿತ) ಚೌಕಟ್ಟಿನ ಬಗ್ಗೆ ಮತ್ತು ಅಪಾಯದಲ್ಲಿರುವ ರಕ್ಷಕರಿಗೆ ಲಭ್ಯವಿರುವ ಬೆಂಬಲದ ಕಾರ್ಯವಿಧಾನಗಳ ಬಗ್ಗೆ ಜ್ಞಾನವನ್ನು ಹೆಚ್ಚಿಸುವುದು

ಮಾನವ ಹಕ್ಕುಗಳ ರಕ್ಷಕರ ಭದ್ರತೆ ಮತ್ತು ರಕ್ಷಣಾ ವಿಷಯಗಳಿಗೆ ಸಂಬಂಧಿತವಾಗಿ ಎನ್‌ಹೆಚ್‌ಆರ್‌ಎಫ್‌ನ ಸಚಿವಾಲಯ, ಸ್ಥಳೀಯ ಸಲಹೆಗಾರರು ಮತ್ತು ನಮ್ಮ ಅನುದಾನ ಪಡೆಯುವವರ ಪಾತ್ರಗಳ ಬಗ್ಗೆ ರೂಪರೇಶೆಗಳನ್ನು ಒದಗಿಸುವುದು.

# ಗುರಿ ಮತ್ತು ಉದ್ದೇಶಗಳು




ಪ್ರತಿಭಟನೆಯ ಮುಖಾಂತರ ಅಭಿವ್ಯಕ್ತಿಸುವ ಮತ್ತು ಸಮಾನ ಹಕ್ಕುಗಳಿಗಾಗಿ ಬೇಡಿಕೆಯಿಡುವ ಅಹಿಂಸಾತ್ಮಕ ವಿಧಾನಗಳು ಮಾನವ ಹಕ್ಕುಗಳ ರಕ್ಷಣೆಗೆ ಕೇಂದ್ರಿತವಾಗಿದೆ. ಇಲ್ಲಿ, ಭಾರತದ ಮಹಿಳಾ ಮಾನವ ಹಕ್ಕುಗಳ ರಕ್ಷಕರು ನ್ಯಾಯಕ್ಕಾಗಿ ಒತ್ತಾಯಿಸುತ್ತಿದ್ದಾರೆ. ಚಿತ್ರ ಸಲ್ಲಿಕೆ: ತೇನ್‌ಮೊಯಿ ಸೌಂದರರಾಜನ್



ಎನ್‌ಹೆಚ್‌ಆರ್‌ಎಫ್ ಅನುದಾನ ಪಡೆಯುವ ಅಸೆಂಬ್ಲಿ ಆಫ್ ದಿ ಪೂವರ್ ಸಂಸ್ಥೆಯ ಆನ್ನಿ ಲ್ಯಾಪಪನ್ ಸುಪಮಂತ, ಇವರು ಥೈಲ್ಯಾಂಡಿನ ಮಾನವ ಹಕ್ಕುಗಳ ರಕ್ಷಕರಾಗಿದ್ದು ಸ್ಥಳೀಯ ಸಮುದಾಯಗಳಿಗೆ ಭೂಮಿ ಮತ್ತು ನೈಸರ್ಗಿಕ ಸಂಪನ್ಮೂಲಗಳ ಹಕ್ಕುಗಳನ್ನು ಬೆಂಬಲಿಸುತ್ತಿದ್ದಾರೆ.

ಮಾನವ ಹಕ್ಕು ರಕ್ಷಕರಿಗೆ ಯಾವುದೇ ಒಂದು ನಿರ್ದಿಷ್ಟ ಸಾರ್ವತ್ರಿಕ ವ್ಯಾಖ್ಯಾನವಿಲ್ಲ, ಆದರೆ ಮಾನವ ಹಕ್ಕುಗಳ ರಕ್ಷಣೆ ಅಥವಾ ಉತ್ತೇಜಿಸುವ ನಿಟ್ಟಿನಲ್ಲಿ ವ್ಯಕ್ತಿಗಳು ಅಥವಾ ಇತರರೊಂದಿಗೆ ಕಾರ್ಯವಹಿಸುವವರನ್ನು ಈ ರೀತಿಯಾಗಿ ಕರೆಯಲಾಗುತ್ತದೆ. ಮಾನವ ಹಕ್ಕುಗಳ ರಕ್ಷಕರು ಯಾವುದೇ ಮಾನವ ಹಕ್ಕುಗಳ ಕಾಳಜಿಯ ವಿಷಯಗಳಾದ ಅನಿಯಂತ್ರಿತ ಬಂಧನ ಮತ್ತು ಸೆರೆಹಿಡಿಯುವಿಕೆ, ಉದ್ಯೋಗಕ್ಕೆ ಸಂಬಂಧಿಸಿದ ಸಮಸ್ಯೆಗಳು, ಭೂಮಿ ಮತ್ತು ಆರೋಗ್ಯ ಸೇವೆಯ ಪಡೆಯುವಿಕೆ ಸಂಬಂಧಿಸಿದ ಹಲವಾರು ಸಮಸ್ಯೆಗಳನ್ನು ಉದ್ದೇಶಿಸಬಹುದು. ಮಾನವ ಹಕ್ಕುಗಳ ರಕ್ಷಕರು ವಿಶ್ವದ ಪ್ರತಿಯೊಂದು ಭಾಗದಲ್ಲಿಯೂ ಕೂಡ ಸಕ್ರಿಯರಾಗಿದ್ದಾರೆ. ನಿಮ್ಮ ಮಾನವ ಹಕ್ಕುಗಳ ಕೆಲಸದ ಸ್ವರೂಪದಿಂದ ಮತ್ತು ನ್ಯಾಯಕ್ಕಾಗಿ ನಿಮ್ಮ ಹೋರಾಟದಲ್ಲಿ ನೀವು ಬಳಸುವ ವಿಧಾನಗಳಿಂದಾಗಿ ಮತ್ತು ನೀವು ಮಾನವ ಹಕ್ಕುಗಳ ರಕ್ಷಕರಾಗಿ ಸಾರ್ವಜನಿಕ ಪಾತ್ರವನ್ನು ವಹಿಸಿಕೊಂಡು ನಿರ್ದಿಷ್ಟ ಮತ್ತು ವಿಶಿಷ್ಟ ಅಪಾಯಗಳನ್ನು ಸಹ ಎದುರಿಸುವುದನ್ನು ಗುರುತಿಸಿ, ಎನ್‌ಹೆಚ್‌ಆರ್‌ಎಫ್ ನಮ್ಮ ಎಲ್ಲ ಅನುದಾನ ಪಡೆಯುವವರನ್ನು ಮಾನವ ಹಕ್ಕುಗಳ ರಕ್ಷಕರೆಂದು ಪರಿಗಣಿಸುತ್ತದೆ.

ಪ್ರತಿಭಟನೆಯ ಮುಖಾಂತರ ಅಭಿವ್ಯಕ್ತಿಸುವ ಮತ್ತು ಸಮಾನ ಹಕ್ಕುಗಳಿಗಾಗಿ ಬೇಡಿಕೆಯಿಡುವ ಅಹಿಂಸಾತ್ಮಕ ವಿಧಾನಗಳು ಮಾನವ ಹಕ್ಕುಗಳ ರಕ್ಷಣೆಗೆ ಕೇಂದ್ರಿತವಾಗಿದೆ. ಇಲ್ಲಿ, ಭಾರತದ ಮಹಿಳಾ ಮಾನವ ಹಕ್ಕುಗಳ ರಕ್ಷಕರು ನ್ಯಾಯಕ್ಕಾಗಿ ಒತ್ತಾಯಿಸುತ್ತಿದ್ದಾರೆ. ಚಿತ್ರ ಸಲ್ಲಿಕೆ: ತೇನ್‌ಮೊಯಿ ಸೌಂದರರಾಜನ್ ಮಾನವ ಹಕ್ಕು ರಕ್ಷಕರಾಗಿ ನಿಮಗೆ ಬೆಂಬಲ ನೀಡಲು ಮತ್ತು ನಿಮ್ಮ ರಕ್ಷಣೆಗಾಗಿ ನಮ್ಮ ಕಾರ್ಯದ ತಳಪಾಯದ ಪ್ರಮಾಣಿತ ಚೌಕಟ್ಟುಗಳಾದ ಸಾರ್ವತ್ರಿಕವಾಗಿ ಗುರುತಿಸಲ್ಪಟ್ಟ ಮಾನವ ಹಕ್ಕುಗಳನ್ನು ಮತ್ತು ಮೂಲಭೂತ ಸ್ವಾತಂತ್ರ್ಯಗಳನ್ನು ಉತ್ತೇಜಿಸಲು ಮತ್ತು ರಕ್ಷಿಸಲು ವ್ಯಕ್ತಿಗಳಿಗೆ, ಗುಂಪುಗಳಿಗೆ ಮತ್ತು ಸಮಾಜದ ಅಂಗಗಳಿಗೆ ಇರುವ ಹಕ್ಕುಗಳ ಮತ್ತು ಜವಾಬ್ದಾರಿಗಳ ಕುರಿತ ಘೋಷಣೆ (1998) – ಇದನ್ನು ಸಾಮಾನ್ಯವಾಗಿ ಮಾನವ ಹಕ್ಕುಗಳ ರಕ್ಷಕರ ಕುರಿತ ವಿಶ್ವ ಸಂಸ್ಥೆಯ (UN) ಘೋಷಣೆ ಎಂದು ಕರೆಯಲಾಗುತ್ತದೆ [United Nations (UN) Declaration on Human Rights Defenders] https://bit.ly/2Qu73C0. ಮಾನವ ಹಕ್ಕುಗಳನ್ನು ರಕ್ಷಿಸುವ ಹಕ್ಕು ಪ್ರತಿಯೊಬ್ಬರಿಗೂ ಇದೆ ಎಂದು ಹೇಳುವ ಮೊದಲ ವಿಶ್ವ ಸಂಸ್ಥೆಯ ಸಾಧನವಾಗಿದ್ದು, ಇದು ಮಾನವ ಹಕ್ಕುಗಳ ರಕ್ಷಕರ ಕೆಲಸದ ಪ್ರಾಮುಖ್ಯತೆ ಮತ್ತು ನ್ಯಾಯಸಮ್ಮತತೆಯನ್ನು ಗುರುತಿಸುತ್ತದೆ ಮತ್ತು ಉತ್ತಮ ರಕ್ಷಣೆಯ ಅವಶ್ಯಕತೆಯನ್ನೂ ಗುರುತಿಸುತ್ತದೆ. ಈ ಘೋಷಣೆಯು ಕಾನೂನು ಬದ್ಧವಾಗಿಲ್ಲದಿದ್ದರು, ಮಾನವ ಹಕ್ಕುಗಳ ರಕ್ಷಕರಿಗೆ ಬಹಳ ಸೂಕ್ತವಾದ ನಾಗರಿಕ ಮತ್ತು ರಾಜಕೀಯ ಹಕ್ಕುಗಳ ಅಂತರರಾಷ್ಟ್ರೀಯ ಒಪ್ಪಂದ (ಐಸಿಸಿಪಿಆರ್) ಮತ್ತು ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಹಕ್ಕುಗಳ ಅಂತರರಾಷ್ಟ್ರೀಯ ಒಪ್ಪಂದ (ಐಸಿಇಎಸ್‌ಆರ್) ಗಳನ್ನು ಒಳಗೊಂಡಂತಹ ಕಾನೂನುಬದ್ಧ ಸಾಧನಗಳ ನಿಬಂಧನೆಗಳನ್ನು ಒಟ್ಟುಗೂಡಿಸುತ್ತದೆ. ಇದಲ್ಲದೆ, ವಿಶ್ವ ಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಒಮ್ಮತದಿಂದ ಈ ಘೋಷಣೆಯನ್ನು ಅಂಗೀಕರಿಸಲಾಗಿದೆ, ಮತ್ತು ಈ ಮೂಲಕ ರಾಷ್ಟೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಮಾನವ ಹಕ್ಕುಗಳ ರಕ್ಷಕರ ಹಕ್ಕುಗಳ ವಿಚಾರವಾಗಿ ಎಲ್ಲಾ ವಿಶ್ವ ಸಂಸ್ಥೆಯ ಸದಸ್ಯ ರಾಷ್ಟ್ರಗಳ ಸ್ಪಷ್ಟ ಬದ್ಧತೆಯನ್ನು ರೂಪಿಸುತ್ತದೆ.

ಎನ್‌ಹೆಚ್‌ಆರ್‌ಎಫ್ ಅನುದಾನ ಪಡೆಯುವ ಅಸೆಂಬ್ಲಿ ಆಫ್ ದಿ ಪೂವರ್ ಸಂಸ್ಥೆಯ ಆನ್ನಿ ಲ್ಯಾಪಪನ್ ಸುಪಮಂತ, ಇವರು ಥೈಲ್ಯಾಂಡಿನ ಮಾನವ ಹಕ್ಕುಗಳ ರಕ್ಷಕರಾಗಿದ್ದು ಸ್ಥಳೀಯ ಸಮುದಾಯಗಳಿಗೆ ಭೂಮಿ ಮತ್ತು ನೈಸರ್ಗಿಕ ಸಂಪನ್ಮೂಲಗಳ ಹಕ್ಕುಗಳನ್ನು ಬೆಂಬಲಿಸುತ್ತಿದ್ದಾರೆ.ಈ ಘೋಷಣೆಯು ಹೊಸ ಹಕ್ಕುಗಳನ್ನು ರಚಿಸುವುದಿಲ್ಲ. ಆದರೆ, ಮಾನವ ಹಕ್ಕುಗಳ ರಕ್ಷಕರ ಪ್ರಾಯೋಗಿಕ ಪಾತ್ರ ಮತ್ತು ಪರಿಸ್ಥಿತಿಗೆ ಅಳವಡಿಸಲು ಸುಲಭಗೊಳಿಸುವ ನಿಟ್ಟಿನಲ್ಲಿ ಅಸ್ತಿತ್ವದಲ್ಲಿರುವ ಹಕ್ಕುಗಳನ್ನು ನಿರೂಪಿಸುತ್ತದೆ. ಈ ಘೋಷಣೆಯು ಮಾನವ ಹಕ್ಕುಗಳ ರಕ್ಷಕರಿಗೆ ನಿರ್ದಿಷ್ಟವಾದ ರಕ್ಷಣೆಯನ್ನು ಒದಗಿಸುತ್ತದೆ. ಉದಾಹರಣೆಗೆ, ರಾಷ್ಟೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಮಾನವ ಹಕ್ಕುಗಳ ಸಂರಕ್ಷಣೆ ಮತ್ತು ಸಾಕ್ಷಾತ್ಕಾರವನ್ನು ಬಯಸುವ ಹಕ್ಕು; ಮಾನವ ಹಕ್ಕು ಕಾರ್ಯವನ್ನು ವ್ಯಯಕ್ತಿಕವಾಗಿ ಮತ್ತು ಇತರರ ಸಹಯೋಗದೊಂದಿಗೆ ನಡೆಸುವುದು; ಸಂಘಟನೆಗಳನ್ನು ಮತ್ತು ಸರ್ಕಾರೇತರ ಸಂಸ್ಥೆಗಳನ್ನು ರೂಪಿಸುದುವು; ಮತ್ತು ಮಾನವ ಹಕ್ಕುಗಳ ರಕ್ಷಣೆಯ ಉದ್ದೇಶಕ್ಕಾಗಿ ಸಂಪನ್ಮೂಲಗಳನ್ನು ಕೋರುವುದು, ಸ್ವೀಕರಿಸುವುದು ಮತ್ತು ಬಳಸುವುದು ಹಾಗೂ ವಿದೇಶದಿಂದ ಹಣಸಹಾಯ ಪಡೆಯುವುದನ್ನು ಒಳಗೊಂಡಿರುತ್ತದೆ.

**ಮಾನವ ಹಕ್ಕುಗಳ ರಕ್ಷಕರ ಬಗ್ಗೆ ವಿಶ್ವಸಂಸ್ಥೆಯ ಘೋಷಣೆ**

ಘೋಷಣೆಯ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಮತ್ತು ವಿವಿಧ ಭಾಷೆಗಳಲ್ಲಿ ಪೂರ್ಣ ವಿಷಯವನ್ನು ಪಡೆಯಲು ಈ ಲಿಂಕ್ ಅನ್ನು ಅನುಸರಿಸಿ: https://bit.ly/2Qu73C0



ಪ್ರತಿಯೊಬ್ಬರಿಗೂ ಕೂಡ ಸಮುದಾಯದ ಪರ ಮತ್ತು ಸಮುದಾಯದ ಒಳಗೆ ಕರ್ತವ್ಯಗಳನ್ನು ಹೊಂದಿದ್ದಾರೆ ಮತ್ತು ಮಾನವ ಹಕ್ಕುಗಳ ರಕ್ಷಕರಾಗಲು ನಮ್ಮೆಲ್ಲರನ್ನು ಪ್ರೋತ್ಸಾಹಿಸುತ್ತಾರೆ ಎಂದು ಘೋಷಣೆಯು ಹೇಳುತ್ತದೆ. ಸಹಿ ಅಭಿಯಾನಕ್ಕಾಗಿ ಕುಟುಂಬಗಳು ಮತ್ತು ಸಮುದಾಯದ ಸದಸ್ಯರು ಒಟ್ಟಿಗೆ ಸೇರಿರುವ ಚಿತ್ರವಾಗಿದೆ. (ಚಿತ್ರ ಸಲ್ಲಿಕೆ: ಎನ್‌ಹೆಚ್‌ಅರ್‌ಎಫ್‌ನ ಅನುದಾನ ಪಡೆಯುವ ಪಾಲುದಾರರು, ಹ್ಯೂಮನ್ ರೈಟ್ಸ್ ಆಫೀಸ್ – ಕ್ಯಾಂಡಿ, ಶ್ರೀಲಂಕಾ)

ಇದಲ್ಲದೆ, ಮಾನವ ಹಕ್ಕುಗಳನ್ನು ಸಂರಕ್ಷಿಸುವ ನಿಟ್ಟಿನಲ್ಲಿ ರಾಷ್ಟ್ರಗಳ ನಿರ್ದಿಷ್ಟ ಕರ್ತವ್ಯಗಳನ್ನು ವಿವರಿಸುತ್ತದೆ. ಮಾನವ ಹಕ್ಕುಗಳನ್ನು ರಕ್ಷಿಸುವವರ ರಕ್ಷಣೆಯನ್ನು ಖಾತ್ರಿಪಡಿಸಿಕೊಳ್ಳಲು ಅಗತ್ಯವಿರುವ ಎಲ್ಲ ಕ್ರಮಗಳನ್ನು ತೆಗೆದುಕೊಳ್ಳುವ ಮುಖ್ಯ ಜವಾಬ್ದಾರಿಯು ರಾಷ್ಟ್ರಗಳದ್ದಾಗಿದೆ ಎಂದು ಅದು ಹೇಳುತ್ತದೆ. ಉದಾಹರಣೆಗೆ ರಾಷ್ಟ್ರದ ಕರ್ತವ್ಯಗಳಾದ ಎಲ್ಲಾ ಮಾನವ ಹಕ್ಕುಗಳ ಭದ್ರತೆ, ಉತ್ತೇಜನ ಮತ್ತು ಅನುಷ್ಠಾನಗಳನ್ನು ಒಳಗೊಂಡಿರುತ್ತದೆ; ಹಕ್ಕುಗಳು ಮತ್ತು ಸ್ವಾತಂತ್ರ್ಯಗಳ ಪರಿಣಾಮಕಾರಿ ಅನುಷ್ಠಾನವನ್ನು ಖಾತ್ರಿಪಡಿಸಿಕೊಳ್ಳಲು ಅಗತ್ಯವಾದ ಶಾಸಕಾಂಗ, ಆಡಳಿತಾತ್ಮಕ ಮತ್ತು ಇತರ ಕ್ರಮಗಳನ್ನು ಅಳವಡಿಸಿಕೊಳ್ಳುವುದು; ಮಾನವ ಹಕ್ಕುಗಳ ಉಲ್ಲಂಘನೆಯ ಪ್ರಕರಣಗಳ ಬಗ್ಗೆ ತ್ವರಿತ ಮತ್ತು ನಿಷ್ಪಕ್ಷಪಾತ ತನಿಖೆಯನ್ನು ನಡೆಸುವುದು; ಮತ್ತು ಮಾನವ ಹಕ್ಕುಗಳ ಉಲ್ಲಂಘನೆಗೆ ಬಲಿಯಾದವರು ಎಂದು ಹೇಳಿಕೊಳ್ಳುವ ವ್ಯಕ್ತಿಗಳಿಗೆ ಪರಿಣಾಮಕಾರಿ ಪರಿಹಾರವನ್ನು ಒದಗಿಸುವುದಾಗಿದೆ. ಪ್ರತಿಯೊಬ್ಬರಿಗೂ ಕೂಡ ಸಮುದಾಯದ ಪರ ಮತ್ತು ಸಮುದಾಯದ ಒಳಗೆ ಕರ್ತವ್ಯಗಳನ್ನು ಹೊಂದಿದ್ದಾರೆಂದು ಮತ್ತು ಮಾನವ ಹಕ್ಕುಗಳ ರಕ್ಷಕರಾಗಲು ನಮ್ಮೆಲ್ಲರನ್ನು ಪ್ರೋತ್ಸಾಹಿಸುವುದು ಎಂದು ಘೋಷಣೆಯು ಒತ್ತಿಹೇಳುತ್ತದೆ. ಕೊನೆಯದಾಗಿ ಇದು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಕಾನೂನುನೊಂದಿಗಿನ ತನ್ನ ಸಂಬಂಧವನ್ನು ಮಾನವ ಹಕ್ಕುಗಳ ಅತ್ಯುನ್ನತ ಕಾನೂನು ಮಾನದಂಡಗಳಿಗೆ ಅನ್ವಯಿಸುವ ಭರವಸೆ ನೀಡುವ ಉದ್ದೇಶವನ್ನು ವಿವರಿಸುತ್ತದೆ.



ಈ ಘೋಷಣೆಯ ಪ್ರಕಾರ, ಮಾನವ ಹಕ್ಕುಗಳ ರಕ್ಷಕರ ಕಾರ್ಯವು ಶಾಂತಿ ಚಟುವಟಿಕೆಗಳ ಮೂಲಕ ಹಮ್ಮಿಕೊಳ್ಳಬೇಕು. ಘೋಷಣೆಯು ಮಾನವ ಹಕ್ಕುಗಳ ರಕ್ಷಣೆಯ ಕಾರ್ಯವು ಒಂದು ಹಕ್ಕಾಗಿದೆ ಮತ್ತು ಎಲ್ಲರು ನ್ಯಾಯಯುತ ಮತ್ತು ಶಾಂತಿಯುತ ರೀತಿಯಲ್ಲಿ ಮಾನವ ಹಕ್ಕುಗಳನ್ನು ಸಂರಕ್ಷಿಸುವುದು, ಅಭಿವೃದ್ಧಿ ಪಡಿಸುವುದು ಮತ್ತು ಉತ್ತೇಜಿಸುವ ಹಕ್ಕನ್ನು ಹೊಂದಿದ್ದಾರೆ ಎಂದು ತಿಳಿಸುತ್ತದೆ. ಈ ಹಕ್ಕುಗಳನ್ನು ಅಭಿವ್ಯಕ್ತಿ ಸ್ವಾತಂತ್ರದ ಹಕ್ಕು, ಸಂಘಟನೆ ಮತ್ತು ಚಳುವಳಿಗೆ ಮತ್ತು ಐಸಿಸಿಪಿಆರ್‌ನಲ್ಲಿ https://bit.ly/2J6VrRj[3] ಕಂಡುಕೊಂಡಂತೆ ಸಾರ್ವಜನಿಕ ವ್ಯವಹಾರಗಳ ಆಯೋಜನನೆಯಲ್ಲಿ ಭಾಗವಹಿಸುವ ಹಕ್ಕುಗಳೊಂದೆಗೆ ಸಂಬಂಧವನ್ನು ಹೊಂದಿರುತ್ತದೆ. ಮಾನವ ಹಕ್ಕುಗಳ ಕಾರ್ಯವನ್ನು ಅರ್ಥಪೂರ್ಣವಾಗಿ ನಡೆಸುವ ನಿಟ್ಟಿನಲ್ಲಿ ಅಭಿವ್ಯಕ್ತಿ ಸ್ವಾತಂತ್ರದ ಮತ್ತು ಸಂಘಟನೆಯು ಹಕ್ಕುಗಳು ಪ್ರಮುಖ ಹಕ್ಕುಗಳಾಗಿವೆ.

2000ದಲ್ಲಿ, ಆಗಿನ ಮಾನವ ಹಕ್ಕುಗಳ ವಿಶ್ವಸಂಸ್ಥೆಯ ಆಯೋಗವು (ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಪರಿಷತ್ತಿನ ಪೂರ್ವಾಧಿಕಾರಿಯು) ಮಾನವ ಹಕ್ಕುಗಳ ರಕ್ಷಕರ ಘೋಷಣೆಯ ಅನುಷ್ಠಾನವನ್ನು ಬೆಂಬಲಿಸಲು ಮಾನವ ಹಕ್ಕು ರಕ್ಷಕರ (ಒಂದು ವಿಶೇಷ ಕಾರ್ಯವಿಧಾನವಾಗಿ) ಪರಿಸ್ಥಿತಿಯ ಬಗ್ಗೆ ಒಂದು ಆದೇಶವನ್ನು ಸ್ಥಾಪಿಸಿತು.

ಹಲವು ವರ್ಷಗಳಿಂದ ವಿಶ್ವಸಂಸ್ಥೆಯ ಮಾನವ ಹಕ್ಕು ಪರಿಷತ್ತಿನಿಂದ [UN Human Rights Council][4] ಮಾನವ ಹಕ್ಕುಗಳ ರಕ್ಷಕರ ವಿಚಾರವಾಗಿ ಹಲವಾರು ನಿರ್ಣಯಗಳನ್ನು ಅಂಗೀಕರಿಸಲಾಗಿದ್ದು, ಈ ನಿರ್ಣಯಗಳಲ್ಲಿ ಪ್ರಮುಖವಾದ ನಿರ್ಣಯ 25/18/ [Resolution25/18] https://bit.ly/2wbV9WN 28 ಮಾರ್ಚ್ 2004 ರಂದು ಅಂಗೀಕರಿಸಲಾದ ನಿರ್ಣಯವು ಒಳಗೊಂಡಿರುತ್ತದೆ. ಈ ನಿರ್ಣಯವು ಮಾನವ ಹಕ್ಕುಗಳ ರಕ್ಷಕರು ಎದುರಿಸುತ್ತಿರುವ ಬೆದರಿಕೆಗಳು, ದಾಳಿಗಳು ಮತ್ತು ಪ್ರತೀಕಾರಗಳಂತಹ ಅಪಾಯಗಳ ಬಗ್ಗೆ ಪರಿಷತ್ತು ತನ್ನ ಕಾಳಜಿಯನ್ನು ವ್ಯಕ್ತಪಡಿಸುತ್ತದೆ ಮತ್ತು ರಾಷ್ಟ್ರೀಯ ಕಾನೂನುಗಳು ಮತ್ತು ನೀತಿಗಳು ಮಾನವ ಹಕ್ಕುಗಳ ರಕ್ಷಕರ ಕಾರ್ಯವನ್ನು ಬೆಂಬಲಿಸುವಂತೆ ಮತ್ತು ಸಕ್ರೀಯಗೊಳಿಸುವಂತೆ ಮತ್ತು ಅಂತರರಾಷ್ಟ್ರೀಯ ಮಾನವ ಹಕ್ಕುಗಳ ಕಾನೂನಿಗೆ ಅನುಗುಣವಾಗಿರುತ್ತವೆ ಎಂಬುವುದನ್ನು ಖಚಿತಪಡಿಕೊಳ್ಳವಂತೆ ರಾಷ್ಟ್ರಗಳಿಗೆ ಕರೆ ನೀಡುತ್ತದೆ. ಈ ನಿರ್ಣಯದೊಂದಿಗೆ, ಮಾನವ ಹಕ್ಕುಗಳ ಪರಿಷತ್ತು ಮಾನವ ಹಕ್ಕುಗಳ ರಕ್ಷಕರ ಪರಿಸ್ಥಿತಿಯ ಬಗ್ಗೆ ವಿಶೇಷ ವರದಿಗಾರರ ಆದೇಶವನ್ನು ಸತತ ಮೂರೂ ವರ್ಷಗಳ ಕಾಲಕ್ಕೆ ನವೀಕರಿಸಲು ನಿರ್ಧರಿಸಿತು. (ಹೆಚ್ಚಿನ ಮಾಹಿತಿಗಾಗಿ, 35ನೇ ಪುಟದಲ್ಲಿನ ಮಾನವ ಹಕ್ಕು ರಕ್ಷಕರಿಗೆ ಸೂಕ್ತ ವಿಶ್ವಸಂಸ್ಥೆಯ ಕಾರ್ಯವಿಧಾನಗಳ (Relevant UN mechanisms for human rights defenders) ವಿಭಾಗವನ್ನು ನೋಡಿ)



ಮಾನವ ಹಕ್ಕುಗಳ ಕಾರ್ಯವನ್ನು ಅರ್ಥಪೂರ್ಣವಾಗಿ ನಡೆಸಲು ಮುಖ್ಯವಾಗಿ ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಸಂಘಟನೆಯ ಹಕ್ಕುಗಳು ಪ್ರಮುಖ ಹಕ್ಕುಗಳಾಗಿವೆ. ಚಿತ್ರ: ಮೆಕ್ಸಿಕೊದಲ್ಲಿ ನಡೆದ ಪ್ರದರ್ಶನ

3 ನಾಗರಿಕ ಮತ್ತು ರಾಜಕೀಯ ಹಕ್ಕುಗಳ ಅಂತರರಾಷ್ಟ್ರೀಯ ಒಪ್ಪಂದ https://bit.ly/2J6VrRj

4 ಎ/ಹೆಚ್‌ಆರ್‌ಸಿ/ಆರ್‌ಇಸಿ/25/18 https://bit.ly/2wbV9WN



ಮಾನವ ಹಕ್ಕುಗಳನ್ನು ರಕ್ಷಿಸುವ ಕಾರ್ಯವು ಒಂದು ಹಕ್ಕು ಮತ್ತು ಎಲ್ಲರು ನ್ಯಾಯಯುತ ಮತ್ತು ಶಾಂತಿಯುತ ರೀತಿಯಲ್ಲಿ ಮಾನವ ಹಕ್ಕುಗಳನ್ನು ಸಂರಕ್ಷಿಸುವುದು, ಅಭಿವೃದ್ಧಿ ಪಡಿಸುವುದು ಮತ್ತು ಉತ್ತೇಜಿಸುವ ಹಕ್ಕನ್ನು ಹೊಂದಿದ್ದಾರೆ ಎಂದು ಘೋಷಣೆಯು ಸ್ಪಷ್ಟವಾಗಿ ಹೇಳುತ್ತದೆ. ಚಿತ್ರ: ಥೈಲ್ಯಾಂಡಿನ ಎನ್‌ಹೆಚ್‌ಆರ್‌ಎಫ್ ಅನುದಾನ ಪಡೆಯುವ ಪಾಲುದಾರರಿಂದ ಮಾನವ ಹಕ್ಕುಗಳ ರಕ್ಷಕರು




ಮಾನವ ಹಕ್ಕುಗಳ ರಕ್ಷಕರು ನಾಗರಿಕ ಸಮಾಜದ ಅವಿಭಾಜ್ಯ ಅಂಗವಾಗಿದ್ದಾರೆ ಮತ್ತು ಈ ಗುಂಪಿನೊಳಗಿನ ಎಲ್ಲಾ ಪಾತ್ರಧಾರಿಗಳಿಗೆ ತಮ್ಮ ಹಕ್ಕುಗಳನ್ನು ಚಲಾಯಿಸಲು ಸುರಕ್ಷಿತ ಮತ್ತು ಪೂರಕವಾದ ಸ್ಥಳಗಳನ್ನು ಮತ್ತು ರಕ್ಷಣೆಯನ್ನು ಒದಗಿಸುವ ಜವಾಬ್ದಾರಿಯನ್ನು ರಾಜ್ಯಗಳು ಹೊಂದಿವೆ. ಚಿತ್ರ: ಭಾರತದಲ್ಲಿ ಕೌಟುಂಬಿಕ ಕಾರ್ಮಿಕರ ಪ್ರದರ್ಶನ. – ಕೆ.ಜಿ.ಎಫ್. – ಡಬ್ಲ್ಯು.ಎ.

ಇತರ ಪ್ರಮುಖ ನಿರ್ಣಯಗಳಲ್ಲಿ ವಿಶ್ವಸಂಸ್ಥೆಯ ಸಾಮನ್ಯ ಸಭೆಯು ಡಿಸೆಂಬರ್ 2013ರ ಮಹಿಳಾ ಮಾನವ ಹಕ್ಕುಗಳ ರಕ್ಷಕರ ರಕ್ಷಣೆ ನಿರ್ಣಯ 68/181 [Resolution 68/181] https://bit.ly/2xLOF11 ಮತ್ತು ಮಾನವ ಹಕ್ಕುಗಳ ಪರಿಷತ್ತಿನ ಎಪ್ರಿಲ್ 2016ರ ನಿರ್ಣಯವು31/32 [Resolution 31/32] https://bit.ly/2U24k58 ಅಂಗೀಕರಿಸಿರುವ ಗುರುತರವಾದ ನಿರ್ಣಯಗಳಾಗಿವೆ, ಅಲ್ಲದೇ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಹಕ್ಕುಗಳನ್ನು ಉದ್ದೇಶಿರುವ ಮೂಲಕ ಜೊತೆಗೆ ಸುರಕ್ಷಿತ ಮತ್ತು ಪೂರಕ ವಾತಾವರಣವನ್ನು ನಿರ್ಮಿಸುವ ಮೂಲಕ ರಕ್ಷಕರ ರಕ್ಷಣೆಯ ಜವಾಬ್ದಾರಿಯನ್ನು ರಾಷ್ಟ್ರಗಳಿಗೆ ಕರೆ ನೀಡಿತ್ತು. 2018ರಲ್ಲಿ ಮಾನವ ಹಕ್ಕು ರಕ್ಷಕರ ಘೋಷಣೆಯ 20ನೇ ವಾರ್ಷಿಕೋತ್ಸವ ಆಚರಿಸಲು, ಅದರ ಪ್ರಚಾರ ಮತ್ತು ಅನುಷ್ಠಾನವನ್ನು ಉತ್ತೇಜಿಸಲು ಹಲವಾರು ಚಟುವಟಿಕೆಗಳ ರೂಪರೇಷಗಳಿಗಾಗಿ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯು ಅಂಗೀಕರಿಸಿದ 2017ರ ನಿರ್ಣಯವು [2017 resolution] https://bit.ly/2Uqglel ಮತ್ತೊಂದು ಪ್ರಮುಖ ಮೂಲವಾಗಿದೆ. [7]

ಮಾನವ ಹಕ್ಕುಗಳ ರಕ್ಷಕರನ್ನು ನಾಗರಿಕ ಸಮಾಜದ ಭಾಗವೆಂದು ಮತ್ತು ಈ ಗುಂಪಿನೊಳಗಿನ ಎಲ್ಲ ಪಾತ್ರಧಾರಿಗಳಿಗೆ ತಮ್ಮ ಹಕ್ಕುಗಳನ್ನು ಚಲಾಯಿಸಲು ರಕ್ಷಣೆಯನ್ನು ಮತ್ತು ಗೊತ್ತುಪಡಿಸಿದ ಮತ್ತು ಪೂರಕ ಪರಿಸರದ ಅವಶ್ಯಕತೆಯನ್ನು ಗುರುತಿಸುತ್ತ, ಇತ್ತೀಚಿನ ವಿಶ್ವಸಂಸ್ಥೆಯ ನಿರ್ಣಯಗಳು ಮತ್ತು ವರದಿಗಳು ಈ ಸಂಬಂಧವನ್ನು "ಬಹುತ್ವವಾದಿ ಪ್ರಜಾಪ್ರಭುತ್ವಗಳನ್ನು ನಿರ್ಮಿಸಲು, ಶಾಂತಿಯುತ ಸಂವಾದವನ್ನು ರಚಿಸಲು ಮತ್ತು ಮಾನವ ಹಕ್ಕುಗಳನ್ನು ಉತ್ತೇಜಿಸಲು ನಾಗರೀಕ ಸಮಾಜ ಮತ್ತು ಮಾನವ ಹಕ್ಕುಗಳ ರಕ್ಷಕರ ಮೂಲಭೂತ ಕೊಡುಗೆ" ಎಂದು ಅಂಗೀಕರಿಸುವ ಮೂಲಕ ತಿಳಿಸಿವೆ ಮತ್ತು ಎಲ್ಲ ವ್ಯಕ್ತಿಗಳ ನಾಗರೀಕ, ರಾಜಕೀಯ, ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಹಕ್ಕುಗಳನ್ನು ಪೂರ್ಣವಾಗಿ ಸಂರಕ್ಷಿಸಲು ಮತ್ತು ಗೌರವಿಸುವ ಭಾದ್ಯತೆಯನ್ನು ಆನ್‌ಲೈನ್ ಮತ್ತು ಆಫ್‌ಲೈನ್‌ನಲ್ಲಿ ಅನ್ವಯವಾಗುವಂತೆ, ಇತರ ವಿಷಯಗಳ ನಡುವೆ, ಕಲಾತ್ಮಕ ಅಭಿವ್ಯಕ್ತೆ ಮತ್ತು ಸೃಜನಶೀಲತೆಯನ್ನು ಒಳಗೊಂಡಂತೆ ಅಭಿವ್ಯಕ್ತಿ ಮತ್ತು ಅಭಿಪ್ರಾಯದ ಸ್ವಾತಂತ್ರ್ಯದ ಹಕ್ಕು ಮತ್ತು ಶಾಂತಿಯುತವಾಗಿ ಒಂದೆಡೆ ಸೇರುವ ಮತ್ತು ಮುಕ್ತವಾಗಿ ಸಂಯೋಜಿಸುವ ಹಕ್ಕುಗಳನ್ನು ಪೂರೈಸಲು ರಾಷ್ಟ್ರಕ್ಕೆ ಕರೆ ನೀಡಿವೆ;" ಇಂತಹ ಸ್ಥಳೀಯ ಮತ್ತು ಅಂತರರಾಷ್ಟ್ರೀಯ ವಕಾಲತ್ತುಗಳು ಅಂತರರಾಷ್ಟ್ರೀಯ ಮಟ್ಟದಲ್ಲಿ ಕಾನೂನುಬದ್ಧ ಕಟ್ಟುಪಾಡುಗಳನ್ನು ಹೊಂದಿವೆ ಮತ್ತು ಅನೇಕರಿಗೆ, ದೇಶೀಯ ಕಾನೂನುಗಳು ಕೇವಲ ನಾಗರಿಕ ಸಮಾಜದ ಪಾತ್ರಧಾರಿಗಳಿಗೆ ಮತ್ತು ಮಾನವ ಹಕ್ಕುಗಳ ರಕ್ಷಕರನ್ನು ರಕ್ಷಿಸುವುದು ಮಾತ್ರವಲ್ಲದೆ ಪೂರಕ ವಾತಾವರಣವನ್ನು ರಚಿಸುವ ಮೂಲಕ ಅವರ ಸಕ್ರಿಯ ಭಾಗವಹಿಸುವಿಕೆಯನ್ನು ಉತ್ತೇಜಿಸಲು ರಾಷ್ಟ್ರಗಳಿಗೆ ನಿಶ್ಚಿತ ಅರಿವನ್ನು ತಂದಿದೆ.

---

5 ಜನರಲ್ ಅಸ್ಸೆಂಬ್ಲಿ ನಿರ್ಣಯ https://bit.ly/2xLOF11
6 ಹ್ಯೂಮನ್ ರೈಟ್ಸ್ ಕೌಂಸಿಲ್ ನಿರ್ಣಯ https://bit.ly/2U24k58
7 ಸಾರ್ವತ್ರಿಕವಾಗಿ ಗುರುತಿಸಲ್ಪಟ್ಟ ಮಾನವ ಹಕ್ಕುಗಳು ಮತ್ತು ಮೂಲಭೂತ ಸ್ವಾತಂತ್ರ್ಯಗಳನ್ನು ಉತ್ತೇಜಿಸಲು ಮತ್ತು ರಕ್ಷಿಸಲು ವ್ಯಕ್ತಿಗಳು, ಗುಂಪುಗಳು ಮತ್ತು ಸಮಾಜದ ಅಂಗಗಳ ಹಕ್ಕು ಮತ್ತು ಜವಾಬ್ದಾರಿ ಕುರಿತು ಘೋಷಣೆಯ ಇಪ್ಪತ್ತನೇ ವಾರ್ಷಿಕೋತ್ಸವ ಮತ್ತು ಪ್ರಚಾರ https://bit.ly/2Uqglel
8 ಎ/ಹ್ಯೂಮನ್ ರೈಟ್ಸ್ ಕೌಂಸಿಲ್/ ನಿರ್ಣಯ/38/12 https://bit.ly/2Qx2G9l
9 ಎ/ಹ್ಯೂಮನ್ ರೈಟ್ಸ್ ಕೌಂಸಿಲ್/32/20 https://bit.ly/2xLOW43



# ವೈಯಕ್ತಿಕ ಮತ್ತು ಸಾಂಸ್ಥಿಕ ಭದ್ರತೆ

## ಭದ್ರತೆಯ ಬಗ್ಗೆ ಯೋಚನೆ

ಮಾನವ ಹಕ್ಕುಗಳನ್ನು ರಕ್ಷಿಸುವುದು ಮತ್ತು ಉತ್ತೇಜಿಸುವುದು ರಾಷ್ಟ್ರದ ಪ್ರಮುಖ ಜವಾಬ್ದಾರಿಯಾಗಿದ್ದರೂ, ರಾಷ್ಟ್ರದ ಮಾನವ ಹಕ್ಕುಗಳ ನೀತಿಗಳನ್ನು ವರ್ಧಿಸುವ ನಿಟ್ಟಿನಲ್ಲಿ ಮತ್ತು ಅಂತಹ ನೀತಿಗಳ ಅನುಷ್ಠಾನಕ್ಕೆ ಮಾನವ ಹಕ್ಕುಗಳ ರಕ್ಷಕರಾಗಿರುವ ನೀವು ಮೇಲ್ವಿಚಾರಣೆಯನ್ನು ಮಾಡುವ ಮತ್ತು ಕಾರ್ಯವಹಿಸುವ ಪ್ರಮುಖ ಪಾತ್ರವನ್ನು ವಹಿಸುತ್ತೀರಿ. ಮಾನವ ಹಕ್ಕುಗಳ ಸಂಘಟನೆಗಳು ಮತ್ತು ರಕ್ಷಕರು ಸಾಮಾನ್ಯವಾಗಿ ಹೊಣೆಗಾರಿಕೆಯನ್ನು ಮತ್ತು ಶಿಕ್ಷೆಯನ್ನು ಕೊನೆಗೊಳಿಸುವಂತೆ ಒತ್ತಾಯಿಸುತ್ತ ಯಥಾಸ್ಥಿತಿಗೆ ಸವಾಲನ್ನು ಹಾಕುತ್ತಾರೆ; ತುಳಿತಕ್ಕೊಳಪಟ್ಟ ಮತ್ತು ದುರ್ಬಲ ಗುಂಪುಗಳ ಹಕ್ಕುಗಳಿಗಾಗಿ ಹೋರಾಡುವುದು ಮತ್ತು ಸುಸ್ಥಾಪಿತ ರೂಢಿಗಳಿಗೆ ಮತ್ತು ಸಾಮಾಜಿಕ ರಚನೆಗಳಿಗೆ ಸವಾಲು ಮಾಡುತ್ತಾರೆ. ಸಾಂಸ್ಥಿಕ ಮತ್ತು ಸಾಮಾಜಿಕ ಬದಲಾವಣೆಗಳನ್ನು ಸಮಾನತೆಯೆಡೆಗೆ ತರಲು ಇಂತಹ ಗಂಭೀರವಾದ ವಿಷಯಗಳ ಬಗ್ಗೆ ಕೆಲಸ ಮಾಡುವುದರಿಂದ ಮತ್ತು ಮಾನವ ಹಕ್ಕುಗಳ ರಕ್ಷಕರಾಗಿ ನಿಮ್ಮ ಕೆಲಸದ ಸ್ವರೂಪದಿಂದಾಗಿ ನಿಮ್ಮನ್ನು ಹೆಚ್ಚು ಅಪಾಯಕ್ಕೆ ಒಡ್ಡಬಹುದು.

ಪರ್ಯಾಯ ಅಥವಾ ಭಿನ್ನಾಭಿಪ್ರಾಯದ ಸ್ಥಾನಗಳನ್ನು ಹತ್ತಿಕ್ಕುವ ಮೂಲಕ ನಾಗರೀಕ ಅವಕಾಶವನ್ನು ಮತ್ತು ಹಕ್ಕುಗಳನ್ನು ಅಧಿಕಾರಕ್ಕಾಗಿ ಯುದ್ಧ ಭೂಮಿಯಾಗಿ ಬಳಸುವ ಜಾಗತಿಕ ಪ್ರವೃತಿಯು ಹಲವು ರೀತಿಯ ಸಂಶಯಾಸ್ಪದ ಮತ್ತು ಹಿಂಸಾತ್ಮಕ ರೂಪಗಳಲ್ಲಿ ವ್ಯಕ್ತವಾಗಿದೆ. ರಾಷ್ಟ್ರ ಮತ್ತು ರಾಷ್ಟ್ರೇತರ ಎರಡು ಪಾತ್ರಧಾರಿಗಳು ಖ್ಯಾತಿಗೆ ಹಾನಿತರುವಂತಹ ಅಭಿಯಾನಗಳ ಮೂಲಕ, ವಿದೇಶಿ ಹಣವನ್ನು ನಿರ್ಬಂಧಿಸುವುದು ಅಥವಾ ನಿಷೇಧಿಸುವುದು; ಅನಿಯಂತ್ರಿತ ಬಂಧನಗಳ ಮತ್ತು ಬಂಧನದ ಮೂಲಕ ಸುದೀರ್ಘ ಮತ್ತು ಆಧಾರರಹಿತ ಕಾನೂನು ಯುದ್ಧಗಳಲ್ಲಿ ಮಾನವ ಹಕ್ಕುಗಳನ್ನು ರಕ್ಷಿಸುವವರನ್ನು ಕಟ್ಟಿಹಾಕುವುದು; ಅವರ ಓಡಾಡುವಿಕೆಯನ್ನು ನಿರ್ಬಂಧಿಸುವುದು ಅಥವಾ ನಿಷೇಧಿಸುವುದು; ಮತ್ತು ಇತರ ಮಾನವ ಹಕ್ಕುಗಳ ಉಲ್ಲಂಘನೆಯ ವಿಧಾನಗಳ ಮೂಲಕ ಮಾನವ ಹಕ್ಕು ರಕ್ಷಕರನ್ನು ಗುರಿ ಮಾಡಬಹುದು. ರಾಷ್ಟ್ರ ಮತ್ತು/ಅಥವಾ ಇತರ ಪಾತ್ರದಾರಿಗಳಿಂದ ನೀವು ಮಾಡುತ್ತಿರುವ ಕೆಲಸದಿಂದಾಗಿ ನಿಮ್ಮನ್ನು ಅಥವಾ ನಿಮ್ಮ ಸಂಸ್ಥೆಯನ್ನು ಗುರಿ ಮಾಡಬಹುದು ಎಂಬ ಅರಿವು ನಿಮಗೆ ತಿಳಿದಿರುವುದು ಮುಖ್ಯವಾಗಿತ್ತದೆ.

ಈ ರೀತಿಯ ಚಟುವಟಿಕೆ ಮತ್ತು ಕೆಲವು ಪಾತ್ರಧಾರಿಗಳ ಒಳಗೊಳ್ಳುವಿಕೆಯಿಂದ, ಮಾನವ ಹಕ್ಕುಗಳ ರಕ್ಷಕರ ಕೆಲವು ಗುಂಪುಗಳು ಹೆಚ್ಚು ತೀವ್ರವಾದ ಅಪಾಯವನ್ನು ಅನುಭವಿಸಬಹುದು. ಸ್ಥಳೀಯ ಜನರ ಮತ್ತು ತುಳಿತಕ್ಕೊಳಪಟ್ಟ ಸಮುದಾಯಗಳ ಹಕ್ಕುಗಳಿಗಾಗಿ ಕಾರ್ಯವಹಿಸುತ್ತಿರುವ ರಕ್ಷಕರು ಇದರಲ್ಲಿ ಸೇರುತ್ತಾರೆ; ದೊಡ್ಡ ಆರ್ಥಿಕ ಹಿತಾಸಕ್ತಿಗಳನ್ನು ಒಳಗೊಂಡ ಸಮಸ್ಯೆಗಳಲ್ಲಿ ತೊಡಗಿರುವ ರಕ್ಷಕರು (ಉದಾಹರಣೆಗೆ ಪರಿಸರ ಹೋರಾಟಗಾರರು); ಧಾರ್ಮಿಕ ಮತ್ತು / ಅಥವಾ ಜನಾಂಗೀಯ ಸಮುದಾಯಗಳ ಹಕ್ಕುಗಳಿಗಾಗಿ ಕೆಲಸ ಮಾಡುವ ರಕ್ಷಕರು; ಗ್ರಾಮೀಣ ಪ್ರದೇಶಗಳಲ್ಲಿನ ರಕ್ಷಕರು (ಇದಕ್ಕೆ ಕಾರಣ ಅವರು ಹೆಚ್ಚಾಗಿ ಪ್ರತ್ಯೇಕವಾಗಿರುತ್ತಾರೆ ಮತ್ತು ಬೆಂಬಲ ಪಡೆಯಲು ಕಡಿಮೆ ಅವಕಾಶಗಳನ್ನು ಹೊಂದಿರುತ್ತಾರೆ); ಲೈಂಗಿಕ ಅಲ್ಪಸಂಖ್ಯಾತರ ಹಕ್ಕುಗಳಿಗಾಗಿ ಕೆಲಸ ಮಾಡುವ ರಕ್ಷಕರು; ಮತ್ತು ಮಹಿಳಾ ಮಾನವ ಹಕ್ಕುಗಳ ರಕ್ಷಕರು.






ಸ್ಥಳೀಯ ಸಮುದಾಯಗಳು ಮತ್ತು ಸ್ಥಳೀಯ ಜನರು ಹೆಚ್ಚಾಗಿ ಅವರ ಭೂಮಿ ಮತ್ತು ಆಸ್ತಿಯ ಬಳಕೆಯ ಸಂಬಂಧಿತವಾಗಿ ನಿರ್ಧಾರವನ್ನು ತೆಗೆದುಕೊಳ್ಳುವ ಪ್ರಕ್ರಿಯೆಯಿಂದ ಹೊರಗಿಡಲಾಗುತ್ತಾರೆ. ಹಕ್ಕುಗಳನ್ನು ರಕ್ಷಿಸಲು ಸಂಘಟಿತಾತ್ಮಕವಾಗಿ ಮತ್ತು ಸಹಭಾಗಿತ್ವದಲ್ಲಿ ಕೆಲಸ ಮಾಡುವುದು ಬಲವಾದ, ಹೆಚ್ಚು ಸಮರ್ಥವಾದ ರಕ್ಷಣೆಯನ್ನು ಹೊಂದಲು ಸಹಾಯ ಮಾಡುತ್ತದೆ. ಚಿತ್ರಗಳು: ಎನ್‌ಹೆಚ್‌ಆರ್‌ಎಫ್‌ನ ಅನುದಾನ ಪಡೆಯುವ ಪಾಲುದಾರರಾದ ಪಾಸ್ಟಾ ಡಿ ಕಾಂಚೋಸ್ (ಎಡದಲ್ಲಿ), ಮೆಕ್ಸಿಕೊದಲ್ಲಿ ಮಾನವ ಹಕ್ಕುಗಳ ಪ್ರತಿಪಾದಕರಿಗೆ ಬೆಂಬಲ ನೀಡುತ್ತದೆ ಮತ್ತು ಎನ್‌ಹೆಚ್‌ಆರ್‌ಎಫ್‌ನ ಅನುದಾನ ಪಡೆಯುವ ಪಾಲುದಾರರಾದ ಎಫ್ ಐ ಡಬ್ಲ್ಯುಓಎನ್ (ಮೇಲೆ) ನೈಜೀರಿಯಾದಲ್ಲಿ ಮಾನವ ಹಕ್ಕುಗಳ ಪ್ರತಿಪಾದಕರಿಗೆ ಬೆಂಬಲ ನೀಡುತ್ತದೆ,

# ಮಹಿಳಾ ಮಾನವ ಹಕ್ಕುಗಳ ರಕ್ಷಕರು

ಇತ್ತೀಚಿನ ವರ್ಷಗಳಲ್ಲಿ ಮಹಿಳಾ ಮಾನವ ಹಕ್ಕುಗಳ ರಕ್ಷಕರು ಹೆಚ್ಚಿನ ಗಮನ ಸೆಳೆದಿದ್ದಾರೆ, ಏಕೆಂದರೆ ಈ ವಿಷಯವಾಗಿ 2013 ರಲ್ಲಿ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯು ಅಂಗೀಕರಿಸಿದ ಮೊಟ್ಟ ಮೊದಲ ನಿರ್ಣಯವು(ಮೇಲೆ ಉಲ್ಲೇಖಿಸಲಾಗಿದೆ) ಕಾರಣವಾಗಿದೆ. ವಿಶ್ವದ ಎಲ್ಲಾ ಪ್ರದೇಶಗಳಲ್ಲಿನ ಮಹಿಳಾ ಮಾನವ ಹಕ್ಕುಗಳ ರಕ್ಷಕರು ಮಾನವ ಹಕ್ಕುಗಳ ರಕ್ಷಕರಾಗಿ ಕಾರ್ಯ ನಿರ್ವಹಿಸುವ ಕಾರಣದಿಂದಾಗಿ, ಜೊತೆಗೆ ನಿರ್ದಿಷ್ಟವಾಗಿ ಅವರ ಲಿಂಗದ ಕಾರಣದಿಂದಾಗಿ ಕೂಡ ಗುರಿಯಾಗುತ್ತಾರೆ. ಮಾನವ ಹಕ್ಕುಗಳ ರಕ್ಷಕರ ಪರಿಸ್ಥಿತಿಯ ಬಗ್ಗೆ ಇರುವ ವಿಶೇಷ ವರದಿಗಾರರು (ಮಾನವ ಹಕ್ಕುಗಳ ರಕ್ಷಕರಿಗೆ ಸಂಬಂಧಿಸಿದ ವಿಶ್ವಸಂಸ್ಥೆಯ ಕಾರ್ಯವಿಧಾನಗಳ ವಿಭಾಗವನ್ನು ನೋಡಿ – ಪುಟ 35) ಮಹಿಳಾ ಮಾನವ ಹಕ್ಕುಗಳ ರಕ್ಷಕರನ್ನು (ಮಮಾಹಪ್ರ) ಸ್ತ್ರೀ ಮಾನವ ಹಕ್ಕುಗಳ ರಕ್ಷಕರು ಮತ್ತು ಇತರ ಯಾವುದೇ ಮಾನವ ಹಕ್ಕುಗಳ ರಕ್ಷಕರು ಮಹಿಳೆಯರ ಹಕ್ಕುಗಳ ರಕ್ಷಣೆಗಾಗಿ ಅಥವಾ ಲಿಂಗ ಸಮಸ್ಯೆಗಳ ಬಗ್ಗೆ ಕಾರ್ಯ ವಹಿಸುವ ಈ ಇಬ್ಬರನ್ನೂ ಕೂಡಾ ಮಾನವ ಹಕ್ಕುಗಳ ರಕ್ಷಕರು ಎಂದು ವ್ಯಾಖ್ಯಾನಿಸಿದ್ದಾರೆ. ಯಾವುದೇ ಮಾನವ ಹಕ್ಕುಗಳ ರಕ್ಷಕರು ಒಳಗಾಗುವ ಅಪಾಯಗಳಂತೆಯೇ, ಮಹಿಳಾ ರಕ್ಷಕರು ಕೂಡ ಅದೇ ರೀತಿಯ ಅಪಾಯಗಳಿಗೆ ಒಳಗಾಗುತ್ತಾರೆ, ಆದರೆ, ಮಹಿಳೆಯರಾಗಿದ್ದರಿಂದ, ಲಿಂಗ ನಿರ್ದಿಷ್ಟ ಬೆದರಿಕೆಗಳು ಮತ್ತು ಲಿಂಗ ನಿರ್ದಿಷ್ಟ ಹಿಂಸಾಚಾರಕ್ಕೆ ಗುರಿ ಮಾಡುತ್ತಾರೆ ಅಥವಾ ನೇರವಾಗಿ ಒಡ್ಡಿಕೊಳ್ಳುತ್ತಾರೆ. ಮಹಿಳಾ ಮಾನವ ಹಕ್ಕುಗಳ ರಕ್ಷಕರು ಮಹಿಳಾ ಹಕ್ಕುಗಳನ್ನು ಮತ್ತು ಇತರ ಲಿಂಗ–ಸಂಬಂಧಿತ ಹಕ್ಕುಗಳ ಸಾಕ್ಷಾತ್ಕಾರವನ್ನು ಸಾಧಿಸಲು ಹೆಚ್ಚಾಗಿ ಲಿಂಗ ಸಮಾನತೆಯನ್ನು ಅನುಸರಿಸುವ ಮೂಲಕ ಸಾಧಿಸಲು ಪ್ರಯತ್ನಿಸುತ್ತಾರೆ, ಇದು ಅನೇಕ ಸಂದರ್ಭಗಳಲ್ಲಿ ವಿವಾದಾತ್ಮಕವಾಗಿರುತ್ತದೆ ಮತ್ತು ಈ ಕಾರ್ಯಕ್ಕಾಗಿ ಅವರನ್ನು ಗುರಿಮಾಡಲಾಗುತ್ತದೆ. ಅವರು ಮಾನವ ಹಕ್ಕುಗಳ ಚಳುವಳಿಯ ಒಳಗೂ ಕೂಡ ತಾರತಮ್ಯವನ್ನು ಎದುರಿಸಬಹುದು ಮತ್ತು ಗುರಿಯಾಗಬಹುದು. ಮಾನವ ಹಕ್ಕುಗಳ ರಕ್ಷಕರಿಗೆ ಅದರಲ್ಲಿಯೂ ಪ್ರಮುಖವಾಗಿ ಮಹಿಳಾ ಮಾನವ ಹಕ್ಕುಗಳ ರಕ್ಷಕರು ಅನನ್ಯವಾಗಿ ಲಿಂಗಭೇದದ ಅಪಾಯಗಳನ್ನು ಎದುರಿಸುವುದರಿಂದ ಅವರಿಗೆ ಒದಗಿಸಲಾಗುವ ಬೆಂಬಲ ಮತ್ತು ರಕ್ಷಣೆಯು ಲಿಂಗ ಸಂವೇದಿತವಾಗಿರಬೇಕು. ಮಹಿಳಾ ಮಾನವ ಹಕ್ಕುಗಳ ರಕ್ಷಕರುಗಳಿಗೆ ಭದ್ರತೆ ಮತ್ತು ರಕ್ಷಣೆಯಲ್ಲಿ ಲಿಂಗದ ದೃಷ್ಟಿಯಿಂದ ನೋಡದಿದ್ದರೆ, ಪ್ರಕ್ರಿಯೆಯು ಅಸಮರ್ಪಕವಾಗಿರುತ್ತದೆ ಮತ್ತು ಅಂತಿಮವಾಗಿ ಅವರ ಭದ್ರತೆ ಮತ್ತು ಸುರಕ್ಷತೆಯ ಮೇಲೆ ರಾಜಿ ಮಾಡಿಕೊಳ್ಳಬೇಕಾಗುವ ಪರಿಣಾಮವನ್ನು ಬೀರುತ್ತದೆ.




ಎನ್‌ಹೆಚ್‌ಆರ್‌ಎಫ್‌ನ ಅನುದಾನ ಪಡೆಯುವ ಕೊಲಂಬಿಯಾದ ಪಾಲುದಾರರಾದ ಕಾನ್ಫ್ಲುಯೆನ್ಸಿಯಾ ಡಿ ಮುಜೆರೆಸ್ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮಾನವ ಹಕ್ಕುಗಳ ರಕ್ಷಕರು



ಎನ್‌ಹೆಚ್‌ಆರ್‌ಎಫ್‌ನ ಅನುದಾನ ಪಡೆಯುವ ಇಂಡೋನೇಷ್ಯಾದ ಪಾಲುದಾರರಾದ ವಿಮೆನ್ ಅಂಡ್ ಯೂತ್ ಡೆವೆಲಪ್‌ಮೆಂಟ್ ಇನ್ಸ್ಟಿಟ್ಯೂಟ್ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮಾನವ ಹಕ್ಕುಗಳ ರಕ್ಷಕರು



ಎನ್‌ಹೆಚ್‌ಆರ್‌ಎಫ್‌ನ ಅನುದಾನ ಪಡೆಯುವ ಮೆಕ್ಸಿಕೋ ಪಾಲುದಾರರಾದ ಬೇಟಿ ಕರಿನೋ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮಾನವ ಹಕ್ಕುಗಳ ರಕ್ಷಕರು

10 ಎ/ಹ್ಯೂಮನ್ ರೈಟ್ಸ್ ಕೌಂಸಿಲ್/16/44 https://bit.ly/2xLOW43



### ಎಡಬ್ಲ್ಯೂಐಡಿ (AWID)

ಅಸೋಸಿಯೇಷನ್ ಫಾರ್ ವುಮೆನ್ಸ್ ರೈಟ್ಸ್ ಇನ್ ಡೆವಲಪ್ಮೆಂಟ್ (ಎಡಬ್ಲ್ಯೂಐಡಿ) ಒಂದು ಜಾಗತಿಕ, ಸ್ತ್ರೀವಾದಿ ಸದಸ್ಯತ್ವ ಆಧಾರಿತ ಸಂಘವಾಗಿದ್ದು, ಮಹಿಳೆಯರ ಹಕ್ಕುಗಳ ಸಂಸ್ಥೆಗಳು ತಮ್ಮ ಹೋರಾಟದಲ್ಲಿ ಹೆಚ್ಚು ಪರಿಣಾಮಕಾರಿಯಾಗಬೇಕು ಎಂಬ ನಿಟ್ಟಿನಲ್ಲಿ ಅಂತಹ ಸಂಸ್ಥೆಗಳನ್ನು ಬೆಂಬಲಿಸುವ, ಸಂಪನ್ಮೂಲ ನೀಡುವ ಮತ್ತು ಬಲಪಡಿಸುವ ಕಾರ್ಯ ಮಾಡುತ್ತಿದೆ. ಎಡಬ್ಲ್ಯೂಐಡಿ ಮಹಿಳಾ ಮಾನವ ಹಕ್ಕುಗಳ ರಕ್ಷಕರ, ಚಳುವಳಿ ಕಟ್ಟುವುದು, ಸ್ತ್ರೀವಾದಿ ಮೇಲ್ವಿಚಾರಣೆ ಮತ್ತು ಧನಸಹಾಯದಂತಹ ವಿಷಯಗಳಿಗೆ ಸಂಬಂಧಿತ ಪ್ರಕಟಣೆಗಳನ್ನು https://bit.ly/33vH6HP ಸಹ ಹೊರತರುತ್ತದೆ.

ಚಿತ್ರ ಶೀರ್ಷಿಕೆ: ಮಹಿಳೆಯರು ಹೋರಾಟದಲ್ಲಿ ಮತ್ತು ಅವರ ಹಕ್ಕುಗಳ ಪಡೆಯುವಿಕೆಯನ್ನು ಸಾಧಿಸುವಲ್ಲಿ ಯಾವಾಗಲೂ ಮುನ್ನಡೆಯನ್ನು ಸಾಧಿಸಿದ್ದಾರೆ. ಚಿತ್ರ ಸಲ್ಲಿಕೆ: ತೇನ್‌ಮೊಯಿ ಸೌಂದರರಾಜನ್






ಮಹಿಳಾ ಮಾನವ ಹಕ್ಕುಗಳ ರಕ್ಷಕರ ಬಗ್ಗೆ ವಿಶ್ವಸಂಸ್ಥೆಯ ಹೆಚ್ಚಿನ ಮಾಹಿತಿಗಾಗಿ ಈ ಲಿಂಕನ್ನು ಅನುಸರಿಸಿ https://bit.ly/2xU92JC

ಮಾನವ ಹಕ್ಕುಗಳ ರಕ್ಷಕರ ಪರಿಸ್ಥಿತಿಯ ಬಗ್ಗೆ ವಿಶೇಷ ವರದಿಗಾರರಿಂದ ಮಹಿಳಾ ಮಾನವ ಹಕ್ಕುಗಳ ರಕ್ಷಕರ ಕುರಿತ 2019ರ ವರದಿಗಾಗಿ ಈ ಲಿಂಕನ್ನು ಅನುಸರಿಸಿ https://bit.ly/2WxI58L

ಮಹಿಳಾ ಮಾನವ ಹಕ್ಕುಗಳ ರಕ್ಷಕರಿಗೆ ಜಸ್ಟ್ ಅಸೋಸಿಯೇಟ್ಸ್‌ನ ಕೈಪಿಡಿಗಾಗಿ ಈ ಲಿಂಕನ್ನು ಅನುಸರಿಸಿ: ನಮ್ಮ ಹಕ್ಕುಗಳು, ನಮ್ಮ ಭದ್ರತೆ: ಮಹಿಳಾ ಮಾನವ ಹಕ್ಕುಗಳ ರಕ್ಷಕರಿಗೆ ಸಂಪನ್ಮೂಲಗಳು: (Our Rights, Our Safety: Resources for women human rights defenders) https://bit.ly/33vH6HP

ಇನ್ಫೋಗ್ರಾಫಿಕ್ಸ್ ಅನ್ನು ಇಲ್ಲಿ ಕಾಣಬಹುದು, ಅಥವಾ ಮೂಲ ಪುಟಕ್ಕೆ ಹೋಗಲು ನೀವು ಚಿತ್ರದ ಮೇಲೆ ಕ್ಲಿಕ್ ಮಾಡಬಹುದು:
https://bit.ly/2IZQfPj
https://bit.ly/2Ws2QTd




11 ಮುಂಚೂಣಿಯಲ್ಲಿರುವ ರಕ್ಷಕರು ಭದ್ರತೆಯ ಬಗ್ಗೆ ಕಾರ್ಯಪುಸ್ತಕ: ಅಪಾಯದಲ್ಲಿರುವ ಮಾನವ ಹಕ್ಕು ರಕ್ಷಕರಿಗಾಗಿ ಪ್ರಾಯೋಗಿಕ ಹಂತಗಳು 2011 https://bit.ly/2xUmhdj

ಮಾನವ ಹಕ್ಕುಗಳ ರಕ್ಷಕರಾಗಿ ಭದ್ರತೆಯನ್ನು ನಿಮ್ಮ ಕಾರ್ಯದ ಅವಿಭಾಜ್ಯ ಅಂಗವಾಗಿ ತಿಳಿದುಕೊಳ್ಳುವ ಜವಾಬ್ದಾರಿಯನ್ನು ನೀವು ಹೊಂದಿರುವಿರಿ. ಭದ್ರತೆಯ ಬಗ್ಗೆ ನೀವು ಮತ್ತು ನಿಮ್ಮ ಸಂಸ್ಥೆಯು ಆಲೋಚಿಸಿದಾಗ, ಭದ್ರತಾ ಅಪಾಯಗಳನ್ನು ಹೆಚ್ಚು ಪರಿಣಾಮಕಾರಿ ರೀತಿಯಲ್ಲಿ ನಿರ್ವಹಿಸುವುದು ಹೇಗೆ ಎಂಬುದರ ಬಗ್ಗೆ ಕಾರ್ಯತಂತ್ರ ರೂಪಿಸಲು ಅನುಕೂಲ ಮಾಡುತ್ತದೆ. ಇದರಿಂದಾಗಿ, ನೀವು ಮತ್ತು ನಿಮ್ಮ ಸಂಸ್ಥೆಯು ಇನ್ನು ಹೆಚ್ಚು ಬಲಿಷ್ಠವಾಗಲು ಮತ್ತು ಯಾರ ಹಕ್ಕುಗಳನ್ನು ನೀವು ಉತ್ತೇಜಿಸುತ್ತಿರುವಿರೋ ಮತ್ತು ರಕ್ಷಿಸುತ್ತಿರುವಿರೋ ಅಂತಹ ವ್ಯಕ್ತಿಗಳ ಮತ್ತು ಸಮುದಾಯಗಳ ಪರವಾಗಿ ನಿಮ್ಮ ಕೆಲಸವನ್ನು ಇನ್ನು ಹೆಚ್ಚು ದೃಢವಾಗಿ ಮುಂದುವರೆಸಲು ಅನುಕೂಲ ಮಾಡುತ್ತದೆ.

ನಿಮ್ಮ ಕೆಲಸದ ಕಾರಣದಿಂದ ಎದುರಾಗಬಲ್ಲ ಅಪಾಯಗಳನ್ನು ಗುರುತಿಸಲು ಮತ್ತು ಚರ್ಚಿಸಲು ನೀವು ಪ್ರಾರಂಭಿಸಿದಾಗ ನಿಮಗೆ ಭಯ ಉಂಟಾಗಬಹುದು ಮತ್ತು ಭದ್ರತಾ ಅಪಾಯಗಳನ್ನು ಸಕ್ರಿಯವಾಗಿ ಪರಿಹರಿಸುವ ಪ್ರಕ್ರಿಯೆಯ ಪ್ರಾರಂಭವು ನಿಮಗೆ ಹಿತವಲ್ಲದಿರಬಹುದು. ಈ ಪ್ರಕ್ರಿಯೆಯು ನಿಮ್ಮನ್ನು ದುರ್ಬಲಗೊಳಿಸಬಹುದು ಮತ್ತು ದೃಢವಾದ ರೀತಿಯಲ್ಲಿ ಯೋಚಿಸದ ಸಮಸ್ಯೆಗಳನ್ನು ಬಲವಂತವಾಗಿ ಪರಿಹರಿಸಲು ಒತ್ತಾಯಿಸಬಹುದು. ಅದಾಗ್ಯೂ, ಭದ್ರತೆಗೆ ಒಂದು ವ್ಯವಸ್ಥಿತ ವಿಧಾನವನ್ನು ಕಲ್ಪಿಸುವುದರಿಂದ ಮತ್ತು ಅಪಾಯವನ್ನು ಹೇಗೆ ಪರಿಹರಿಸುವುದು ಎಂದು ಯೋಚಿಸಿದಾಗ ಅಂತಿಮವಾಗಿ ನೀವು ಮತ್ತು ನಿಮ್ಮ ಸಹೋದ್ಯೋಗಿಗಳಿಗೆ ಒಂದು ನವೀಕೃತ ನಿಯಂತ್ರಣದ ಅರ್ಥವನ್ನು ನೀಡುತ್ತದೆ. ಇದು ನಿಮ್ಮ ಸಂಸ್ಥೆ, ನಿಮ್ಮ ತಂಡ, ಮತ್ತು ನೀವು ನಿರ್ವಹಿಸುತ್ತಿರುವ ಕಾರ್ಯವನ್ನು ಬಲಪಡಿಸಲು ಸಹಾಯ ಮಾಡುತ್ತದೆ.

ಹೆಚ್ಚಿನ ಕಾರ್ಯಕ್ಷೇತ್ರಗಳಲ್ಲಿ, ಔದ್ಯೋಗಿಕ ಅರೋಗ್ಯಕ್ಕೆ ಮತ್ತು ಸುರಕ್ಷತೆಗಾಗಿ ಉದ್ಯಮದ ಮಾನದಂಡಗಳು ಗುಣಮಟ್ಟದ ನಿಯಂತ್ರಣ ಮತ್ತು ಕೆಟ್ಟ ಸಂದರ್ಭಗಳಿಗೆ ಆಕಸ್ಮಿಕ ಯೋಜನೆಗಳನ್ನು ಮತ್ತು ಕಾರ್ಮಿಕರಿಗೆ ಅಪಾಯವನ್ನು ಉಂಟುಮಾಡುವ ಅನೇಕ ಘಟನೆಗಳ ಮೇಲೆ ಆಧಾರಿತವಾಗಿದೆ. ಮಾನವ ಹಕ್ಕುಗಳ ಕ್ಷೇತ್ರವು, ಯಾವುದೇ ಔದ್ಯೋಗಿಕ ಗುಣಮಟ್ಟದ ನಿಯಂತ್ರಣವನ್ನು ಹೊಂದಿಲ್ಲದಿದ್ದರು, ಈ ಕೆಲಸಕ್ಕೆ ಸಂಬಂದಿತ ಸಂಭಾವ್ಯ ಮತ್ತು ತಕ್ಷಣದ ಅಪಾಯಗಳಿಗೆ ಹೊಂದಿಕೆಯಾಗುವ ರೀತಿಯಲ್ಲಿಯೇ ಕಾರ್ಯನಿರ್ವಹಿಸಬೇಕು. ಸುರಕ್ಷತೆ ಮತ್ತು ರಕ್ಷಣೆಯ ವ್ಯವಸ್ಥೆಗಳನ್ನು ಯೋಜಿಸುವುದು, ಸಿದ್ದಪಡಿಸುವುದು ಮತ್ತು ಸಂಯೋಜಿಸುವುದರಿಂದ ನಿಮ್ಮ ಕೆಲಸದಲ್ಲಿ ನಿಮಗೆ ಹೆಚ್ಚಿನ ಶಾಂತತೆ ಮತ್ತು ನಿಯಂತ್ರಣವನ್ನು ನೀಡುತ್ತದೆ.

ನಿಮ್ಮದೇ ಆದ ಸನ್ನಿವೇಶದಲ್ಲಿ ಸೂಕ್ತವಾದ ಅಪಾಯದ ವಿಶ್ಲೇಷನೆಯನ್ನು ನಡೆಸುವುದು ಮತ್ತು ಈ ರೀತಿಯ ಅಪಾಯಗಳನ್ನು ಹೇಗೆ ಪರಿಣಾಮಕಾರಿಯಾಗಿ ನಿಭಾಯಿಸಬೇಕು ಎಂಬ ಕಾರ್ಯತಂತ್ರಗಳನ್ನು ಅಭಿವೃದ್ಧಿಪಡಿಸುವುದು ಎನ್‌ಹೆಚ್‌ಆರ್‌ಎಫ್‌ನ ಎಲ್ಲಾ ಅನುದಾನ ಪಡೆಯುವವರ ಜವಾಬ್ದಾರಿಯಾಗಿದೆ. ಈ ಮೊದಲೇ ಹೇಳಿದಂತೆ, ಸಂಸ್ಥೆ, ಮುಂಚೂಣಿಯಲ್ಲಿರುವ ರಕ್ಷಕರು ಭದ್ರತೆಯ ಬಗ್ಗೆ ಕಾರ್ಯಪುಸ್ತಕ: ಅಪಾಯದಲ್ಲಿರುವ ಮಾನವ ಹಕ್ಕುಗಳ ರಕ್ಷಕರಿಗೆ ಪ್ರಾಯೋಗಿಕ ಹಂತಗಳು [Workbook on Security: Practical Steps for Human Rights Defenders at Risk] https://www.frontlinedefenders.org/en/resource-publication/workbook-security-practical-steps-human-rights-defenders-risk ಎಂಬ ಉಪಯುಕ್ತವಾದ ಕೈಪಿಡಿಯನ್ನು ಅಭಿವೃದ್ಧಿಪಡಿಸಿದ್ದಾರೆ. ಇದು ಭದ್ರತೆ ಮತ್ತು ರಕ್ಷಣೆಯ ಬಗ್ಗೆ ಅರಿವುಳ್ಳ ನಿರ್ಧಾರಗಳನ್ನು ಹೇಗೆ ತೆಗೆದುಕೊಳ್ಳುವುದು ಎಂಬುದರ ಕುರಿತ ಸಲಹೆ ಮತ್ತು ಸೂಚನೆಗಳನ್ನು ಒಳಗೊಂಡಿರುವ ಸಮಗ್ರವಾದ ಕಾರ್ಯಪುಸ್ತಕವಾಗಿದೆ.

**ಈ ಕಾರ್ಯಪುಸ್ತಕವು ಕೆಳಗಿನ ಚಟುವಟಿಕೆಗಳ ಮೂಲಕ ನಿಮಗೆ ಮಾರ್ಗದರ್ಶನ ನೀಡುತ್ತದೆ:**

- ನೀವು ಕೆಲಸ ಮಾಡುತ್ತಿರುವ ಸಂದರ್ಭವನ್ನು ವಿಶ್ಲೇಷಿಸುವುದು
- ಅಪಾಯಗಳನ್ನು ನಿರ್ಣಯಿಸುವುದು
- ಬೆದರಿಕೆಗಳನ್ನು ವಿಶ್ಲೇಷಿಸುವುದು
- ನಿಮ್ಮ ಯೋಗಕ್ಷೇಮವನ್ನು ಕಾಪಾಡಿಕೊಳ್ಳಲು ಮತ್ತು ಒತ್ತಡವನ್ನು ನಿಭಾಯಿಸಲು ವಿಧಾನಗಳನ್ನು ಗುರುತಿಸುವುದು
- ಸೂಕ್ತವಾದ ಭದ್ರತಾ ಯೋಜನೆಗಳನ್ನು ತಯಾರಿಸುವುದು ಮತ್ತು ಪರಿಶೀಲಿಸುವುದು

**ಭದ್ರತೆಯ ಬಗ್ಗೆ ಮುಂಚೂಣಿಯಲ್ಲಿರುವ ರಕ್ಷಕರ ಕಾರ್ಯಪುಸ್ತಕ**

ಮುಂಚೂಣಿಯಲ್ಲಿರುವ ರಕ್ಷಕರು ಭದ್ರತೆಯ ಬಗ್ಗೆ ಕಾರ್ಯಪುಸ್ತಕ: ಅಪಾಯದಲ್ಲಿರುವ ಮಾನವ ಹಕ್ಕು ರಕ್ಷಕರಿಗಾಗಿ ಪ್ರಾಯೋಗಿಕ ಹಂತಗಳು(2011)

https://www.frontlinedefenders.org/en/resource-publication/workbook-security-practical-steps-human-rights-defenders-risk ಎಂಬ ಕಾರ್ಯಪುಸ್ತಕವು ಇಂಗ್ಲಿಷ್, ಸ್ಪ್ಯಾನಿಷ್, ಫ್ರೆಂಚ್, ಪೋರ್ಚುಗೀಸ್, ಚೈನೀಸ್, ಉರ್ದು, ದರೀ, ಸೊಮಾಲಿ ಮತ್ತು ಅರೇಬಿಕ್ ಒಳಗೊಂಡಂತೆ ಹಲವು ಭಾಷೆಗಳಲ್ಲಿ ಆನ್‌ಲೈನ್‌ನಲ್ಲಿ ಲಭ್ಯವಿದೆ.

ಈ ಕಾರ್ಯಪುಸ್ತಕವು ಮುಂಚೂಣಿಯಲ್ಲಿರುವ ರಕ್ಷಕರು ಮಾನವ ಹಕ್ಕು ರಕ್ಷಕರಿಗೆ ರಕ್ಷಣಾ ಕೈಪಿಡಿಯನ್ನು ಭಾಗಶ: ಆಧರಿಸಿದೆ https://bit.ly/2IYDleP

ಭದ್ರತಾ ವಿಷಯಗಳ ಕುರಿತು ಈ ಕಾರ್ಯಪುಸ್ತಕವು ನಿಮ್ಮ ಅರಿವು ಹೆಚ್ಚಿಸಲು ಸಹಾಯ ಮಾಡಬೇಕು ಮತ್ತು ಅಪಾಯಗಳನ್ನು ಹೇಗೆ ತಗ್ಗಿಸಬಹುದು ಎಂಬುದನ್ನು ಪರಿಗಣಿಸಲು ನಿಮಗೆ ಸಹಾಯ ಮಾಡಬೇಕು. ನಿಮ್ಮ ದಿನನಿತ್ಯದ ಮಾನವ ಹಕ್ಕುಗಳ ಕೆಲಸದಲ್ಲಿ ಈ ಭದ್ರತಾ ಕಾರ್ಯಪುಸ್ತಕವನ್ನು ಸಕ್ರಿಯವಾಗಿ ಮತ್ತು ಸಮರ್ಪಕವಾಗಿ ಬಳಸಿಕೊಳ್ಳಲು ಎನ್‌ಹೆಚ್‌ಆರ್‌ಎಫ್ ತನ್ನ ಅನುದಾನ ಪಡೆಯುವ ಎಲ್ಲಾ ಸಂಸ್ಥೆಗಳಿಗೆ ಪ್ರೋತ್ಸಾಹವನ್ನು ನೀಡುತ್ತದೆ.

ಈ ಮಾರ್ಗಸೂಚಿಗಳಿಗಾಗಿ, ಭದ್ರತೆಯ ಕುರಿತು ಮುಂಚೂಣಿಯಲ್ಲಿರುವ ರಕ್ಷಕರ ಕಾರ್ಯಪುಸ್ತಕದಲ್ಲಿ ಗಮನಹರಿಸಲು ನಾವು ಆರಿಸಿದ್ದೇವೆ. ಆದಾಗ್ಯೂ, ಇತರ ಸಂಸ್ಥೆಗಳ ಇತರ ಮೂಲಗಳು ಮತ್ತು ಕೈಪಿಡಿಗಳು ಸಹ ಲಭ್ಯವಿದೆ. ಈ ವಿಷಯವನ್ನು ಅನ್ವೇಷಿಸಲು ಮತ್ತು ನಿಮ್ಮ ಜ್ಞಾನವನ್ನು ಹೆಚ್ಚಿಸಿಕೊಳ್ಳಲು ಮತ್ತು ಭದ್ರತೆಯ ವಿಷಯದಲ್ಲಿ ನಿಮ್ಮ ದೃಷ್ಟಿಕೋನವನ್ನು ವಿಸ್ತರಿಸಲು ಇತರ ಮೂಲಗಳನ್ನು ಸಮಾಲೋಚಿಸಲು ನಾವು ನಿಮ್ಮನ್ನು ಪ್ರೋತ್ಸಾಹಿಸುತ್ತೇವೆ. ಮಾನವ ಹಕ್ಕುಗಳ ರಕ್ಷಕರೊಂದಿಗೆ ಕೆಲಸ ಮಾಡುವ ಇತರ ಸಂಸ್ಥೆಗಳ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಪುಟ 46 ರಲ್ಲಿರುವ ವಿಶೇಷ ಸಂಸ್ಥೆಗಳ ವಿಭಾಗವನ್ನು ನೋಡಿ.




ಪರಿಸರ ಮಾನವ ಹಕ್ಕುಗಳ ರಕ್ಷಕರು ತಮ್ಮ ಕೆಲಸದಲ್ಲಿ ತೀವ್ರವಾದ ಅಪಾಯಗಳನ್ನು ಎದುರಿಸುತ್ತಾರೆ



ಕಣ್ಮರೆಯಾದವರ ಕುಟುಂಬಗಳ ಹಕ್ಕುಗಳಿಗಾಗಿ ಕೆಲಸ ಮಾಡುವ ಮಾನವ ಹಕ್ಕುಗಳ ರಕ್ಷಕರು – ಮಾಜಿ ಎನ್‌ಹೆಚ್‌ಆರ್‌ಎಫ್ ಅನುದಾನ ಪಡೆದ ಪಾಲುದಾರರು, ಫ್ಯಾಮಿಲಿಯರೆಸ್ ಪಲಾಶಿಯೊ ಡಿ ಜಸ್ಟಿಸಿಯೊ ಕೊಲಂಬಿಯಾ



ಮಾನವ ಹಕ್ಕುಗಳ ರಕ್ಷಕರಿಗೆ ವಿಶೇಷ ವರದಿಗಾರರ ಆದೇಶಗಳಂತಹ ರಕ್ಷಣಾ ಕಾರ್ಯವಿಧಾನಗಳ ಸಂಪರ್ಕವು ಮುಖ್ಯವಾಗಿವೆ. ಚಿತ್ರ: ಇಸ್ರೇಲ್ ಮತ್ತು ಪ್ಯಾಲೆಸ್ಟೈನ್ ನಿಂದ ಮಾನವ ಹಕ್ಕುಗಳ ರಕ್ಷಕರು ಮೈಕೆಲ್ ಫಾರ್ಸ್ಟ್ ಅವರೊಂದಿಗೆ ಸಭೆ ನಡೆಸುತ್ತಿರುವುದು (ಚಿತ್ರ ಸಲ್ಲಿಕೆ: ಮಾನವ ಹಕ್ಕುಗಳ ರಕ್ಷಕರ ನಿಧಿ)

# ಅಪಾಯದ ಮೌಲ್ಯಮಾಪನಗಳು ಮತ್ತು ಬೆದರಿಕೆಯ ವಿಶ್ಲೇಷಣೆ

ಮಾನವ ಹಕ್ಕು ರಕ್ಷಕರು ಮತ್ತು ಮಾನವ ಹಕ್ಕುಗಳ ಸಂಸ್ಥೆಗಳು ಎದುರಿಸುವ ಭದ್ರತಾ ಅಪಾಯಗಳು ಒಂದು ದೇಶದಿಂದ ಮತ್ತೊಂದು ದೇಶಕ್ಕೆ ಮತ್ತು ಒಂದು ಸಂದರ್ಭದಿಂದ ಇನ್ನೊಂದು ಸಂದರ್ಭಕ್ಕೆ ಬದಲಾಗುತ್ತದೆ. ಈ ಅಪಾಯಗಳು ನಿಮಗೆ ಸಂಬಂಧಿಸಿದ ವ್ಯಕ್ತಿಗೆ (ಉದಾಹರಣೆಗೆ ದೈಹಿಕ ಮತ್ತು/ಅಥವಾ ದೈಹಿಕವಲ್ಲದ ಪ್ರತೀಕಾರಗಳು), ನಿಮ್ಮ ಮಾನವ ಹಕ್ಕುಗಳ ಕೆಲಸಕ್ಕೆ ಅಥವಾ ಇವೆರಡಕ್ಕೂ ಸಂಬಂಧಿಸಿರಬಹುದು. ನಿಮ್ಮ ಕೆಲಸದ ಪರಿಸ್ಥಿತಿಯೂ ಕೂಡ ಸಂದರ್ಭಕ್ಕೆ ಅನುಗುಣವಾಗಿ ಬದಲಾಗುತ್ತದೆ. ಕೆಲವು ರಕ್ಷಕರು, ಸಶಸ್ತ್ರ ಸಂಘರ್ಷಗಳಲ್ಲಿ ಅಥವಾ ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಸಂಘಟನೆಗಳನ್ನು ನಿರ್ಬಂಧಿಸುವ ದೇಶಗಳಲ್ಲಿ, ಕಾರ್ಯ ನಿರ್ವಹಿಸುತ್ತಿದ್ದಾರೆ, ಮತ್ತು ಕೆಲವರು ದೊಡ್ಡ ಮಟ್ಟದ ಆರ್ಥಿಕ ಮತ್ತು ರಾಜಕೀಯ ಹಿತಾಸಕ್ತಿಗಳನ್ನು ಹೊಂದಿರುವ ಪ್ರದೇಶಗಳಲ್ಲಿ ಮತ್ತು ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಾರೆ. ಇಂದು ವಿಶ್ವಾದ್ಯಂತ ಮಾನವ ಹಕ್ಕು ರಕ್ಷಕರು ಎದುರಿಸುವ ಹಲವಾರು ರೀತಿಯ ಅಪಾಯಗಳನ್ನು ಮುಂಚೂಣಿಯಲ್ಲಿರುವ ರಕ್ಷಕರು ಪಟ್ಟಿ ಮಾಡಿದ್ದಾರೆ. ಇವುಗಳಲ್ಲಿ ಕಳಂಕಿತಗೊಳುಸುವಿಕೆ, ಪ್ರಯಾಣದಲ್ಲಿ ಹಸ್ತಕ್ಷೇಪ, ಬರವಣಿಗೆ ಮತ್ತು ಇತರರೊಂದಿಗೆ ಸೇರುವ ವಿರುದ್ಧ, ಬೆದರಿಸುವುದು, ಆಡಳಿತಾತ್ಮಕ ಕ್ರಮಗಳಿಂದ ಗುರಿಯಾಗಿಸುವುದು, ದೈಹಿಕ ಮತ್ತು ಲೈಂಗಿಕ ದೌರ್ಜನ್ಯ, ಜೀವನೋಪಾಯ ಮತ್ತು ಆಸ್ತಿಯ ಮೇಲೆ ದಾಳಿ ಮಾಡುವುದು, ಸೆರೆಹಿಡಿಯುವುದು, ಬಂಧನ ಅಥವಾ ಜೈಲುವಾಸ, ಕೆಟ್ಟ ರೀತಿಯಲ್ಲಿ ನಡೆಸಿಕೊಳ್ಳುವುದು, ಚಿತ್ರಹಿಂಸೆ, ಅಪಹರಣ, ಕದ್ದೊಯುವುದು ಮತ್ತು ಕೊಲೆಗಳಂತಹವುಗಳನ್ನು ಒಳಗೊಂಡಿದೆ.

### ಅಪಾಯ

ಅಪಾಯವನ್ನು ಹಾನಿಗೆ ಕಾರಣವಾಗುವ ಘಟನೆಗಳ ಸಾಧ್ಯತೆ ಎಂದು ಮುಂಚೂಣಿಯಲ್ಲಿರುವ ರಕ್ಷಕರು ವ್ಯಾಖ್ಯಾನಿಸಿದ್ದಾರೆ. ನಿಮ್ಮ ಕೆಲಸದ ದಾಖಲಾತಿಗಳನ್ನು ಮತ್ತು ನೀವು ಮಾಡಿದ ಇಷ್ಟೊಂದು ವರ್ಷಗಳ ನಿಮ್ಮ ಕೆಲಸ ವ್ಯರ್ಥಗೊಳಿಸುವುದು, ಅಥವಾ ನಿಮ್ಮ ಸಂಸ್ಥೆಯ ನೋಂದಣಿಯನ್ನು ನವೀಕರಿಸಲು ಸಾಧ್ಯವಾಗದೇ ಇರುವುದು, ನಿಮಗೆ ಅಥವಾ ನಿಮ್ಮ ಸಹೋದ್ಯೋಗಿಗಳಿಗೆ ಮಾನಸಿಕ ಮತ್ತು / ಅಥವಾ ದೈಹಿಕ ಹಾನಿ ಇವೆಲ್ಲವೂ ಅಪಾಯಗಳಲ್ಲಿ ಒಳಗೊಂಡಿರಬಹುದು. ಮುಂಚೂಣಿಯಲ್ಲಿರುವ ರಕ್ಷಕರ ಪ್ರಕಾರ, ಅಪಾಯವು ಸಂದರ್ಭ– ಮತ್ತು ಲಿಂಗ–ನಿರ್ದಿಷ್ಟ, ಕ್ರಿಯಾತ್ಮಕ ಮತ್ತು ಕಾಲಕ್ಕೆ ಅನುಸಾರವಾಗಿ ಬದಲಾಗುತ್ತದೆ ಎನ್ನುತ್ತಾರೆ. ಆದ್ದರಿಂದ ಇದನ್ನು ನಿಯಮಿತವಾಗಿ ವಿಶ್ಲೇಷಣೆ ಮಾಡಬೇಕು. ಅಪಾಯದ ಮಟ್ಟವನ್ನು ಮೌಲ್ಯಮಾಪನ ಮಾಡುವುದೇ ಒಂದು ಸವಾಲಾಗಿದೆ. ಅಪಾಯವು ಅಧಿಕವಾಗಿದ್ದರೆ ಮತ್ತು ಕಾರ್ಯರೂಪಕ್ಕೆ ಬರುವ ಸಾಧ್ಯತೆಯಿದ್ದರೆ, ಈ ಅಪಾಯವನ್ನು ಕಡಿಮೆ ಮಾಡಲು ನೀವು ಕೈಗೊಳ್ಳಬೇಕಾದ ಅತ್ಯುತ್ತಮ ಕ್ರಮಗಳನ್ನು ನೀವು ಗುರುತಿಸಬಹುದು. ಮಾನವ ಹಕ್ಕುಗಳ ರಕ್ಷಕರಾಗಿ ಮೌಲ್ಯಮಾಪನವು ನಿಮ್ಮ ವಿಶೇಷ ಸಂದರ್ಭದ ಆಧಾರವಾಗಿರುತ್ತದೆ.
ಪರಿಣಾಮಕಾರಿಯಾದ ಭದ್ರತಾ ಕ್ರಮಗಳನ್ನು ಕೈಗೊಳ್ಳಲು ಈ ಸಂದರ್ಭದ ಬಗ್ಗೆ ನಿಮ್ಮ ತಿಳುವಳಿಕೆಯು ಪೂರ್ವಾಪೇಕ್ಷಿತವಾಗಿರಬೇಕು.
ಪರಿಣಾಮಕಾರಿ ಭದ್ರತಾ ಕ್ರಮಗಳು ಎಂದರೆ ಅಪಾಯ ಸಂಭವಿಸುವ ಸಾಧ್ಯತೆಯನ್ನು ಕಡಿಮೆ ಮಾಡುವ ಕಾರ್ಯಗಳಾಗಿವೆ (ಉದಾಹರಣೆಗೆ ನಿಮ್ಮ ಕಾರನ್ನು ಸರ್ವಿಸ್ ಮಾಡಿಸುವುದು ಮತ್ತು ಅಪಘಾತವನ್ನು ತಪ್ಪಿಸಲು ನಿಧಾನವಾಗಿ ಚಾಲನೆ ಮಾಡುವುದು), ಮತ್ತು ಅಪಾಯ ಸಂಭವಿಸಿದಲ್ಲಿ ಪರಿಣಾಮವನ್ನು ಕಡಿಮೆ ಮಾಡುವ ಕ್ರಮಗಳು ಕೈಗೊಳ್ಳುವುದಾಗಿದೆ (ಉದಾಹರಣೆಗೆ ಅಪಘಾತ ಸಂಭವಿಸಿದ್ದೇ ಆದಲ್ಲಿ ಸೀಟ್‌ಬೆಲ್ಟ್‌ನ್ನು ಧರಿಸುವುದು).

### ಬೆದರಿಕೆಗಳು

ಬೆದರಿಕೆಯೆಂದರೆ ಯಾರೋ ಒಬ್ಬರು ಬೇರೊಬ್ಬರ ಮೇಲೆ ಅಥವಾ ಅವರ ಕೆಲಸದ ಮೇಲೆ ತೊಂದರೆ, ಶಿಕ್ಷೆ ಅಥವಾ ಹಾನಿಯನ್ನು ಉಂಟುಮಾಡುವ ಘೋಷಣೆ, ಸೂಚನೆ ಅಥವಾ ಸಾಧ್ಯತೆ ಎಂದು ಮುಂಚೂಣಿಯಲ್ಲಿರುವ ರಕ್ಷಕರು ಬೆದರಿಕೆಯನ್ನು ವ್ಯಾಖ್ಯಾನಿಸಿದ್ದಾರೆ. ಬೆದರಿಕೆಯು ಸಾಮಾನ್ಯವಾಗಿ ನಿಮ್ಮ ಕೆಲಸದ ಮೇಲೆ ಪರಿಣಾಮ ಬೀರುವ ಮತ್ತು ಯಾರೋ ಒಬ್ಬರು ನಿಮ್ಮ ಕೆಲಸವನ್ನು ನಿಯಂತ್ರಿಸಲು ಮತ್ತು ಅದರ ಪ್ರಗತಿಯನ್ನು ತಡೆಯಲು ಬಯಸುತ್ತಾರೆ ಎಂದಾಗುತ್ತದೆ. ಇದು ನಿಮ್ಮ ಮೇಲೆ, ನಿಮ್ಮ ಸಂಸ್ಥೆಯ ಮೇಲೆ ಅಥವಾ ನಿಮ್ಮ ಕುಟುಂಬದ ಮೇಲೆ ಒಂದು ಲಿಖಿತ ಅಥವಾ ಮೌಖಿಕ ಹೇಳಿಕೆಯ ರೂಪದಲ್ಲಿ ನೇರವಾದ ಬೆದರಿಕೆ ಆಗಿರಬಹುದು, (ಉದಾ. "ನೀವು ಬೇಸಿಗೆಯಲ್ಲಿ ಬದುಕುವುದಿಲ್ಲ" ಅಥವಾ "ಮುಂದಿನ ವರ್ಷ ನಿಮ್ಮ ಸಂಸ್ಥೆಯನ್ನು ಕಾನೂನುಬದ್ಧವಾಗಿ ನೋಂದಾಯಿಸಲಾಗುವುದಿಲ್ಲ" ಇತ್ಯಾದಿ), ಅಥವಾ ನಿಮ್ಮ ಮನೆ ಬಾಗಿಲಲ್ಲಿ ಸತ್ತ ಪ್ರಾಣಿಗಳನ್ನು ಹಾಕಿರುವಂತಹ ಸಾಂಕೇತಿಕ ಬೆದರಿಕೆಗಳಾಗಬಹುದು. ನೀವು ಕೆಲಸಮಾಡುವ ಅದೇ ವಿಷಯದ ಮೇಲೆ ಇತರ ಮಾನವ ಹಕ್ಕುಗಳ ರಕ್ಷಕರ ವಿರುದ್ಧವೂ ಬೆದರಿಕೆಗಳನ್ನು ಹಾಕೂವುದು ಕೂಡ ಒಂದು ಸಂಭವನೀಯ ಬೆದರಿಕೆಯಾಗಿರಬಹುದು. ಅಂತಿಮವಾಗಿ, ಭದ್ರತಾ ಘಟನೆಗಳು – ಸ್ವತಃ ಒಂದು ವಿಷಯವಿದ್ದು ಮತ್ತು ಅದು ಸಮಸ್ಯೆಯಾಗುವುದರ ಜೊತೆಗೆ – ಮುಂಬರುವ ಬೆದರಿಕೆಗಳ ಸೂಚನೆಯೂ ಆಗಿರಬಹುದು.  ಅನಾಮಧೇಯ ಫೋನ್ ಕರೆಗಳು, ನಿಮ್ಮ ಮನೆ ಅಥವಾ ಕಚೇರಿಯಗೆ ಬಲವಂತವಾಗಿ ಪ್ರವೇಶಿಸುವುದು, ನಿಮ್ಮ ಅಥವಾ ನಿಮ್ಮ ಕಚೇರಿಯ ಮೇಲೆ ಕಣ್ಣಿಡುವುದು ಇತ್ಯಾದಿಗಳು ಭದ್ರತಾ ಘಟನೆಗಳಲ್ಲಿ ಸೇರಿವೆ.

ಸಂದರ್ಭಗಳು ಬೇಗನೆ ಬದಲಾಗಬಹುದು ಎಂಬುದನ್ನು ನೆನಪಿನಲ್ಲಿ ಇರಿಸಿಕೊಳ್ಳುವುದು ಬಹಳ ಮುಖ್ಯವಾಗಿದೆ. ಆದ್ದರಿಂದ, ಎಲ್ಲಾ ಬೆದರಿಕೆಗಳನ್ನು ಗಂಭೀರವಾಗಿ ಪರಿಗಣಿಸಬೇಕು ಮತ್ತು ಅಪಾಯವನ್ನು ನಿರ್ವಹಿಸಲು ಕ್ರಮಗಳನ್ನು ತೆಗೆದುಕೊಳ್ಳಬೇಕು. ಭದ್ರತಾ ಪರಿಸ್ಥಿತಿಯ ಬಗ್ಗೆ ಸಂಪೂರ್ಣ ಚಿತ್ರಣವನ್ನು ಹೊಂದುವ ನಿಟ್ಟಿನಲ್ಲಿ ಎಲ್ಲಾ ಬೆದರಿಕೆಗಳು ಮತ್ತು ಘಟನೆಗಳನ್ನು ಗಮನಿಸುವ ನೊಂದಣಿ ಪುಸ್ತಕವನ್ನು (ಲಾಗ್ ಬುಕ್) ನಿರ್ವಹಿಸುವುದು ಸಹ ಮುಖ್ಯವಾಗಿದೆ. ಬೆದರಿಕೆಗಳನ್ನು ಅಥವಾ ಘಟನೆಗಳನ್ನು ಆಂತರಿಕವಾಗಿ ವರದಿ ಮಾಡದಿದ್ದರೆ, ಫಲಿತಾಂಶದ ಮೌಲ್ಯಮಾಪನವು ದೋಷಪೂರಿತವಾಗಬಹುದು. ನಿಮ್ಮ ಕೆಲಸವನ್ನು ಪರಿಣಾಮಕಾರಿಯಾಗಿ ಮುಂದುವರಿಸುವಾಗ ಬೆದರಿಕೆಯ ಸವಾಲನ್ನು ಸಾಧ್ಯವಾದ ಮಟ್ಟಿಗೆ ನಿರ್ವಹಿಸಲು ಸಾಧ್ಯವಾಗುತ್ತದೆ. ನೀವು ಎದುರಿಸುತ್ತಿರುವ ಬೆದರಿಕೆಗಳನ್ನು ವಿಶ್ಲೇಷಿಸಲು ಸಹಾಯ ಮಾಡುವ ನಿಟ್ಟಿನಲ್ಲಿ ಮುಂಚೂಣಿಯಲ್ಲಿರುವ ರಕ್ಷಕರು ಕೆಲವು ಪ್ರಶ್ನೆಗಳನ್ನು ಅಭಿವೃದ್ಧಿಪಡಿಸಿದ್ದಾರೆ. ನೀವು ಈ ಪ್ರಶ್ನೆಗಳನ್ನು ಮತ್ತು ಹೆಚ್ಚುವರಿ ಮಾಹಿತಿಯನ್ನು ಕಾರ್ಯಪುಸ್ತಕದಲ್ಲಿ ಕಾಣಬಹುದು.



**ಅಪಾಯದ ಮೌಲ್ಯಮಾಪನಗಳು ಮತ್ತು ಬೆದರಿಕೆಯ ವಿಶ್ಲೇಷಣೆ**


- ಬೆದರಿಕೆಯನ್ನು ಸುತ್ತುವರೆದಿರುವ ನಿಖರವಾದ ಸಂಗತಿಗಳು ಯಾವುವು?
- ಕಾಲಾನಂತರದಲ್ಲಿ ಬೆದರಿಕೆಗಳ ಮಾದರಿಗಳು ಇದೆಯೇ?
- ಬೆದರಿಕೆಯ ಹಿಂದಿನ ಉದ್ದೇಶವೇನು?
- ಯಾರು ಬೆದರಿಕೆ ಹಾಕುತ್ತಿದ್ದಾರೆ ಎಂಬುವುದು ನಿಮಗೆ ತಿಳಿದಿದೆಯೇ?
- ಬೆದರಿಕೆಯನ್ನು ಒಂದು ಕ್ರಮವಾಗಿ ತೆಗೆದುಕೊಳ್ಳುತ್ತಾರೆ ಎಂದು ನೀವು ಭಾವಿಸುತ್ತೀರಾ?

### ದುರ್ಬಲತೆಗಳು

ಒಬ್ಬ ರಕ್ಷಕರು ಅಥವಾ ಒಂದು ಗುಂಪು ತೊಂದರೆ ಅಥವಾ ಹೆಚ್ಚು ಹಾನಿಯಾಗುವ ಸಾಧ್ಯತೆಗಳನ್ನು ಉಂಟು ಮಾಡುವ ಯಾವುದೇ ಅಂಶಗಳು ಅಥವಾ ದೌರ್ಬಲ್ಯವನ್ನು ಈ ದುರ್ಬಲತೆಗಳು ಎಂದು ಉಲ್ಲೇಖಿಸುತ್ತವೆ. ಇದು ವ್ಯಕ್ತಿಯ ವೈದ್ಯಕೀಯ ಸ್ಥಿತಿಯಿಂದ ಹಿಡಿದು ಸಂಸ್ಥೆಯು ನಿರ್ದಿಷ್ಟವಾಗಿ ಸೂಕ್ಷ್ಮ ವಿಷಯಗಳ ಮೇಲೆ ಕೇಂದ್ರೀತವಾಗಿರುವುದು ಅಥವಾ ದೂರದ ಪ್ರದೇಶಗಳಲ್ಲಿ ಚಟುವಟಿಕೆಗಳನ್ನು ನಡೆಸುವುದು ಮತ್ತು ಸಮಸ್ಯೆಗಳು ಎದುರಾದಾಗ ಎಚ್ಚರಿಕೆಯನ್ನು ನೀಡಲು ಮೊಬೈಲ್ ವ್ಯಾಪ್ತಿ ಇಲ್ಲದಿರುವುದು.

### ಸಾಮರ್ಥ್ಯಗಳು

ಸಾಮರ್ಥ್ಯಗಳು ರಕ್ಷಕರು ಅಥವಾ ಗುಂಪನ್ನು ಬಲಪಡಿಸುವ ಅಂಶಗಳಾಗಿವೆ ಮತ್ತು ಇದರಿಂದಾಗಿ ಅವರ ಭದ್ರತೆಯು ಸುಧಾರಿಸುತ್ತದೆ. ಹೀಗಾಗಿ, ರಕ್ಷಕರು ಅಥವಾ ಗುಂಪು ಎದುರಿಸುತ್ತಿರುವ ಅಪಾಯದ ಮಟ್ಟವನ್ನು, ಅವರು ಸ್ವೀಕರಿಸಿದ ಬೆದರಿಕೆಗಳು, ವ್ಯಕ್ತಿಯ ಅಥವಾ ಗುಂಪಿನ ದುರ್ಬಲತೆ ಮತ್ತು ಬೆದರಿಕೆಗಳನ್ನು ನಿರ್ವಹಿಸುವ ಸಾಮರ್ಥ್ಯದ ಪ್ರಕಾರ ಲೆಕ್ಕಹಾಕಲಾಗುತ್ತದೆ. ನೀವು ಬೆದರಿಕೆಯನ್ನು ಕಡಿಮೆ ಮಾಡಲು ಸಾಧ್ಯವಾಗದಿದ್ದರೂ ಕೂಡ, ನಿಮ್ಮ ದುರ್ಬಲತೆಯನ್ನು ಕಡಿಮೆ ಮಾಡುವ ಮೂಲಕ ಮತ್ತು / ಅಥವಾ ನಿಮ್ಮ ಸಾಮರ್ಥ್ಯಗಳನ್ನು ಹೆಚ್ಚಿಸುವ ಮೂಲಕ ನೀವು ಅಪಾಯವನ್ನು ಕಡಿಮೆ ಮಾಡಬಹುದು. ಮೇಲೆ ತಿಳಿಸಿದಂತೆ, ಅಪಾಯಗಳು ಸಂದರ್ಭಗಳಗಿರುತ್ತವೆ– ಮತ್ತು ಲಿಂಗ–ನಿರ್ದಿಷ್ಟವಾಗಿರುತ್ತದೆ ಮತ್ತು ಈ ರೀತಿಯಾಗಿಯೇ ಅದನ್ನು ಮೌಲ್ಯಮಾಪನ ಮಾಡಬೇಕು.




ಮಾನವ ಹಕ್ಕು ರಕ್ಷಕರೊಂದಿಗಿನ ಭದ್ರತಾ ಕಾರ್ಯಾಗಾರದ ಚಿತ್ರ

### ಮೌಲ್ಯಮಾಪನ ಮತ್ತು ವಿಶ್ಲೇಷಣೆ

ಅಪಾಯವನ್ನು ಮೌಲ್ಯಮಾಪನ ಮಾಡಲು ಮುಂಚೂಣಿಯಲ್ಲಿರುವ ರಕ್ಷಕರು ಅಪಾಯದ ಸೂತ್ರವನ್ನು ಖ=ಖಿಥಿಗಿ/ಅ ಒಂದು ಸಾಧನವಾಗಿ ಬಳಸುತ್ತಾರೆ. ನೀವು ಎದುರಿಸುವ ಅಪಾಯದ ಸ್ವರೂಪವನ್ನು ಗುರುತಿಸಲು ಸಹಾಯ ಮಾಡುವ ಮೊದಲ ಮತ್ತು ಪ್ರಮುಖ ಸಾಧನವಾಗಿದೆ. ಇದು ಗಣಿತಾತ್ಮಕ ಲೆಕ್ಕಾಚಾರದ ಪರಿಹಾರಕ್ಕೆ ಕಾರಣವಾಗುವುದಿಲ್ಲ ಮತ್ತು ಇದು ಮಾನವ ಜ್ಞಾನ ಮತ್ತು ವ್ಯಕ್ತಿನಿಷ್ಠ ಮೌಲ್ಯಮಾಪನಕ್ಕೆ ಆಧಾರವಾಗಿದೆ. ಈ ಸೂತ್ರದ ಒಂದು ಪ್ರಯೋಜನವೆಂದರೆ ಅದು ಬಹುಮುಖವಾಗಿದೆ ಮತ್ತು ಪ್ರಪಂಚದ ಯಾವುದೇ ಭಾಗದಲ್ಲಿ ಮತ್ತು ಯಾವುದೇ ಪರಿಸ್ಥಿತಿಯಲ್ಲಿ ಬಳಸಬಹುದಾಗಿದೆ. ಅಪಾಯವನ್ನು ಮೌಲ್ಯಮಾಪನ ಮಾಡುವ ರೂಪರಹಿತ ಪ್ರಕ್ರಿಯೆಗೆ ಒಂದು ರಚನೆ ಮತ್ತು ಆದ್ಯತೆಯನ್ನು ಸಹ ಒದಗಿಸುತ್ತದೆ., ಅಪಾಯದ ಮೌಲ್ಯಮಾಅನವನ್ನು ಮೊದಲ ಬಾರಿ ಮಾಡಿದಾಗ ಅದು ಬಹಳ ಸವಾಲಾಗಿ ನಿಮಗೆ ಕಾಣಬಹುದು ಎಂಬುದನ್ನು ನೆನಪಿನಲ್ಲಿ ಇಟ್ಟುಕೊಳ್ಳಿ, ಆದರೆ ನಿಯಮಿತವಾಗಿ ನವೀಕರಣಗಳೊಂದಿಗೆ ಸಮಯ ಹೋದಂತೆ ಸುಲಭವೆಂದು ಅನಿಸುತ್ತದೆ. ಅಪಾಯದ ವಾತಾವರಣದಲ್ಲಿ ಧೀರ್ಘಾವಧಿಯಿಂದ ವಾಸಿಸುತ್ತಿರುವ ಅಥವಾ ಕ್ಷೀಣಿಸುತ್ತಿರುವ ಪರಿಸ್ಥಿತಿಯಲ್ಲಿ ತಮ್ಮನ್ನು ತಾವು ಕಂಡುಕೊಳ್ಳುವ ಮಾನವ ಹಕ್ಕು ರಕ್ಷಕರಿಗೆ ವಿಶೇಷವಾಗಿ ಉಪಯುಕ್ತವಾಗುವ ಈ ಅಪಾಯದ ಆಯಾಮಗಳನ್ನು ಮುಂಚೂಣಿಯಲ್ಲಿರುವ ರಕ್ಷಕರು ಕೂಡ ಬಳಸುತ್ತಾರೆ. ಅಪಾಯಗಳ ಸಂಭವನೀಯತೆ ಮತ್ತು ಪ್ರಭಾವವನ್ನು ನಿರ್ಣಯಿಸಲು ಈ ಆಯಾಮಗಳನ್ನು ಬಳಸಬಹುದು ಮತ್ತು ನಿಮ್ಮ ಭದ್ರತಾ ಯೋಜನೆಯನ್ನು ಅಭಿವೃದ್ಧಿಪಡಿಸುವಲ್ಲಿ ಮುಂದಿನ ಹಂತವನ್ನು ರೂಪಿಸಬಹುದು. ನೀವು ಕಾರ್ಯಪುಸ್ತಕದಲ್ಲಿ ಅಪಾಯದ ಸೂತ್ರ ಮತ್ತು ಅಪಾಯದ ಆಯಾಮ ಇವೆರಡನ್ನೂ ಕಾಣಬಹುದು.

ನಿಮ್ಮ ಸ್ವಂತ ವ್ಯಯಕ್ತಿಕ ಮತ್ತು ಸಾಂಸ್ಥಿಕ ಭದ್ರತಾ ಯೋಜನೆಯನ್ನು ಸಿದ್ಧಪಡಿಸಲು ಅನುಕೂಲವಾಗುವಂತೆ ಈ ಮುಂಚೂಣಿಯಲ್ಲಿರುವ ರಕ್ಷಕರ ಕಾರ್ಯಪುಸ್ತಕವು ನಿಮ್ಮ ಸಂದರ್ಭ ವಿಶ್ಲೇಷಣೆ, ಅಪಾಯದ ಸೂತ್ರ, ಅಪಾಯದ ಆಯಾಮ, ಬೆದರಿಕೆ ವಿಶ್ಲೇಷಣೆಯ ಪ್ರಶ್ನೆಗಳು ಮತ್ತು ಒತ್ತಡವನ್ನು ಎದುರಿಸುವ ಯೋಜನೆಗಳ ಮೂಲಕ ಮಾರ್ಗದರ್ಶನ ನೀಡುತ್ತದೆ. ಒಂದು ಒತ್ತಡದ ಪರಿಸ್ಥಿತಿಯಲ್ಲಿ ನೀವು ತರಬೇತಿಯನ್ನು ಪಡೆದದ್ದನ್ನು ಮಾತ್ರ ನಿಮ್ಮಿಂದ ಮಾಡಲು ಸಾಧ್ಯವಾಗುತ್ತದೆ ಎಂಬುದನ್ನು ಗಮನಿಸುವುದು ಬಹಳ ಮುಖ್ಯ. ನೀವು ಗುರುತಿಸಿದ ಭದ್ರತಾ ಅಪಾಯಗಳನ್ನು ಆಧಾರಿತವಾಗಿ ಸಿದ್ದಪಡಿಸಿದ ಭದ್ರತಾ ಯೋಜನೆಗಳನ್ನು ಅಭ್ಯಾಸ ಮಾಡುವುದು ನಿಮ್ಮ ಕೆಲಸದ ಪ್ರಮುಖ ಪಾತ್ರವಾಗಬೇಕು. ಜೊತೆಗೆ, ಒಮ್ಮೆ ನಿಮ್ಮ ಭದ್ರತಾ ಯೋಜನೆಗಳು ಕಾರ್ಯರೂಪದಲ್ಲಿದ್ದಾಗ, ಅದು ಸೂಕ್ತವಾಗಿದೆಯೇ ಎಂಬುವುದನ್ನು ಖಾತರಿಪಡಿಸಿಕೊಳ್ಳಲು ನೀವು ನಿಯಮಿತವಾಗಿ ವಿಮರ್ಶಿಸಬೇಕು (ಅದರಲ್ಲೂ ಭದ್ರತಾ ಘಟನೆಗಳು ನಡೆದ ನಂತರ). ಇದನ್ನು ಒಂದು ಬಾರಿ ಮಾಡುವದಕ್ಕಿಂತ ಭದ್ರತೆಯನ್ನು ಒಂದು ಪ್ರಕ್ರಿಯೆಯಾಗಿ ಪರಿಗಣಿಸುವುದು ಬಹಳ ಸಹಾಯಕವಾಗಿರುತ್ತದೆ.

### ಯೋಗಕ್ಷೇಮ ಮತ್ತು ಒತ್ತಡ ನಿರ್ವಹಣೆ

ಮಾನವ ಹಕ್ಕುಗಳ ರಕ್ಷಕರಾಗಿ ನೀವು ನಿಮ್ಮ ಕೆಲಸವನ್ನು ಹೆಚ್ಚು ಪರಿಣಾಮಕಾರಿ ಮತ್ತು ಜವಾಬ್ದಾರಿಯುತವಾಗಿ ನಿರ್ವಹಿಸಲು ನಿಮ್ಮ ದೇಹ ಮತ್ತು ಮನಸ್ಸಿನ ಆರೈಕೆಯನ್ನು ನೋಡಿಕೊಳ್ಳುವ ಪ್ರಾಮುಖ್ಯತೆಯ ಬಗ್ಗೆ ಹೆಚ್ಚುತ್ತಿರುವ ಅಂಗೀಕಾರದಿಂದಾಗಿ, ಇತ್ತೀಚಿನ ವರ್ಷಗಳಲ್ಲಿ, ಮಾನಸಿಕ ಮತ್ತು ಮನೋಸಾಮಾಜಿಕ ಭದ್ರತೆಯ ಅಂಶಗಳ ಮೇಲೆ ಹೆಚ್ಚಿನ ಗಮನ ಹರಿಸಲಾಗಿದೆ.

ಭಾರೀ ಕೆಲಸದ ಹೊರೆಯಿಂದಾಗಿ ಹೆಚ್ಚಿನ ಸಮಯದವರೆಗೆ ಕೆಲಸ, ಕೆಲಸದಲ್ಲಿ ಒಳಗೊಂಡಿರುವ ಅಪಾಯಗಳು ಮತ್ತು ಸೀಮಿತ ಸಂಪನ್ಮೂಲಗಳನ್ನು ಹೊಂದಿರುವುದರಿಂದ ಮಾನವ ಹಕ್ಕುಗಳ ರಕ್ಷಕರು ಹೆಚ್ಚಿನ ಮಟ್ಟದ ಒತ್ತಡವನ್ನು ಅನುಭವಿಸುತ್ತಾರೆ. ಪ್ರೇರಣೆ ಮತ್ತು ಪರಿಣಾಮಕಾರಿತ್ವದ ವಿಷಯದಲ್ಲಿ ಒಂದು ನಿರ್ದಿಷ್ಟ ಪ್ರಮಾಣದ ಒತ್ತಡವು ಸಕಾರಾತ್ಮಕವಾಗಿದ್ದರೂ, ತೀವ್ರವಾದ ಮತ್ತು ದೀರ್ಘಕಾಲೀನ ಒತ್ತಡಕ್ಕೆ ಒಡ್ಡಿಕೊಳ್ಳುವುದರಿಂದ ನಿಮ್ಮ ದೇಹ ಮತ್ತು ಮನಸ್ಸಿನ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತದೆ, ಇದು ಮಾನವ ಹಕ್ಕುಗಳ ರಕ್ಷಕರಾಗಿ ನಿಮ್ಮ ಪರಿಣಾಮಕಾರಿತ್ವವನ್ನು ಕಡಿಮೆ ಮಾಡುತ್ತದೆ, ಅದರಿಂದ ನಿಮ್ಮ ನಿರ್ಧಾರಗಳ ಮೇಲೆ ಋಣಾತ್ಮಕವಾಗಿ ಪರಿಣಾಮ ಬೀರುತ್ತದೆ ಮತ್ತು ನೀವು ಒಬ್ಬ ವ್ಯಕ್ತಿಯಾಗಿ ಮತ್ತು ನಿಮ್ಮ ಸಂಬಂಧಗಳಂತೆ ಪರಿಣಾಮ ಬೀರುತ್ತದೆ.

ವ್ಯಕಿಯಲ್ಲಿನ ಒತ್ತಡವು –, ಸಮಯ– ಮತ್ತು ಸಂದರ್ಭಕ್ಕೆ–ನಿರ್ದಿಷ್ಟವಾಗಿರುತ್ತದೆ, ಅಂದರೆ ಒತ್ತಡವು ಸಂಬಂಧಿಕವಾಗಿರುತ್ತದೆ ಮತ್ತು ಒಬ್ಬ ವ್ಯಕ್ತಿಗೆ ಒತ್ತಡವನ್ನು ಉಂಟುಮಾಡುವ ಅಂಶಗಳು ಇದೇ ರೀತಿಯ ಪರಿಸ್ಥಿತಿಯಲ್ಲಿ ಇರುವ ಇನ್ನೊಬ್ಬ ವ್ಯಕ್ತಿಯ ಮೇಲೆ ಪರಿಣಾಮ ಬೀರುವುದಿಲ್ಲ. ಒಬ್ಬ ವ್ಯಕ್ತಿಯು ಸಮಯದ ವಿಭಿನ್ನ ಹಂತಗಳಲ್ಲಿ ಒಂದೇ ವಿಷಯದ ಮೂಲಕ ವಿವಿಧ ಹಂತದ ಒತ್ತಡವನ್ನು ಅನುಭವಿಸಬಹುದು. ಇದಲ್ಲದೆ, ವಿಭಿನ್ನ ಸಂದರ್ಭಗಳಲ್ಲಿ ಇದೇ ರೀತಿಯ ಅನುಭವಗಳು ಒತ್ತಡದ ಅನುಭವವನ್ನು ಬದಲಾಯಿಸಬಹುದು. ಉದಾಹರಣೆಗೆ, ಒಂದು ನಿರ್ದಿಷ್ಟ ಸನ್ನಿವೇಶದಲ್ಲಿ ಒತ್ತಡದ ಭಾವನೆಯನ್ನು ಕಡಿಮೆ ಮಾಡಲು ಬೆಂಬಲ ಸಂಬಂಧಗಳು ಕಾರಣವಾಗಬಹುದು.



> ಮಾನವ ಹಕ್ಕುಗಳ ರಕ್ಷಕನಾಗಿ ನನ್ನ ಕೆಲಸದ ಅತ್ಯಂತ ಕಷ್ಟಕರವಾದ ಭಾಗ [...] ಹಾಗೆ ಮಾಡುತ್ತಿರುವಾಗ ಇತರರು ಸುರಕ್ಷಿತವಾಗಿ ಇರಲು ನೀವು ಏನು ಮಾಡಬಹುದು ಎಂಬುದರ ಬಗ್ಗೆ ನೀವು ಗಮನ ಹರಿಸುವುದರಿಂದ, ನೀವು ನಿಮ್ಮ ಸ್ವಂತ ಹಕ್ಕುಗಳನ್ನು ಮರೆತುಬಿಡುತ್ತೀರಿ, ಆದ್ದರಿಂದ ನಿಮ್ಮ ವೈಯಕ್ತಿಕ ಯೋಗಕ್ಷೇಮ ಮತ್ತು ಕುಟುಂಬದ ಹಕ್ಕು, ವಿಶ್ರಾಂತಿ ಪಡೆಯುವ ಹಕ್ಕು, ಈ ಗ್ರಹದಲ್ಲಿ ಶಾಂತಿಯುತ ಅಸ್ತಿತ್ವದ ಹಕ್ಕನ್ನು ನೀವು ರಾಜಿ ಮಾಡಿಕೊಂಡಿರುವಿರಿ, ನೀವು ನಿಮ್ಮ ಸ್ವಂತ ಸುರಕ್ಷತೆಯ ಶಿಷ್ಟಾಚಾರವನ್ನು ಮರೆತುಬಿಡುತ್ತೀರಿ, ನಿಯಮಿತವಾಗಿ ಊಟ ಮಾಡುವ ನಿಮ್ಮ ಸ್ವಂತ ಜೀವನವನ್ನು ನೀವು ಮರೆತುಬಿಡುತ್ತೀರಿ, ನಿಮ್ಮ ಸಾಮಾಜಿಕ ಜೀವನದ ಬಗ್ಗೆ ನೀವು ಮರೆತುಬಿಡುತ್ತೀರಿ ಮತ್ತು ಇತರರ ಹಕ್ಕುಗಳನ್ನು ರಕ್ಷಿಸುವ ಸ್ವಾಭಾವಿಕ ಪರಿಣಾಮಗಳಾಗಿ... ನೀವು ನಿರಂತರವಾಗಿ ಕರ್ತವ್ಯದಲ್ಲಿಯೇ ಇರುತ್ತೀರಿ.
>
> – ಹಸನ್ ಶಿರೆ, ಉಗಾಂಡಾದ ಮಾನವ ಹಕ್ಕುಗಳ ರಕ್ಷಕರು[12]

12 https://bit.ly/3aa8opy



ಮಾನವ ಹಕ್ಕುಗಳ ರಕ್ಷಕರಿಗೆ ಸುರಕ್ಷತೆಯ ಮೇಲೆ ಗನಮಹರಿಸಿದ್ದಲ್ಲಿ ಸ್ವ–ಆರೈಕೆಯ ಕೇಂದ್ರಿತವಾಗಿದೆ. ಬಳಲುವಿಕೆ ಮತ್ತು ಹೆಚ್ಚಿನ ಮಟ್ಟದ ಒತ್ತಡವು ಮಾನವ ಹಕ್ಕುಗಳ ರಕ್ಷಕರಿಗೆ ಅಭದ್ರತೆಯನ್ನು ನೀಡುತ್ತದೆ ಎಂದು ಪರಿಗಣಿಸಲಾಗಿದ್ದು ಈ ಅಂಶಗಳಿಂದ ಅವರು ನಿರ್ಧಾರ ತೆಗೆದುಕೊಳ್ಳುವಲ್ಲಿ ರಾಜಿಯಾಗುತ್ತಾರೆ. ಸ್ವ–ಆರೈಕೆಗೆ ಕಾರ್ಯತಂತ್ರಗಳ ಬಗ್ಗೆ ಚರ್ಚೆಗಳನ್ನು ನಡೆಸುತ್ತಿರುವ ಮಹಿಳಾ ಮಾನವ ಹಕ್ಕು ರಕ್ಷಕರ ಗುಂಪು (ಚಿತ್ರ ಸಲ್ಲಿಕೆ: ಮಹಿಳಾ ಮಾನವ ಹಕ್ಕು ರಕ್ಷಕರ ಅಂತಾರಾಷ್ಟ್ರೀಯ ಒಕ್ಕೂಟ)

ಮುಂಚೂಣಿಯಲ್ಲಿರುವ ರಕ್ಷಕರು ಆಳವಾದ ಒತ್ತಡದ ಅವಧಿಗಳನ್ನು ಅನುಭವಿಸಿರುವ ಮತ್ತು ಒತ್ತಡ ಅವರ ಸುರಕ್ಷತೆಯ ಮೇಲೆ ಪರಿಣಾಮ ಬೀರುವ ಅಂಶಗಳಲ್ಲಿ ಒಂದೆಂದು ಗುರುತಿಸಿರುವ ಮಾನವ ಹಕ್ಕುಗಳ ರಕ್ಷಕರನ್ನು ಸಮಾಲೋಚಿಸಿದ್ದಾರೆ, ಈ ರಕ್ಷಕರು ಸುರಕ್ಷತೆ–ಸಂಬಂಧಿತ ಅಂಶಗಳನ್ನು ವಿವರಿಸಿದ್ದಾರೆ, ಉದಾಹರಣೆಗೆ ಅಪಾಯ ಮತ್ತು ವೈಯಕ್ತಿಕ ಭದ್ರತೆಯ ಬಗ್ಗೆ ಅಸಡ್ಡೆ ತೋರುವುದು, ನಿರ್ಧಾರಗಳನ್ನು ತೆಗೆದುಕೊಳ್ಳುವುದು ಕಷ್ಟಕರ ಎನಿಸುವುದು, "ಬಳಲಿದ್ದೇನೆ" ಮತ್ತು ದಣಿವಾಗಿದೆ ಎಂದು ಅನಿಸುವುದು, ಹೆಚ್ಚು ಮದ್ಯಪಾನವನ್ನು ಮಾಡುವುದು ಮತ್ತು ಕೋಪಗೊಂಡ ಅಥವಾ ಮನಸ್ಥಿತಿಯ ವರ್ತನೆಯಿಂದಾಗಿ ತಮ್ಮ ಜಾಲದಲ್ಲಿರುವ ಬೆಂಬಲಿಗರನ್ನು ದೂರವಿಡುವುದು.

ನಿದ್ದೆ, ವಿಶ್ರಾಂತಿ ಮತ್ತು ವ್ಯಾಯಾಮಕ್ಕಾಗಿ ಸಮಯವನ್ನು ಮೀಸಲಿಡುವುದು ಮತ್ತು ಆಹಾರದ ಬಗ್ಗೆ ದಿನನಿತ್ಯ ಗಮನ ನೀಡುವುದು ಒತ್ತಡದ ಉತ್ತಮ ನಿರ್ವಹಣೆಗೆ ಸಾಧನಗಳಾಗಿದೆ. ನೀವು ಮತ್ತು ನಿಮ್ಮ ಸಹೋದ್ಯೋಗಿಗಳು ಅಪಾಯಗಳ ಬಗ್ಗೆ ಮುಕ್ತವಾಗಿ ಮಾತನಾಡುವಂತೆ ಮತ್ತು ಅಗತ್ಯವಿದ್ದಾಗ ನಿಮ್ಮ ಕೆಲಸದಿಂದ ವಿರಾಮಗಳನ್ನು ತೆಗೆದುಕೊಳ್ಳಲು ಪರಸ್ಪರ ಪ್ರೋತ್ಸಾಹಿಸಬೇಕು. ನೀವು ಅತಿಯಾಗಿ ಕೆಲಸ ಮಾಡದಂತೆ ಒಬ್ಬರಿಗೊಬ್ಬರು ಪ್ರೋತ್ಸಾಹಿಸಬೇಕು, ಎಕೆಂದರೆ ಇದರಿಂದಾಗಿ ಕಾಲಕ್ರಮೇಣ ನಿಮ್ಮ ಕಾರ್ಯಕ್ಷಮತೆಯ ಗುಣಮಟ್ಟವು ಕ್ಷೀಣಿಸುತ್ತದೆ, ನಿಮ್ಮ ಸಂಸ್ಥೆಯು ಪ್ರಾಯೋಗಿಕ ಮತ್ತು / ಅಥವಾ ಸಾಂಕೇತಿಕ ಚಟುವಟಿಕೆಗಳನ್ನು ಆಯೋಜಿಸುವ ಮೂಲಕ ತಂಡದ ಉತ್ಸಾಹವನ್ನು ಪ್ರೋತ್ಸಾಹಿಸಬಹುದು ಮತ್ತು ಬಲಪಡಿಸಬಹುದು.

> '[...]ಈ ಯುವ ಮಹಿಳಾ ನಾಯಕಿಯರು ತಮ್ಮನ್ನು, ತಮ್ಮ ಸ್ವಂತ ಶಕ್ತಿಯನ್ನು, ತಮ್ಮ ಮನಸ್ಸನ್ನು, ತಮ್ಮ ದೇಹವನ್ನು, ತಮ್ಮ ಕುಟುಂಬಗಳನ್ನು, ಸುಸ್ಥಿರಗೊಳಿಸಿಕೊಳ್ಳಬೇಕು ಮತ್ತು ಆ ರೀತಿಯ ಮೂಲಭೂತ ವ್ಯವಸ್ಥೆಯೊಂದಿಗೆ ಅವರು ಕಾರ್ಯನಿರ್ವಹಿಸಬೇಕಾಗುತ್ತದೆ, ಆಗ ನಿಜವಾಗಿಯೂ
>
> – **ಆಶಾ ಕವಿತಾಳ್, ಭಾರತದ ಮಾನವ ಹಕ್ಕುಗಳ ರಕ್ಷಕರು**[13]

13 https://bit.ly/3aa8zRK



ಈ ಪ್ರಕ್ರಿಯೆಗೆ ನಿರ್ಣಾಯಕ ಅಂಶಗಳಾದ ಮುಕ್ತತೆ ಮತ್ತು ಪಾರದರ್ಶಕತೆಯ ಸಂಸ್ಕೃತಿಯ ರಚನೆಯ ಮೂಲಕ ನಿಮ್ಮ ಮಾನವ ಹಕ್ಕು ಸಂಸ್ಥೆಗಳಲ್ಲಿ ಸಾಂಸ್ಥಿಕ ಯೋಗಕ್ಷೇಮವನ್ನು ಖಾತರಿಪಡಿಸುವುದು ಕೂಡ ಅವಶ್ಯವಾಗಿರುತ್ತದೆ. ಇದರೊಂದಿಗೆ, ನಿಮ್ಮ ಸಿಬ್ಬಂದಿಗಳಿಗೆ ಮತ್ತು ಸ್ವಯಂಸೇವಕರಿಗೆ ತಾರತಮ್ಯ, ನಿಂದನೆ ಮತ್ತು ಕಿರುಕುಳದಿಂದ ಮುಕ್ತವಾದ ಕೆಲಸದ ವಾತಾವರಣವನ್ನು ರಚಿಸುವ ಮಹತ್ವವನ್ನು ನಾವು ಅರ್ಥೈಸುತ್ತೇವೆ. #Metoo ಅಭಿಯಾನವು ಎಲ್ಲಾ ಸಂದರ್ಭಗಳಲ್ಲಿ ಲೈಂಗಿಕ ತಾರತಮ್ಯವು ವ್ಯಾಪಕವಾಗಿದೆ ಮತ್ತು ನಮ್ಮ ಸ್ವಂತ ನಾಗರಿಕ ಸಮಾಜ ಸಂಸ್ಥೆಗಳಲ್ಲಿ ಈ ಉಲ್ಲಂಘನೆಗಳ ವಿರುದ್ಧ ನಾವು ಕೆಲಸ ಮಾಡಬೇಕು ಮತ್ತು ತಡೆಯಬೇಕು ಎಂದು ತೋರಿಸಿಕೊಟ್ಟಿದೆ. ಇತ್ತೀಚಿನ ವರ್ಷಗಳಲ್ಲಿ, ಸಾಕಷ್ಟು ಹಗರಣಗಳು ನಡೆದಿವೆ ಮತ್ತು ಸಮುದಾಯ ಮತ್ತು ಬಲಿಪಶುಗಳೊಂದಿಗೆ ಕೆಲಸ ಮಾಡುವ ಸಿಬ್ಬಂದಿ ಮತ್ತು ಸ್ವಯಂಸೇವಕರಿಗಾಗಿ ನಿರ್ಣಾಯಕ ಪ್ರಾಮುಖ್ಯತೆಗಳಾದ ರಕ್ಷಣಾ ನೀತಿಗಳನ್ನು ಮತ್ತು ರೂಢಿಗಳನ್ನು ಅಭಿವೃದ್ಧಿ ಪಡಿಸುವ ಅವಶ್ಯಕತೆಯ ಬಗ್ಗೆ ಅರಿವು ಮೂಡಿಸಿದೆ. ನಿಮ್ಮ ಸಂಸ್ಥೆಯು ವೈಯಕ್ತಿಕ ಉಲ್ಲಂಘನೆಗಳ ಅಪಾಯವನ್ನು ಕಡಿಮೆ ಮಾಡುವ ರಚನೆಗಳನ್ನು ರಚಿಸಬೇಕು ಮತ್ತು ನಿಮ್ಮ ಸಂಸ್ಥೆಯ ಸಿಬ್ಬಂದಿ ಅಥವಾ ಸ್ವಯಂಸೇವಕರು ಪ್ರತೀಕಾರದ, ತಾರತಮ್ಯದ ಯಾವುದೇ ಭಯವಿಲ್ಲದೆ ಅಥವಾ ಗಂಭೀರವಾಗಿ ಪರಿಗಣಿಸದೆ, ಅವಶ್ಯಕತೆ ಇದ್ದಲ್ಲಿ, ನಾಯಕತ್ವವನ್ನು ಎಚ್ಚರಿಸುವಲ್ಲಿ ಅವರಿಗೆ ಅನುಕೂಲ ಮಾಡಿಕೊಡಬೇಕು. ಎಲ್ಲಾ ರೀತಿಯ ತಾರತಮ್ಯ, ನಿಂದನೆ ಅಥವಾ ಕಿರುಕುಳದಂತಹ ಆರೋಪಗಳನ್ನು ಅನುಸರಣೆ ಮಾಡುವುದು ನಿಮ್ಮ ಸಂಸ್ಥೆಯ ಒಳಗಿನ ನಾಯಕತ್ವದ ಜವಾಬ್ದಾರಿಯಾಗಿದೆ. ಸಾಕಷ್ಟು ಮಾನವ ಹಕ್ಕುಗಳ ರಕ್ಷಕರು ಮಾನಸಿಕ ಆಘಾತವನ್ನು ಎದುರಿಸುತ್ತಿದ್ದಾರೆ ಎಂಬುದನ್ನು ನಾವು ಗುರುತಿಸಬೇಕು ಮತ್ತು ಬೆಂಬಲವನ್ನು ಪಡೆಯುವಂತೆ ಅವರನ್ನು ಪ್ರೋತ್ಸಾಹಿಸಬೇಕು.

**ಓದಲು/ ತಿಳಿದುಕೊಳ್ಳಲು ಇತರ ಸಂಪನ್ಮೂಲಗಳು:**

- ಯೋಗಕ್ಷೇಮ, ಅಪಾಯ ಮತ್ತು ಮಾನವ ಹಕ್ಕು ಅಭ್ಯಾಸದ ಬಗ್ಗೆ ಸಂಕ್ಷಿಪ್ತ ನೀತಿ Policy Brief on 'Wellbeing, Risk, and Human Rights Practice') [https://bit.ly/3bcQvGN]
- ಯೋಗಕ್ಷೇಮ ಮತ್ತು ಒತ್ತಡ ನಿರ್ವಹಣೆಗೆ ಸಂಪನ್ಮೂಲಗಳು (Resources for Wellbeing & Stress Management) [https://bit.ly/2UH1FNx]
- ನಮ್ಮ ಚಲನವಲನವನ್ನು ಸುಸ್ಥಿರಗೊಳಿಸುವುದು: ಪ್ರತಿದಿನವೂ ಸಮಗ್ರ ಭದ್ರತೆಯನ್ನು ಅಭ್ಯಾಸ ಮಾಡುವುದು (Making our movements sustainable: practicing holistic security every day) [https://bit.ly/3abEUb1]
- ಮಹಿಳಾ ಮಾನವ ಹಕ್ಕು ರಕ್ಷಕರಿಂದ ಸ್ವ–ಆರೈಕೆ (Self-care from women human rights defenders) [https://bit.ly/3dIX9fJ]



**ಸಾಂಕೇತಿಕ ಮತ್ತು ಪ್ರಾಯೋಗಿಕ ಅಭ್ಯಾಸಗಳು**

ಒತ್ತಡವನ್ನು ನಿವಾರಿಸುವಲ್ಲಿ ಒತ್ತಡ ಕಡಿಮೆ ಮಾಡುವ ವ್ಯಾಯಾಮಗಳು ಬಹಳ ಉಪಯುಕ್ತವಾಗಿದೆ. ಉದಾಹರಣೆಗೆ, ಒತ್ತಡ ಕಡಿಮೆ ಮಾಡುವ ವ್ಯಾಯಾಮಗಳಿಗಾಗಿ ಪ್ರತಿ ವಾರ 15 ನಿಮಿಷದ ಅವಧಿಯನ್ನು ಮೀಸಲಿಡಬಹುದು. ಒತ್ತಡವನ್ನು ಕಡಿಮೆ ಮಾಡಲು ವಾರದ ಅವಧಿಯು ಅಷ್ಟೇನೂ ಮಾಡದಿದ್ದರೂ, ಒಬ್ಬರ ತಮ್ಮ ಸ್ವಂತ ಯೋಗಕ್ಷೇಮವನ್ನು ಗಂಭೀರವಾಗಿ ಪರಿಗಣಿಸುವ ಅಭಿಪ್ರಾಯವನ್ನು ಉತ್ತೇಜಿಸುತ್ತದೆ. ವ್ಯಾಯಾಮಗಳಲ್ಲಿ ವಿಶ್ರಾಂತಿ ಅಥವಾ ಧ್ಯಾನದ ಅಭ್ಯಾಸಗಳನ್ನು ಅಥವಾ ಇತರ ಚಟುವಟಿಕೆಗಳಾದ ಉದಾಹರಣೆಗೆ ಆನ್‌ಲೈನ್‌ನಲ್ಲಿ ಹಾಸ್ಯ ವಿಡಿಯೋಗಳನ್ನು ವೀಕ್ಷಿಸುವುದು, ಹಾಡುವುದು, ನೃತ್ಯ ಮಾಡುವುದು ಅಥವಾ ಸಂಗೀತ ಮಾಡುವುದಾಗಿದೆ. ಸಂಸ್ಥೆಗಳು ಕೆಲಸದ ಹೊರಗೆ ವಿಶ್ರಾಂತಿ ಸಮಯವನ್ನು ಹೊರಾಂಗಣ ಚಟುವಟಿಕೆಗಳಲ್ಲಿ ಕಳೆಯಲು ಪ್ರಯತ್ನಿಸಬಹುದು, ಉದಾಹರಣೆಗೆ ಕುಟುಂಬದ ಸದಸ್ಯರನ್ನು ಆಹ್ವಾನಿಸುವಂತಹ ಪಿಕ್ನಿಕ್‌ಗಳು, ಫುಟ್ಬಾಲ್ ಪಂದ್ಯಗಳು ಮತ್ತು ಸಂಗೀತ ಕಾರ್ಯಕ್ರಮಗಳನ್ನು ಪ್ರಯತ್ನಿಸಬಹುದು. ಕೆಪಾಸಿಟರ್ ಎಂಬ ಸಂಸ್ಥೆಯು, ನಿಮಗೆ ಸ್ಫೂರ್ತಿ ನೀಡುವಂಥ ವಿವಿಧ ಚಟುವಟಿಕಗಳನ್ನು ಅಭಿವೃದ್ಧಿ ಪಡಿಸಿದ್ದಾರೆ. ಕೆಪಾಸಿಟರ್ ಸಂಸ್ಥೆಯು ಒತ್ತಡ ನಿರ್ವಹಣೆಯಲ್ಲಿ ದೇಹ, ಮನಸ್ಸು, ಉಲ್ಲಾಸ ಮತ್ತು ಭಾವಗಳ ಯೋಗಕ್ಷೇಮವನ್ನು ಕೇಂದ್ರೀಕರಿಸುತ್ತದೆ ಮತ್ತು ದಿನನಿತ್ಯದ ಜೀವನದ ಭಾಗವಾಗಿ ಸ್ವ–ಆರೈಕೆ ರೂಢಿಗಳನ್ನು ಬೆಳೆಸಲು ಜನರನ್ನು ಪ್ರೋತ್ಸಾಹಿಸುತ್ತದೆ:

**ಕೆಪಾಸಿಟರ್ – ಯೋಗಕ್ಷೇಮಕ್ಕಾಗಿ ಸಾಧನಗಳು** [https://bit.ly/33vwBnE]

# ಡಿಜಿಟಲ್ ಭದ್ರತೆ

ಡಿಜಿಟಲ್ ಭದ್ರತೆಯು ಸವಿಸ್ತಾರವಾದ ವಿಷಯವಾಗಿದ್ದು, ನಾವು ಅದನ್ನು ಇಲ್ಲಿ ವಿವರವಾಗಿ ಹೇಳಲು ಪ್ರಯತ್ನಿಸುವುದಿಲ್ಲ. ಟ್ಯಾಕ್ಟಿಕಲ್ ಟೆಕ್ನಾಲಜಿ ಇನಿಶಿಯೇಟಿವ್ ಸಂಸ್ಥೆ ಮತ್ತು ಮುಂಚೂಣಿಯಲ್ಲಿರುವ ರಕ್ಷಕರು ಒಟ್ಟಾಗಿ ನಿಮ್ಮ ಡಿಜಿಟಲ್ ಸುರಕ್ಷತೆಗಾಗಿ ಸೆಕ್ಯುರಿಟಿ–ಇನ್–ಎ–ಬಾಕ್ಸ್ (Security-in-a-box) ಎಂದು ಕರೆಯಲ್ಪಡುವ ಸಾಧನಗಳು ಮತ್ತು ತಂತ್ರಗಳನ್ನು ಅಭಿವೃದ್ಧಿಪಡಿಸಿದ್ದಾರೆ. ವಕಾಲತ್ತು ನಡೆಸುವವರ ಮತ್ತು ಮಾನವ ಹಕ್ಕುಗಳ ರಕ್ಷಕರ ಡಿಜಿಟಲ್ ಭದ್ರತೆ ಮತ್ತು ಖಾಸಗೀತನದ ಅಗತ್ಯಗಳನ್ನು ಪೂರೈಸುವ ನಿಟ್ಟಿನಲ್ಲಿ ಇದನ್ನು ರಚಿಸಲಾಗಿದೆ. ಈ ಡಿಜಿಟಲ್ ಕೈಪಿಡಿಯು ಕೆಳಗೆ ಪಟ್ಟಿ ಮಾಡಲಾದ ಕೆಲವು ಪ್ರಮುಖ ಡಿಜಿಟಲ್ ಭದ್ರತಾ ಸಮಸ್ಯೆಗಳನ್ನು ಪರಿಹರಿಸುತ್ತದೆ:

- ಮ್ಯಾಲ್ವೇರ್ ಮತ್ತು ಹ್ಯಾಕರ್ಗಳಿಂದ ನಿಮ್ಮ ಕಂಪ್ಯೂಟರನ್ನು ಹೇಗೆ ರಕ್ಷಿಸುವುದು
- ಭೌತಿಕ ಬೆದರಿಕೆಗಳಿಂದ ನಿಮ್ಮ ಮಾಹಿತಿಯನ್ನು ಹೇಗೆ ರಕ್ಷಿಸುವುದು
- ಸುರಕ್ಷಿತ ಪಾಸ್‌ವರ್ಡಗಳನ್ನು ಹೇಗೆ ರಚಿಸುವುದು ಮತ್ತು ನಿರ್ವಹಿಸುವುದು
- ಸೂಕ್ಷ್ಮ ಕಡತಗಳನ್ನು (ಫೈಲುಗಳನ್ನು) ನಿಮ್ಮ ಕಂಪ್ಯೂಟರಿನಲ್ಲಿ ಹೇಗೆ ರಕ್ಷಿಸುವುದು
- ಮಾಹಿತಿ ನಷ್ಟದಿಂದ ಹೇಗೆ ಚೇತರಿಸಿಕೊಳ್ಳುವುದು
- ಸೂಕ್ಷ್ಮ ಮಾಹಿತಿಯನ್ನು ಹೇಗೆ ನಾಶಪಡಿಸುವುದು
- ನಿಮ್ಮ ಅಂತರ್ಜಾಲದ (ಇಂಟರ್ನೆಟ್) ಸಂವಹನವನ್ನು ಹೇಗೆ ಖಾಸಗಿಯಾಗಿ ಇಡುವುದು
- ಸಾಧ್ಯವಾದಷ್ಟು ಸುರಕ್ಷಿತವಾಗಿ ಸ್ಮಾರ್ಟ್‌ಫೋನ್‌ಗಳನ್ನು ಹೇಗೆ ಬಳಸುವುದು

**ಸೆಕ್ಯುರಿಟಿ–ಇನ್–ಎ–ಬಾಕ್ಸ್** ಈ ಸಮಸ್ಯೆಗಳ ಮೂಲಕ ನಿಮ್ಮನ್ನು ಕರೆದೊಯ್ಯುತ್ತದೆ ಮತ್ತು ಅವುಗಳನ್ನು ಹೇಗೆ ನಿಭಾಯಿಸಬೇಕು ಎಂದು ನಿಮಗೆ ಸಲಹೆಯನ್ನು ನೀಡುತ್ತದೆ. ನಿಮಗೆ ಕೆಲವು ಉದಾಹರಣೆಗಳನ್ನು ನೀಡೋಣ:

ಖಾಸಗಿ ಸಂವಹನ ಮತ್ತು ಸುರಕ್ಷಿತ ಪಾಸ್‌ವರ್ಡ್‌ಗಳ ಬಗ್ಗೆ ಚಿಂತೆ ಮಾಡುವ ಮೊದಲು, ನಿಮ್ಮ ಕಂಪ್ಯೂಟರ್ ಸರಿಯಾಗಿ ಕೆಲಸ ಮಾಡುತ್ತಿದೆಯೆ ಎಂದು ನೋಡುವುದು ಭದ್ರತೆಯೆಡೆಗೆ ಒಂದು ನಿರ್ಣಾಯಕ ಮೊದಲ ಹಂತವಾಗಿದೆ. ಮ್ಯಾಲ್ವೇರ್ ನಂತಹ ನಿರ್ದಿಷ್ಟ ಬೆದರಿಕೆಗಳು, ಇವುಗಳಿಂದ ನಿಮ್ಮನ್ನು ರಕ್ಷಿಸಲು ನೀವು ವಿವಿಧ ಸಾಧನಗಳನ್ನು ಹೇಗೆ ಬಳಸಬಹುದು, ನಿಮ್ಮ ಸಾಫ್ಟವೇರನ್ನು ಆಗಿಂದಾಗ್ಗೆ ಪರಿಷ್ಕರಿಸುವ ಮೂಲಕ ನಿಮ್ಮ ಕಂಪ್ಯೂಟರನ್ನು ಹೇಗೆ ಸುರಕ್ಷಿತವಾಗಿರಿಸಿಕೊಳ್ಳಬಹುದು ಮತ್ತು ಅವಧಿ ಮುಗಿದ ಪರವಾನಗಿಗಳು ಮತ್ತು ನಕಲಿ (ಪೈರೇಟೆಡ್) ಸಾಫ್ಟವೇರ್‌ಗಳ ಅಪಾಯಗಳನ್ನು ತಪ್ಪಿಸುವ ಸಲುವಾಗಿ ನೀವು ಉಚಿತ ಮತ್ತು ಮುಕ್ತ ಮೂಲದ (ಫ್ರೀವೇರ್) ಸಾಧನವನ್ನು ಏಕೆ ಬಳಸಬೇಕು ಎಂಬುದರ ಬಗ್ಗೆ ಸೆಕ್ಯುರಿಟಿ–ಇನ್–ಎ–ಬಾಕ್ಸ್ ವಿವರಿಸುತ್ತದೆ.

ನೀವು ಸೂಕ್ಷ್ಮ ಮಾಹಿತಿ ಮತ್ತು ವಿಷಯಗಳ ಬಗ್ಗೆ ಕೆಲಸ ಮಾಡುತ್ತಿದ್ದಲ್ಲಿ ಮತ್ತು ನೀವು ಸಾಮಾಜಿಕ ಜಾಲತಾಣಗಳ ಸೇವೆಗಳನ್ನು ಬಳಸಲು ಆಸಕ್ತಿ ಹೊಂದಿದ್ದರೆ, ಅವುಗಳು ಹೇಳುವ ಖಾಸಗೀತನ ಮತ್ತು ಭದ್ರತೆಯ ವಿಷಯಗಳ ಬಗ್ಗೆ ಬಹಳ ಜಾಗ್ರತರಾಗಿರುವುದು ಬಹಳ ಮುಖ್ಯವಾಗುತದೆ. ಮಾನವ ಹಕ್ಕುಗಳ ರಕ್ಷಕರು ವಿಶೇಷವಾಗಿ ಸಾಮಾಜಿಕ ಜಾಲತಾಣಗಳ ಅಪಾಯಗಳಿಗೆ ಗುರಿಯಾಗುತ್ತಾರೆ ಮತ್ತು ಅವರು ತಮ್ಮ ಬಗ್ಗೆ ಮತ್ತು ಅವರು ಕೆಲಸ ಮಾಡುವ ಜನರ ಬಗ್ಗೆ ಬಹಿರಂಗಪಡಿಸುವ ಮಾಹಿತಿಯ ಬಗ್ಗೆ ಹೆಚ್ಚು ಜಾಗರೂಕರಾಗಿರಬೇಕು. ವಿವಿಧ ಸಾಮಾಜಿಕ ಜಾಲತಾಣಗಳು ನಿಮ್ಮನ್ನು (ಮತ್ತು ನಿಮ್ಮ ಸಂಪರ್ಕಗಳನ್ನು) ಹೇಗೆ ದುರ್ಬಲಗೊಳಿಸುತ್ತವೆ ಎಂಬುದನ್ನು ನೀವು ಅರ್ಥಮಾಡಿಕೊಳ್ಳುವುದು ಬಹಳ ಮುಖ್ಯವಾಗುತ್ತದೆ ಮತ್ತು ನಿಮ್ಮನ್ನು ಮತ್ತು ನೀವು ಕೆಲಸ ಮಾಡುತ್ತಿರುವ ಜನರನ್ನು ರಕ್ಷಿಸಲು ನೀವು ಕ್ರಮಗಳನ್ನು ತೆಗೆದುಕೊಳ್ಳಬಹುದಾಗಿದೆ.




ಡಿಜಿಟಲ್ ಹಕ್ಕುಗಳು ಮತ್ತು ಭದ್ರತೆಯು ಕೂಡ ಮಾನವ ಹಕ್ಕುಗಳ ರಕ್ಷಕರ ಭದ್ರತೆಗೆ ಪ್ರಮುಖ ಅಂಶವಾಗಿದೆ. ಡಿಜಿಟಲ್ ಸ್ಥಳಗಳಲ್ಲಿ ನಿಮ್ಮ ಹಕ್ಕುಗಳ ಬಗ್ಗೆ ಅರಿವು ಮತ್ತು ತಿಳುವಳಿಕೆ ಮತ್ತು ನಿಮ್ಮ ಡಿಜಿಟಲ್ ಸ್ಥಳಗಳು ಮತ್ತು ಸಾಧನಗಳನ್ನು ಹೇಗೆ ರಕ್ಷಿಸುವುದು ಎನ್ನುವುದನ್ನು ಮಾನವ ಹಕ್ಕುಗಳ ರಕ್ಷಕರು ಅರ್ಥೈಸಿಕೊಂಡಿರುವುದು ಮುಖ್ಯವಾಗಿರುತ್ತದೆ. ಚಿತ್ರ: ಡಿಜಿಟಲ್ ರೈಟ್ಸ್ ಫೌಂಡೇಶನ್ ಡಿಜಿಟಲ್ ಭದ್ರತೆ ಕುರಿತು ಆಯೋಜಿಸಿರುವ ಕಾರ್ಯಾಗಾರ (ಚಿತ್ರ ಸಲ್ಲಿಕೆ: ಡಿಜಿಟಲ್ ರೈಟ್ಸ್ ಫೌಂಡೇಶನ್)



ಡಿಜಿಟಲ್ ಸೆಕ್ಯುರಿಟಿ–ಇನ್–ಎ–ಬಾಕ್ಸ್ ಒಂದು ಮಾರ್ಗಸೂಚಿಗಳ ಸಂಗ್ರಹವನ್ನು ಒದಗಿಸುತ್ತದೆ. ಈ ಮಾರ್ಗಸೂಚಿಯ ಸಾಧನವು ನಿರ್ದಿಷ್ಟ ಫ್ರೀವೇರ್ ಅಥವಾ ಮುಕ್ತ ಮೂಲದ ಅಥವಾ ಸಾಫ್ಟ್‌ವೇರ್ ಸಾಧನವನ್ನು ಒಳಗೊಂಡಿದೆ, ಜೊತೆಗೆ ನಿಮ್ಮ ನಿಮ್ಮ ಕಂಪ್ಯೂಟರನ್ನು ಅಥವಾ ಫೋನನ್ನು ಸುರಕ್ಷಿತಗೊಳಿಸಲು, ನಿಮ್ಮ ಮಾಹಿತಿಯನ್ನು ರಕ್ಷಿಸಲು ಅಥವಾ ನಿಮ್ಮ ಅಂತರ್ಜಾಲದ (ಇಂಟರ್ನೆಟ್) ಸಂವಹನದ ಖಾಸಗೀತನವನ್ನು ಕಾಪಾಡಿಕೊಳ್ಳಲು ನೀವು ಈ ಸಾಧನವನ್ನು ಹೇಗೆ ಬಳಸಬಹುದು ಎಂಬುವುದರ ಕುರಿತ ಸೂಚನೆಗಳನ್ನು ಒಳಗೊಂಡಿದೆ. ಈ ಸಾಧನಗಳು ಆಂಟಿ–ವೈರಸ್, ಕಡತಗಳ (ಫೈಲ್‌ಗಳ) ಮರುಪಡೆಯುವಿಕೆ, ಸುರಕ್ಷಿತ ಪಾಸ್‌ವರ್ಡ್ ಸಂಗ್ರಹ, ಸುರಕ್ಷಿತ ಇ–ಮೇಲ್ ಸೇವೆ ಇತ್ಯಾದಿಗಳು ಸೇರಿವೆ.

ಮೊಬೈಲ್ ಮತ್ತು ಸ್ಮಾರ್ಟ್‌ಫೋನ್‌ಗಳನ್ನು ಸಾಧ್ಯವಾದಷ್ಟು ಸುರಕ್ಷಿತವಾಗಿ ಬಳಸುವುದು ಹೇಗೆ ಎಂದು ಉಪಾಯ ಮಾರ್ಗಸೂಚಿಗಳನ್ನೂ ಒಳಗೊಂಡಿದೆ. ಒಂದು ನಿಯಮದಂತೆ, ನಿಮ್ಮ ಫೋನಿನಲ್ಲಿ ನೀವು ಯಾವ ಸಂಪರ್ಕಗಳನ್ನು ಉಳಿಸಿಕೊಳ್ಳುವಿರಿ ಮತ್ತು ಕೆಲಸ ಮತ್ತು ಖಾಸಗಿ ಬಳಕೆಗಾಗಿ ನೀವು ಎರಡು ಪ್ರತ್ಯೇಕ ಫೋನ್‌ಗಳನ್ನು ಇಟ್ಟುಕೊಳ್ಳಬೇಕೆ ಎಂಬ ವಿಷಯಗಳ ಬಗ್ಗೆ ಯೋಚಿಸುವುದು ಮುಖ್ಯವಾಗುತ್ತದೆ. ನೀವು ಅಪಾಯದಲ್ಲಿದ್ದರೆ, ನಿಮ್ಮ ಸಂಪರ್ಕಗಳಿಗೆ ಸುಲಭವಾಗಿ ಸಂದೇಶಗಳನ್ನು ಕಳುಹಿಸಲು ಪೂರ್ವ–ಲಿಖಿತ ಸಂದೇಶಗಳನ್ನು ಹೊಂದುವ ಮೂಲಕ, ತುರ್ತು ಸಂದರ್ಭಗಳಲ್ಲಿ ನಿಮ್ಮ ಸುರಕ್ಷತೆಯನ್ನು ಹೆಚ್ಚಿಸಲು ಸಹ ನಿಮ್ಮ ಫೋನನ್ನು ಬಳಸಬಹುದು.

**ಡಿಜಿಟಲ್ ಭದ್ರತೆಯ ಬಗ್ಗೆ ನಿಮಗೆ ನೀವೇ ಕೇಳಬಹುದಾದಂತಹ ಪ್ರಶ್ನೆಗಳು:**

- ನನ್ನ ಫೋನಿನ ಮತ್ತು ಕಂಪ್ಯೂಟರಿನ ಕಾರ್ಯನಿರ್ವಹಿಸುವ ವ್ಯವಸ್ಥೆಯು (ಆಪರೇಟಿಂಗ್ ಸಿಸ್ಟಂ) ಇತ್ತೀಚಿನ ಆವೃತ್ತಿಯನ್ನು ನಾನು ಹೊಂದಿದ್ದೇನೆಯೇ?
- ನನ್ನ ಫೋನಿನ ಮತ್ತು ಕಂಪ್ಯೂಟರಿನ ಎಲ್ಲಾ ಸಾಫ್ಟವೇರ್‌ಗಳನ್ನು ನಾನು ನಿಯಮಿತವಾಗಿ ನವೀಕರಿಸುತ್ತೇನೆಯೇ?
- ನನ್ನ ಕಂಪ್ಯೂಟರ್‌ನಲ್ಲಿ ಸೂಕ್ಷ್ಮ ಕಡತಗಳನ್ನು (ಫೈಲ್‌ಗಳನ್ನು) ನಾನು ರಕ್ಷಿಸುತ್ತೇನೆಯೇ? ನನ್ನ ಫೋನಿನಲ್ಲಿ ಇರುವ ಮಾಹಿತಿಯ ಬಗ್ಗೆ ಹೇಗೆ?
- ನನ್ನ ಕೆಲಸದ ಬ್ಯಾಕ್–ಅಪ್‌ಗಳನ್ನು ನಾನು ಇರಿಸಿಕೊಳ್ಳುತ್ತೇನೆಯೇ?
- ಸಾಮಾಜಿಕ ಜಾಲತಾಣಗಳಲ್ಲಿ ಮಾಹಿತಿ ಮತ್ತು ಚಿತ್ರಗಳನ್ನು ಹಂಚಿಕೊಳ್ಳುವಾಗ ನನ್ನ ಮತ್ತು ಇತರರ ಭದ್ರತೆಯ ಬಗ್ಗೆ ನಾನು ಯೋಚಿಸುತ್ತೇನೆಯೇ?
- ನಾನು ಬಳಸುವ ಸಾಮಾಜಿಕ ಜಾಲತಾಣಗಳ ಖಾಸಗೀತನದ ಸೆಟ್ಟಿಂಗ್‌ಗಳ ಬಗ್ಗೆ ನನಗೆ ಪರಿಚಯವಿದೆಯೇ?
- ಮಾಹಿತಿಯನ್ನು ಸುರಕ್ಷಿತವಾಗಿ ಸಂವಹನ ಮಾಡುವುದು ಮತ್ತು ಹಂಚಿಕೊಳ್ಳುವುದು ಹೇಗೆ ಎಂದು ನನಗೆ ತಿಳಿದಿದೆಯೇ?
- ನನ್ನ ಮೊಬೈಲ್ ಫೋನನ್ನು ಎಷ್ಟು ಸಾಧ್ಯವಿದೆಯೋ ಅಷ್ಟು ಸುರಕ್ಷಿತವಾಗಿ ಕಾಪಾಡುವುದು ಹೇಗೆ ಎಂದು ನನಗೆ ತಿಳಿದಿದೆಯೇ?

**ಸೆಕ್ಯುರಿಟಿ–ಇನ್–ಎ–ಬಾಕ್ಸ್ (Security-in-a-box)** ಸೆಕ್ಯುರಿಟಿ–ಇನ್–ಎ–ಬಾಕ್ಸ್ ಆನ್‌ಲೈನ್ ಮತ್ತು ವಿವಿಧ ಭಾಷೆಗಳಲ್ಲಿ ಲಭ್ಯವಿದೆ: https://bit.ly/2UakKZ4

## ಮೊದಲ ಕೆಲವು ಪ್ರಾಯೋಗಿಕ ಹಂತಗಳು

ನಿಮ್ಮ ಸಂಸ್ಥೆಯ ಅಪಾಯದ ಮೌಲ್ಯಮಾಪನದ ಆಧಾರದ ಮೇಲೆ ನೀವು ಸಂಪೂರ್ಣ ಭದ್ರತಾ ಯೋಜನೆಯನ್ನು ಅಭಿವೃದ್ಧಿಪಡಿಸುವ ಮುಂಚೆ, ಭದ್ರತಾ ಯೋಜನೆಯನ್ನು ಜಾರಿಗೆ ತರುವ ಮೊದಲು ಸಾಮಾನ್ಯ ಆಧಾರದ ಮೇಲೆ ನಿಮ್ಮ ವೈಯಕ್ತಿಕ ಮತ್ತು ಸಾಂಸ್ಥಿಕ ಸುರಕ್ಷತೆಯನ್ನು ಹೆಚ್ಚಿಸಲು ಸಹಾಯ ಮಾಡುವ ಕೆಲವು ತ್ವರಿತ ಮತ್ತು ಪ್ರಾಯೋಗಿಕ ಕ್ರಮಗಳನ್ನು ನೀವು ಮತ್ತು ನಿಮ್ಮ ಸಹೋದ್ಯೋಗಿಗಳು ತಕ್ಷಣ ಸಮ್ಮತಿಸಬೇಕು. ಕಚೇರಿ, ಮನೆ ಮತ್ತು ಸಲಕರಣೆಗಳಂತಹ ನಿಮ್ಮ ಎಲ್ಲಾ ಸ್ಥಳಗಳಿಗೆ ಮತ್ತು ಪ್ರಯಾಣ ಮಾಡುವಾಗ ಮತ್ತು ಸಂವಹನ ಮಾಡುವಾಗ ಕೈಗೊಳ್ಳಬೇಕಾದ ಮುನ್ನೆಚ್ಚರಿಕಾ ಕ್ರಮಗಳನ್ನು ತೆಗೆದುಕೊಳ್ಳಲು ತ್ವರಿತ ಭದ್ರತಾ ತರಬೇತಿಯ ಮೂಲ ಚೌಕಟ್ಟನ್ನು ಅನುಷ್ಠಾನಗೊಳಿಸುವ ಕುರಿತು ಸಂರಕ್ಷಣಾ ತರಬೇತುದಾರರ ಸಲಹೆಯನ್ನು ಪಡೆಯಬೇಕು. ನಿರ್ದಿಷ್ಟವಾಗಿ, ಕಾರ್ಯಕ್ಷೇತ್ರಕ್ಕೆ ಹೊರಡುವಾಗ ಸುರಕ್ಷತೆಯ ಬಗ್ಗೆ ಎಚ್ಚರದಿಂದಿರಬೇಕು ಮತ್ತು ಉದ್ದೇಶಪೂರ್ವಕವಾಗಿರಬೇಕು ಎಂಬ ಮಹತ್ವವನ್ನು ನಾವು ನಿಮಗೆ ಒತ್ತಿಹೇಳಲು ಮತ್ತು ಇದರ ಬಗ್ಗೆ ನಿಮ್ಮ ಗಮನವನ್ನು ತರಲು ಬಯಸುತ್ತೇವೆ. ಉದಾಹರಣೆಗೆ, ಕ್ಷೇತ್ರದಲ್ಲಿ ಮಾನವ ಹಕ್ಕುಗಳ ಉಲ್ಲಂಘನೆಯನ್ನು ದಾಖಲಿಸುವವರಿಗೆ ಈ ಸಂದರ್ಭದಲ್ಲಿ ಗಮನಿಸಬೇಕಾದ ಕೆಲವು ಪ್ರಮುಖ ಅಂಶಗಳು ಈ ರೀತಿಯಾಗಿರಬಹುದು:

- ಎಲ್ಲಾ ಸಿಬ್ಬಂದಿಗಳು ತಮ್ಮ ಮೊಬೈಲ್ ಫೋನನ್ನು ಯಾವಾಗಲೂ ಚಾರ್ಜ್ ಆಗಿರುವಂತೆ ಮತ್ತು ಬಳಸಬಹುದಾದ ರೀತಿಯಲ್ಲಿ ಇರುವಂತೆ ನೋಡಿಕೊಳ್ಳಬೇಕು
- ಕಾರ್ಯ ಕ್ಷೇತ್ರದಲ್ಲಿ ಮಾನವ ಹಕ್ಕುಗಳ ಉಲ್ಲಂಘನೆಯನ್ನು ದಾಖಲಿಸುವಾಗ ಯಾವಾಗಲೂ ಜೊತೆಯಾಗಿ ಅಥವಾ ಗುಂಪುಗಳಾಗಿ ಪ್ರಯಾಣಿಸಬೇಕು
- ಕಾರ್ಯಕ್ಷೇತ್ರಕ್ಕೆ ಹೊರಡುವ ಮೊದಲು, ನೀವು ಎಲ್ಲಿಗೆ ಹೋಗುತ್ತಿದ್ದೀರಿ ಮತ್ತು ಯಾರೊಂದಿಗೆ ಹೋಗುತ್ತಿದ್ದೀರಿ ಎಂಬುದನ್ನು ಯಾವಾಗಲೂ ನಿಮ್ಮ ಸಹೋದ್ಯೋಗಿಗಳಿಗೆ ತಿಳಿಸಿ
- ನಿಮಗೆ ತುರ್ತು ಸಂದರ್ಭದಲ್ಲಿ ಸಂಪರ್ಕಿಸಲು ಲಭ್ಯವಿರುವ ವ್ಯಕ್ತಿಗಳ ಜಾಲವನ್ನು (ನೆಟ್‌ವರ್ಕ್) ಹೊಂದಿದ್ದೀರಾ ಎಂಬುವುದನ್ನು ಖಚಿತಪಡಿಸಿಕೊಳ್ಳಿ

ಈ ಪಟ್ಟಿಯು ಮುಕ್ತಾಯವಾಗಿಲ್ಲ ಮತ್ತು ವಿವಿಧ ಸ್ಥಳೀಯ ಸಂದರ್ಭಗಳಲ್ಲಿ ಕೆಲಸ ಮಾಡುವ ವಿವಿಧ ಸಂಸ್ಥೆಗಳಿಗೆ ಪರಿಗಣಿಸಬೇಕಾದ ಇತರ ಅಂಶಗಳನ್ನು ಒಳಗೊಂಡಿರುತದೆ. ಅಂತಹ ಆರಂಭಿಕ ಪಟ್ಟಿಯು ಸಮಗ್ರ ಅಪಾಯದ ಮೌಲ್ಯಮಾಪನದ ಆಧಾರದ ಮೇಲೆ ಸಮರ್ಪಕವಾದ ಭದ್ರತಾ ಯೋಜನೆಯನ್ನು ಬದಲಿಸಲು ಸಾಧ್ಯವಿಲ್ಲ ಎಂಬುದನ್ನು ಗಮನಿಸುವುದು ಮುಖ್ಯವಾಗುತ್ತದೆ, ಆದರೆ ಸಂಪೂರ್ಣ ಭದ್ರತಾ ಯೋಜನೆಯನ್ನು ಅಭಿವೃದ್ಧಿಪಡಿಸುವ ಮೊದಲು ಪ್ರಾರಂಭಿಕವಾಗಿ ಇದು ಒಂದು ಉತ್ತಮ ಅವಕಾಶವಾಗಿದೆ. ಇದೇ ರೀತಿಯ ನಿಯಮಗಳು ಈಗಾಗಲೇ ಜಾರಿಯಲ್ಲಿಲ್ಲದಿದ್ದರೆ, ಅಂತಹ ಸಣ್ಣ ಪ್ರಾಯೋಗಿಕ ಹಂತಗಳು ಸಂಬಂಧಿತ ಜನರಿಗೆ ಮತ್ತು ಸಂಸ್ಥೆಗಳಿಗೆ ಒಂದು ಪ್ರಮುಖವಾದ ವ್ಯತ್ಯಾಸವನ್ನು ಉಂಟು ಮಾಡಬಹುದು. ಎಲ್ಲಾ ಹಂತಗಳಲ್ಲಿ ನಿಮ್ಮ ಮಾನವ ಹಕ್ಕುಗಳ ಕೆಲಸದ ಭಾಗವಾಗಿ ಭದ್ರತಾ ಚಿಂತನೆಯನ್ನು ರೂಢಿಗೊಳಿಸುವ ಹಂತಕ್ಕೆ ಸಂಯೋಜಿಸಬೇಕು.

# ಸೈಬರ್ ಕಿರುಕುಳ ಮತ್ತು ಬೆದರಿಕೆಗಳು

ಮಾನವ ಹಕ್ಕುಗಳ ರಕ್ಷಕರನ್ನು ಗುರಿಯಾಗಿಸಿಕೊಂಡು ದೈಹಿಕವಾಗಿ ಮತ್ತು ಡಿಜಿಟಲ್ ಉಪಸ್ಥಿತಿಯೊಂದಿಗೆ ಅವರು ನೆಲಸಿರುವ ಯಾವುದೇ ಸ್ಥಳಕ್ಕೂ ವಿಸ್ತರಿಸಬಹುದು. ಸೈಬರ್ ಕಿರುಕುಳಗಳು ಮತ್ತು ಬೆದರಿಕೆಗಳು, ಬೆದರಿಕೆಗಳ ಮೂಲವನ್ನು ವಿಸ್ತರಿಸಬಹುದು, ಉದಾಹರಣೆಗೆ ಮಾನವ ಹಕ್ಕುಗಳ ರಕ್ಷಕರ ವಿರುದ್ಧ ಸಾರ್ವಜನಿಕ ಕರೆಗಳು ಮತ್ತು ಸಂದೇಶಗಳನ್ನು ವ್ಯಾಪಕವಾಗಿ ಹಂಚಿಕೊಂಡಾಗ, ಸಂಭಾವ್ಯ ದುಷ್ಕರ್ಮಿಗಳಲ್ಲಿ ಅನಿರೀಕ್ಷಿತತೆಯನ್ನು ಹೆಚ್ಚಿಸುವ ಮೂಲಕ ಅಭದ್ರತೆಯನ್ನು ಹೆಚ್ಚಿಸುತ್ತದೆ. ಮಹಿಳೆಯರು ಮತ್ತು ಎಲ್‌ಜಿಬಿಟಿಕ್ಯೂ+ ವ್ಯಕ್ತಿಗಳು ವಿಶೇಷವಾಗಿ ಸೈಬರ್ ಕಿರುಕುಳ ಮತ್ತು ಬೆದರಿಕೆಗಳಿಗೆ ಗುರಿಯಾಗುತ್ತಾರೆ, ಮತ್ತು 2018 ರಲ್ಲಿ ವಿಶ್ವ ಸಂಸ್ಥೆಯ ಮಾಜಿ ಮಾನವ ಹಕ್ಕುಗಳ ಆಯುಕ್ತರಾದ ಜೆಯಿದ್ ರಾ'ಅದ್ ಅಲ್ ಹುಸೇನ್ ರವರು ಮಹಿಳಾ ಮಾನವ ಹಕ್ಕುಗಳ ರಕ್ಷಕರ ಸಾಮಾನ್ಯ ಅನುಭವಗಳ ಬಗ್ಗೆ ಹೇಳಿಕೆಯನ್ನು ನೀಡಿದ್ದಾರೆ. ಈ ಅನುಭವಗಳು ಎಲ್ಲಾ ಮಾನವ ಹಕ್ಕುಗಳ ರಕ್ಷಕರಿಗೆ ಸಂಬಂಧಿಸಿವೆ ಅದರಲ್ಲೂ ಮಹಿಳಾ ಮಾನವ ಹಕ್ಕುಗಳ ರಕ್ಷಕರಿಗೂ ಸಂಬಂಧಿಸಿವೆ. "ಸಾವಿನ ಬೆದರಿಕೆಗಳು, ಲೈಂಗಿಕ ಮತ್ತು ಲಿಂಗ ಆಧಾರಿತ ಹಿಂಸಾಚಾರದ ಬೆದರಿಕೆಗಳು, ಮತ್ತು ಆನ್‌ಲೈನ್ ಮಾನಹಾನಿ ಮತ್ತು ತಪ್ಪು ಮಾಹಿತಿ ಅಭಿಯಾನಗಳು – ಹೆಚ್ಚಾಗಿ ಲೈಂಗಿಕ ಸ್ವಭಾವದ, ಮತ್ತು ಆಗಾಗ್ಗೆ ಬಲಿಪಶುವಿನ ನಿಜ ಜೀವನದ ವಿಷಯಗಳ ಮಾತುಗಳನ್ನು ಒಳಗೊಂಡಂತೆ – [ಮಾನವ ಹಕ್ಕುಗಳ ರಕ್ಷಕರನ್ನು] ಹಿಂಸಿಸಲು ಮತ್ತು ಭಯಭೀತಗೊಳಿಸಲು ಬಳಸಲಾಗುತ್ತದೆ " ಎಂದು ಅವರು ಹೇಳಿದ್ದಾರೆ.

ಇದರ ಪರಿಣಾಮಗಳು ಉಗ್ರವಾಗಿರುವುದು ಮತ್ತು ಅನೇಕ ಸಂದರ್ಭಗಳಲ್ಲಿ ಮಾರಕವಾಗಿವೆ. ಆದ್ದರಿಂದ, ಡಿಜಿಟಲ್ ಭದ್ರತೆಯ ಈ




ಭಾಗವನ್ನು ಹೆಚ್ಚಿನ ಮಾನ್ಯತೆಯೊಂದಿಗೆ ಮತ್ತು ಒಟ್ಟಾರೆ ಅಪಾಯದ ಮೌಲ್ಯಮಾಪನದ ಭಾಗವಾಗಿ ಪರಿಗಣಿಸಬೇಕು. ಮೇಲೆ ಚರ್ಚಿಸಿದ ಹಂತಗಳು ಮತ್ತು ಶಿಫಾರಸುಗಳು ಈ ರೀತಿಯ ಅಪಾಯಗಳಿಗೆ ಗುರಿಯಾಗುವುದನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ, ಆದಾಗ್ಯೂ, ಅವು ಸುರಕ್ಷಿತ ಡಿಜಿಟಲ್ ಉಪಸ್ಥಿತಿಯನ್ನು ರಚಿಸಲು ಮತ್ತು ನಿರ್ವಹಿಸಲು ಮತ್ತು ಸಾಮಾಜಿಕ ಮಾಧ್ಯಮದ ಮಾರ್ಗಗಳೊಂದಿಗೆ (ಚಾನೆಲ್‌ಗಳೊಂದಿಗೆ) ತೊಡಗಿಸಿಕೊಳ್ಳಲು ಅಗತ್ಯವಿರುವ ಹೆಚ್ಚು ಆಳವಾದ ಸಂಭಾಷಣೆಗಳ ಆರಂಭವಾಗಿದೆ.[14] ಅಂತಹ ನಿರ್ಣಾಯಕ ಪರಿಗಣನೆಗಳನ್ನು ಫಲಾನುಭವಿಗಳಿಗೆ, ಸ್ವಯಂಸೇವಕರಿಗೆ ಇತ್ಯಾದಿಯವರಿಗೂ ವಿಸ್ತರಿಸಬೇಕು. ಪ್ರಸ್ತುತ ಪಡಿಸಿರುವ ಫಲಾನುಭವಿಗಳ, ಸಹೋದ್ಯೋಗಿಗಳ, ಸ್ವಯಂಸೇವಕರ ಚಿತ್ರಗಳನ್ನು/ಛಾಯಾಚಿತ್ರಗಳನ್ನು, ಉಲ್ಲೇಖಗಳನ್ನು ಮತ್ತು ಇತರ ವಿಷಯವನ್ನು ಹಂಚಿಕೊಳ್ಳುವ ಮುನ್ನ ಅವರ ಸಂಪೂರ್ಣ ಒಪ್ಪಿಗೆಯೊಂದಿಗೆ ಮಾಡಬೇಕು.

"ಬಲಿಪಶುಗಳ ಖಾಸಗೀತನದ ಹಕ್ಕು, ಅಭಿವ್ಯಕ್ತಿ ಸ್ವಾತಂತ್ರ್ಯ ಹಕ್ಕು ಮತ್ತು ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಮತ್ತು ರಾಜಕೀಯ ವ್ಯವಹಾರಗಳಲ್ಲಿ ಸಂಪೂರ್ಣ ಭಾಗವಹಿಸುವಿಕೆಗೆ ಹಾನಿಯಾಗಿರುವುದು ಸ್ಪಷ್ಟವಾಗಿದೆ. ಈ ರೀತಿಯ ಬೆದರಿಕೆ ಮತ್ತು ಹಿಂಸಾಚಾರವು ತಮ್ಮ ಸಂವಹನ ಮತ್ತು ಸಂಘಟಿಸುವ ಪ್ರಮುಖ ವಿಧಾನವಾಗಿರುವ ಆನ್‌ಲೈನ್ ವೇದಿಕೆಗಳನ್ನು ಬಳಸುವ ಮಹಿಳೆಯರ ಜಾಲಬಂಧಗಳ (ನೆಟ್ವರ್ಕ್‌ಗಳ) ಕೆಲಸವನ್ನು ಕುಂಠಿತಗೊಳಿಸಬಹುದು."

– ಜೆಯಿದ್ ರಾ'ಅದ್ ಅಲ್ ಹುಸೇನ್, ವಿಶ್ವ ಸಂಸ್ಥೆಯ ಮಾಜಿ ಮಾನವ ಹಕ್ಕುಗಳ ಆಯುಕ್ತರು

14 https://bit.ly/3aa58us



### ಲಿಂಗ ಮತ್ತು ಸಾಮರ್ಥ್ಯ–ಸೂಕ್ಷ್ಮ ಅಪಾಯದ ಮೌಲ್ಯಮಾಪನ

ವೈಯಕ್ತಿಕ ಮತ್ತು ಸಾಂಸ್ಥಿಕ ಸುರಕ್ಷತೆಯ ಕುರಿತು ಈ ವಿಭಾಗದಲ್ಲಿ ಕ್ರಮಿಸಿರುವ ಎಲ್ಲಾ ಅಂಶಗಳ ಪ್ರಾಮುಖ್ಯತೆ ಮತ್ತು ಅವಶ್ಯಕತೆಯನ್ನು ಪರಿಗಣಿಸಬೇಕು, ಯೋಜಿಸಬೇಕು, ವಿನ್ಯಾಸಗೊಳಿಸಬೇಕು ಮತ್ತು ಲಿಂಗ ಮತ್ತು ಸಾಮರ್ಥ್ಯ–ಸೂಕ್ಷ್ಮ ದೃಷ್ಟಿಕೋನದಿಂದ ಕಾರ್ಯಗತಗೊಳಿಸಬೇಕು ಎಂದು ನಾವು ಒತ್ತಿಹೇಳುತ್ತೇವೆ. ಈ ರೀತಿ ಮಾಡುವುದರಿಂದ ಹೆಚ್ಚು ಸಮಗ್ರವಾದ ಅಪಾಯ ಮೌಲ್ಯಮಾಪನಕ್ಕೆ ದಾರಿಯಾಗುತ್ತದೆ ಮತ್ತು ಆದ್ದರಿಂದ, ನಿಮ್ಮ ಸಂಸ್ಥೆಯ ಒಳಗಿನ ವ್ಯಕ್ತಿಗಳ ನಿರ್ದಿಷ್ಟವಾದ ಅವಶ್ಯಕತೆಗಳನ್ನು ಮತ್ತು ಅಪಾಯಗಳನ್ನು ಪರಿಹರಿಸಲು ಹೆಚ್ಚು ಪರಿಣಾಮಕಾರಿ ಅಪಾಯ ತಗ್ಗಿಸುವಿಕೆ ಮತ್ತು ಭದ್ರತಾ ಯೋಜನೆಗೆ ಅನುಕೂಲ ಮಾಡುತ್ತದೆ. ಈ ದೃಷ್ಟಿಕೋನಗಳನ್ನು ಅನ್ವಯಿಸುವುದರಿಂದ ಸಂಸ್ಥೆಯು ಸಮಯ ಅಥವಾ ಸಂಪನ್ಮೂಲಗಳನ್ನು ಹೆಚ್ಚುವರಿ ಹೊರೆಯಾಗಿ ಪರಿಗಣಿಸಬಾರದು ಏಕೆಂದರೆ ಈ ನಿರ್ಣಾಯಕ ಅಂಶಗಳು ಇಲ್ಲದಿದ್ದಲ್ಲಿ ಹಾಗೂ ಇವುಗಳನ್ನು ಅನ್ವಯಿಸದೇ ಇದ್ದಲ್ಲಿ ನಿಮ್ಮ ಸಂಸ್ಥೆಯ ಕೆಲವು ಸದಸ್ಯರು ಅಪಾಯಕ್ಕೆ ಗುರಿಯಾಗಬಹುದು ಮತ್ತು ಅವರ ಸುರಕ್ಷತೆಯನ್ನು ಹೊಂದಾಣಿಕೆ ಮಾಡಿಕೊಳ್ಳುವುದರಿಂದ ಭಾರಿ ಪರಿಣಾಮಗಳನ್ನು ಉಂಟುಮಾಡಬಹುದು. ಆದ್ದರಿಂದ, ಈ ದೃಷ್ಟಿಕೋನಗಳ ಅಳವಡಿಕೆಯೊಂದಿಗೆ ಯೋಜನಾ ಹಂತಗಳನ್ನು ಪ್ರಾರಂಭಿಸುವುದು ಅತ್ಯಗತ್ಯವಾಗಿದ್ದು, ಅವುಗಳನ್ನು ಹಿಮ್ಮುಖವಾಗಿ ಹಿಮ್ಮೆಟ್ಟಿಸುವ ಮತ್ತು ಅನ್ವಯಿಸುವ ಅಗತ್ಯತೆಯನ್ನು ಲಭ್ಯವಿರುವ ಸಮಯ ಮತ್ತು ಸಂಪನ್ಮೂಲಗಳ ವಿರುದ್ಧ ತುಲನೆಗೆ ಪರಿಗಣಿಸಲು ಆಗುವುದಿಲ್ಲ.




ಭದ್ರತೆಯು ಅಂತರ್ಗತವಾಗಿರಬೇಕು ಮತ್ತು ವಿಶಿಷ್ಟವಾದ ಮತ್ತು ಲಿಂಗ ಆಧಾರಿತ ಅಪಾಯಗಳನ್ನು ಅನುಭವಿಸುವವರು ತಿಳಿಸುವಂತಾಗಬೇಕು. ಚಿತ್ರ: ಭದ್ರತೆ ಮತ್ತು ಸಂರಕ್ಷಣೆ ಕುರಿತ ಕಾರ್ಯಾಗಾರದಲ್ಲಿ ಒಟ್ಟಾಗಿ ಕೆಲಸ ಮಾಡುತ್ತಿರುವ ಮಹಿಳಾ ಮಾನವ ಹಕ್ಕುಗಳ ರಕ್ಷಕರು (ಚಿತ್ರ ಸಲ್ಲಿಕೆ: ಸುರಕ್ಷತೆ ಮತ್ತು ಅಪಾಯ ತಗ್ಗಿಸುವಿಕೆ ಸಂಸ್ಥೆ (ಎಸ್‌ಆರ್‌ಎಂಒ) (Safety and Risk Mitigation Organization (SRMO))



ಮಹಿಳಾ ಮಾನವ ಹಕ್ಕುಗಳ ರಕ್ಷಕರಿಗೆ ಭದ್ರತೆ ಮತ್ತು ಸಂರಕ್ಷಣೆಯು ಅವರ ಲಿಂಗದ ಆಧಾರದ ಮೇಲೆ ಅವರು ಎದುರಿಸುತ್ತಿರುವ ನಿರ್ದಿಷ್ಟ ಅಪಾಯಗಳನ್ನು ಪರಿಗಣಿಸುವ ಅಗತ್ಯವಿದೆ. ಮೆಕ್ಸಿಕೋದಿಂದ ಮಹಿಳಾ ಮಾನವ ಹಕ್ಕುಗಳ ರಕ್ಷಕರ ಗುಂಪು ಚಿತ್ರ – ಐ(ಡಿಹೆಚ್)ಇಎಎಸ್ (I(dh)EAS))



# ಟಿಪ್ಪಣಿಗಳು (NOTES)



# ಟಿಪ್ಪಣಿಗಳು (NOTES)

# ಪಾತ್ರ ಮತ್ತು ಜವಾಬ್ದಾರಿಗಳು

## ಪಾತ್ರ ಮತ್ತು ಜವಾಬ್ದಾರಿಗಳು

ಮೇಲೆ ತಿಳಿಸಿರುವಂತೆ, ನಿಮ್ಮದೇ ಸಂದರ್ಭದಲ್ಲಿ ತಕ್ಕ ಅಪಾಯದ ಮೌಲ್ಯಮಾಪನಗಳನ್ನು ನಡೆಸುವುದು ಮತ್ತು ಈ ಅಪಾಯಗಳನ್ನು ಹೇಗೆ ಪರಿಣಾಮಕಾರಿಯಾಗಿ ನಿಭಾಯಿಸಬೇಕು ಎಂಬ ಕಾರ್ಯತಂತ್ರಗಳನ್ನು ಅಭಿವೃದ್ಧಿಪಡಿಸುವುದು ಎಲ್ಲಾ ಎನ್‌ಹೆಚ್‌ಆರ್‌ಎಫ್‌ನ ಅನುದಾನ ಪಡೆಯುವವರ ಜವಾಬ್ದಾರಿಯಾಗಿದೆ. ಬೆದರಿಕೆಗಳು ಮತ್ತು ಭದ್ರತಾ ಸಮಸ್ಯೆಗಳನ್ನು ನಿರ್ಲಕ್ಷಿಸುವುದರಿಂದ ಅವುಗಳು ಕಣ್ಮರೆಯಾಗುವುದಿಲ್ಲ ಮತ್ತು ಈ ರೀತಿ ಮಾಡುವುದರಿಂದ ಅದು ನಿಮ್ಮ ಕೆಲಸವನ್ನು ನಿರ್ವಹಿಸುವಲ್ಲಿ ನಿಮಗೆ ಮತ್ತು ನಿಮ್ಮ ಸಂಸ್ಥೆಗೆ ದೊಡ್ಡ ಅಡಚಣೆಯಾಗಬಹುದು. ಆದ್ದರಿಂದ ಭದ್ರತೆಯ ಬಗ್ಗೆ ನೀವು ಮತ್ತು ನಿಮ್ಮ ಸಹೋದ್ಯೋಗಿಗಳು ನೆನಪಿನಲ್ಲಿಟ್ಟುಕೊಳ್ಳಬೇಕಾದ ಮತ್ತು ನಿಯಮಿತವಾಗಿ ಇದನ್ನು ಉದ್ದೇಶಿಸುವ ನಿಟ್ಟಿನಲ್ಲಿ ನಾವು ಹಲವಾರು ಪ್ರಶ್ನೆಗಳನ್ನು ಅಭಿವೃದ್ಧಿಪಡಿಸಿದ್ದೇವೆ:

- ನಿಮ್ಮ ಸಂಸ್ಥೆಯು ಸರಿಯಾದ ಅಪಾಯದ ಮೌಲ್ಯಮಾಪನಗಳನ್ನು ಮತ್ತು ಅಪಾಯವನ್ನು ತಗ್ಗಿಸುವ ಯೋಜನೆಗಳನ್ನು ಮಾಡಿದೆಯೇ ಮತ್ತು / ಅಥವಾ ನವೀಕರಿಸಿದೆಯೇ?
- ಈ ಮೌಲ್ಯಮಾಪನಗಳಲ್ಲಿ ಮತ್ತು ಯೋಜನೆಗಳಲ್ಲಿ ನಿಮ್ಮ ಸಂಸ್ಥೆಯ ಎಲ್ಲಾ ಸಂಬಂಧಿತ ಸಿಬ್ಬಂದಿಗಳನ್ನು ಮತ್ತು ಅಂಶಗಳನ್ನು ಸೇರಿಸಲಾಗಿದೆಯೇ?
- ನಿಮ್ಮ ಸಂಸ್ಥೆಗೆ ಸಂಭವನೀಯ ಬೆದರಿಕೆಗಳನ್ನು ಎದುರಿಸುವ ಸಾಮರ್ಥ್ಯ ಇದೆಯೇ?
- ಎಲ್ಲಾ ಸಿಬ್ಬಂದಿಗಳೊಂದಿಗೆ ಭದ್ರತಾ ಸಮಸ್ಯೆಗಳ ಕುರಿತು ಮಾತನಾಡಲು ನಿಮ್ಮ ಸಂಸ್ಥೆಯು ವೇದಿಕೆಗಳನ್ನು ರಚಿಸುತ್ತಿದೆಯೇ?
- ಭದ್ರತಾ ಯೋಜನೆಯನ್ನು ತಯಾರಿಸಲು ಸಂಸ್ಥೆಗೆ ಸಾಮರ್ಥ್ಯ ಅಭಿವೃದ್ಧಿ ಅಥವಾ ಸಂಪನ್ಮೂಲಗಳ ಅಗತ್ಯವಿದೆಯೇ ಅಥವಾ ಪ್ರಸ್ತುತ ಭದ್ರತಾ ಪರಿಸ್ಥಿತಿಗೆ ಸಂಬಂಧಿಸಿದಂತೆ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕಿದೆಯೇ?
- ಎನ್‌ಹೆಚ್‌ಆರ್‌ಎಫ್ ಜೊತೆಗಿನ ಸಂಬಂಧದಿಂದಾಗಿ ನಿಮ್ಮ ಸಂಸ್ಥೆಯನ್ನು ಹೆಚ್ಚು ದುರ್ಬಲವಾಗುವಂತೆ ಮಾಡುವಂತದ್ದು ಏನಾದರು ಇದೆಯೇ ? ಉದಾಹರಣೆಗೆ, ಎನ್‌ಹೆಚ್‌ಆರ್‌ಎಫ್ ಸಂಸ್ಥೆಯ ವಿದೇಶಿ ಸಿಬ್ಬಂದಿಯ ಕ್ಷೇತ್ರ ಭೇಟಿಗಳಿಂದಾಗಿ ನಿಮ್ಮ ಸಂಸ್ಥೆಯನ್ನು ಹೆಚ್ಚು ಬಹಿರಂಗ ಮತ್ತು ದುರ್ಬಲಗೊಳಿಸುತ್ತವೆಯೇ ? ಎನ್‌ಹೆಚ್‌ಆರ್‌ಎಫ್ ಮತ್ತು ನಿಮ್ಮ ಸಂಸ್ಥೆಯ ನಡುವಿನ ಸಂವಹನಕ್ಕಾಗಿ ಪರ್ಯಾಯ ಮಾರ್ಗಗಳನ್ನು ಸ್ಥಾಪಿಸಬೇಕಿದೆಯೇ ?

**ವಾಸ್ತವಿಕವಾಗಿ ಭದ್ರತಾ ಸಂದರ್ಭಗಳು ಸಂಭವಿಸಿದಲ್ಲಿ, ದಯವಿಟ್ಟು ಈ ಕೆಳಗಿನವುಗಳನ್ನು ನೆನಪಿನಲ್ಲಿಡಿ:**

ನಿಮ್ಮ ಸಂಸ್ಥೆ ಮತ್ತು ಕೆಲಸದಲ್ಲಿ ತೊಡಗಿರುವ ಸಿಬ್ಬಂದಿಗಳ ಕೆಲಸ ಮತ್ತು ಕೆಲಸದ ವಾತಾವರಣದ ಮೇಲೆ ನಕಾರಾತ್ಮಕ ಪರಿಣಾಮ ಬೀರುವ ಅಥವಾ ಸಂಭವನೀಯ ಭದ್ರತಾ ಘಟನೆಗಳ ಬಗ್ಗೆ ತಿಳಿಸಬೇಕೆಂದು ಎನ್‌ಹೆಚ್‌ಆರ್‌ಎಫ್ ಬಯಸುತ್ತದೆ.

ನಿರ್ದಿಷ್ಟ ಸಿಬ್ಬಂದಿ ಮತ್ತು / ಅಥವಾ ನಿಮ್ಮ ಸಂಸ್ಥೆಗೆ ಸಂಬಂಧಿಸಿದ ಭದ್ರತಾ ವಿಷಯಗಳ ಬಗ್ಗೆ ನಡೆದ ಘಟನೆಗಳು, ಕಾಳಜಿಗಳು ಮತ್ತು / ಅಥವಾ ವರದಿಗಳನ್ನು ಎನ್‌ಹೆಚ್‌ಆರ್‌ಎಫ್ ಸಂಸ್ಥೆಯೊಂದಿಗೆ ಹಂಚಿಕೊಳ್ಳುವಾಗ, ನಿಮ್ಮ ಸಂಸ್ಥೆಯು ಎನ್‌ಹೆಚ್‌ಆರ್‌ಎಫ್ ಯಾವ ರೀತಿಯ ಕ್ರಮಗಳನ್ನು ತೆಗೆದುಕೊಳ್ಳಬೇಕು (ಅಥವಾ ತೆಗೆದುಕೊಳ್ಳಬಾರದು) ಎಂದು ಬಯಸುತ್ತದೆ ಎಂಬುದರ ಬಗ್ಗೆ ದಯವಿಟ್ಟು ಸ್ಪಷ್ಟವಾದ ಸೂಚನೆಯನ್ನು ನೀಡಿ. ದಯವಿಟ್ಟು ಎಷ್ಟು ಸಾಧ್ಯವಿದೆಯೋ ಅಷ್ಟು ಸ್ಪಷ್ಟವಾಗಿ ತಿಳಿಸಿ.



## ಎನ್‌ಹೆಚ್‌ಆರ್‌ಎಫ್ ಸಂಸ್ಥೆಯ ಸಲಹೆಗಾರರು

ಎನ್‌ಹೆಚ್‌ಆರ್‌ಎಫ್ ಆಯ್ದ ಸಂಖ್ಯೆಯ ದೇಶಗಳಲ್ಲಿ ಸಲಹೆಗಾರರನ್ನು ಹೊಂದಿದೆ. ಸಚಿವಾಲಯಕ್ಕೆ (ಸೆಕ್ರೆಟೇರಿಯಟ್) ಮತ್ತು ಅನುದಾನ ಪಡೆಯುವವರಿಗೆ ಸಂಪನ್ಮೂಲ ವ್ಯಕ್ತಿಯಾಗಿ ಸಲಹೆಗಾರರು ಪಾತ್ರವಹಿಸುತ್ತಾರೆ. ಎನ್‌ಹೆಚ್‌ಆರ್‌ಎಫ್ ತನ್ನ ಭೇಟಿಗಳು ಮತ್ತು ಸಭೆಗಳ ಸಂಭಾಷಣೆಯ ಭಾಗವಾಗಿ ಸಂಸ್ಥೆಯ ಭದ್ರತೆ ಮತ್ತು ರಕ್ಷಣಾ ಕಾರ್ಯತಂತ್ರಗಳನ್ನು ಮಾಡಲು ಪ್ರಯತ್ನಿಸುತ್ತದೆ. ಭದ್ರತೆ ಮತ್ತು ರಕ್ಷಣೆಗೆ –ಸಂಬಂಧಿಸಿದ ವಿಷಯಗಳ ಕುರಿತು ಮಾರ್ಗದರ್ಶನ ಮತ್ತು ಬೆಂಬಲಕ್ಕಾಗಿ ಅನುದಾನ ಪಡೆಯುವವರು ಎನ್‌ಹೆಚ್‌ಆರ್‌ಎಫ್ ಸಂಸ್ಥೆಯ ಸಲಹೆಗಾರರನ್ನು ಸಂಪರ್ಕಿಸಬಹುದು.

**ಸ್ಥಳೀಯ ಸಲಹೆಗಾರರು:**

- ಅನುದಾನ ಪಡೆಯುವವರು ತಮ್ಮ ಕೆಲಸದಲ್ಲಿ ಹೇಗೆ ದುರ್ಬಲರಾಗುತ್ತಾರೆ ಮತ್ತು ಅಗತ್ಯವಿದ್ದರೆ ಇವುಗಳಿಗೆ ಪ್ರತಿಕ್ರಿಯಿಸಲು ಕೈಗೊಳ್ಳಲು ಸಾಧ್ಯವಾಗುವ ಕ್ರಮಗಳ ಬಗ್ಗೆ ಅವಲೋಕನವನ್ನು ಮಾಡಲು ಸಹಾಯ ಮಾಡಬಹುದು
- ಭದ್ರತಾ ಶಿಷ್ಟಾಚಾರಗಳನ್ನು ಸ್ಥಾಪಿಸಲು ಸಹಾಯ ಮಾಡುವ ಸಂಪನ್ಮೂಲ ವ್ಯಕ್ತಿಗಳು / ವಿಶೇಷ ಸಂಸ್ಥೆಗಳೊಂದಿಗೆ ಸಂಪರ್ಕಗಳನ್ನು ಸ್ಥಾಪಿಸಲು ಸಹಾಯ ಮಾಡಬಹುದು



ಅನುದಾನ ಪಡೆಯುವ ಪಾಲುದಾರರಿಗೆ ತಮ್ಮ ಭದ್ರತೆ ಮತ್ತು ರಕ್ಷಣೆಯನ್ನು ಹೆಚ್ಚಿಸಿಕೊಳ್ಳುವ ನಿಟ್ಟಿನಲ್ಲಿ ಅವರ ಸಾಮರ್ಥ್ಯ ಅಭಿವೃದ್ಧಿಗೆ ಸಹಾಯ ಮಾಡಲು ಭದ್ರತೆಯ ಬಗ್ಗೆ ಕಾರ್ಯಾಗಾರಗಳು ಮತ್ತು ಕಲಿಕಾ ಅವಧಿಗಳನ್ನು ಸಂಘಟಿಸಲು ವಾರ್ಷಿಕ ವಿಚಾರ ಸಂಕೀರ್ಣಗಳನ್ನು ಆಯೋಜಿಸುತ್ತದೆ. 2019 ರಂದು ಮೆಕ್ಸಿಕೊದಲ್ಲಿ ನಡೆದ ಎನ್‌ಹೆಚ್‌ಆರ್‌ಎಫ್ ಅನುದಾನ ಪಡೆಯುವ ಪಾಲುದಾರರ ವಿಚಾರ ಸಂಕೀರ್ಣದ ಚಿತ್ರಗಳು

## ಎನ್‌ಹೆಚ್‌ಆರ್‌ಎಫ್ ಸಂಸ್ಥೆಯ ಸಚಿವಾಲಯ (ಸೆಕ್ರೆಟೇರಿಯಟ್)

ಎನ್‌ಹೆಚ್‌ಆರ್‌ಎಫ್ ಓಸ್ಲೋದಲ್ಲಿ ಸಚಿವಾಲಯವನ್ನು ಹೊಂದಿದೆ. ಅನುದಾನ ನೀಡುವುದರ ಜೊತೆಗೆ, ಇತರೆ ಸಂಸ್ಥೆಗಳೊಂದಿಗೆ ಜಾಲಬಂಧದೊಂದಿಗೆ (ನೆಟ್ವರ್ಕ್ ಜೊತೆಗೆ) ಕಾರ್ಯವಹಿಸುತ್ತದೆ, ಮತ್ತು ಒಂದು ಹಂತದವರೆಗೆ ನಿರ್ದಿಷ್ಟ ವಿಷಯಗಳ ಬಗ್ಗೆ ಇತರೆ ಪಾತ್ರದಾರರೊಂದಿಗೆ ವಕಾಲತ್ತು ಪ್ರಯತ್ನಗಳಲ್ಲಿ ತೊಡಗಿಸಿಕೊಂಡಿದೆ.

ಅನುದಾನ ಪಡೆಯುವವರಾಗಿ ನೀವು, ನಿಮ್ಮ ಭದ್ರತೆ ಮತ್ತು ರಕ್ಷಣೆಯ ವಿಷಯಕ್ಕೆ ಬಂದಾಗ, ನಿಮ್ಮ ಬೆಂಬಲಕ್ಕಾಗಿ ಸಚಿವಾಲಯವು ವಿಭಿನ್ನ ಕ್ರಮಗಳನ್ನು ಹೊಂದಿದೆ. ಈ ಕೆಳಗಿನ ಕ್ರಮಗಳನ್ನು ಎನ್‌ಹೆಚ್‌ಆರ್‌ಎಫ್ ಕಾರ್ಯಚರಣೆಯ ಮಾರ್ಗಸೂಚಿಗಳನ್ನು (2013) ವಿವರಿಸಲಾಗಿದೆ:

- ರಕ್ಷಣೆಯ ಬಗ್ಗೆ ಕಾರ್ಯನಿರ್ವಹಿಸುವ ಸಂಸ್ಥೆಗಳೊಂದಿಗೆ ನಿಮ್ಮನ್ನು ಸಂಪರ್ಕಿಸಲು ಪ್ರಸ್ತಾಪಿಸುವುದು
- ನಮ್ಮ ಅನುದಾನ ಪಡೆಯುವವರ ಪರವಾಗಿ ಇತರೆ ದಾನಿಗಳು ಮತ್ತು ಪಾತ್ರಧಾರಿಗಳೊಂದಿಗೆ ಜಂಟಿ ಕಾರ್ಯಗಳನ್ನು ಮಾಡುವುದು
- ಅನುದಾನದ ಆಯವ್ಯಯ ಪತ್ರಗಳಲ್ಲಿ (ಬಜೆಟ್‌ಗಳಲ್ಲಿ) ಭದ್ರತಾ ಶಿಷ್ಟಾಚಾರಗಳು, ಯೋಜನೆಗಳು ಮತ್ತು ತರಬೇತಿಗಳನ್ನು ನೀಡಲು ಸಂಪನ್ಮೂಲಗಳನ್ನು ಸೇರಿಸುವುದು
- ಅನುದಾನ ಪಡೆಯುವವರು ವಿನಂತಿಸಿದ್ದಲ್ಲಿ, ಕಾಳಜಿಯ ವಿಷಯವನ್ನು ರಾಜತಾಂತ್ರಿಕ ನಿಯೋಗಗಳ, ಅದರಲ್ಲೂ ವಿಶೇಷವಾಗಿ ನಾರ್ವೇ ದೇಶದ ವಿದೇಶಾಂಗ ವ್ಯವಹಾರಗಳ ಸಚಿವಾಲಯ ಮತ್ತು ನಾರ್ವೇ ದೇಶದ ಸರ್ಕಾರದ ಗಮನಕ್ಕೆ ತರುವುದು.
- ವಿಶ್ವ ಸಂಸ್ಥೆಯ ವಿಶೇಷ ವರದಿಗಾರರ ಗಮನಕ್ಕೆ ಮೇಲ್ಮನವಿಯನ್ನು ಕಳುಹಿಸುವುದು
- ಎನ್‌ಹೆಚ್‌ಆರ್‌ಎಫ್ ಅನುದಾನ ಪಡೆಯುವವರಿಗೆ ಸಂಬಂಧಿಸಿದ ಪ್ರಕರಣಗಳ ಬಗ್ಗೆ ನಾರ್ವೆಯಲ್ಲಿ ಮಾಹಿತಿಯನ್ನು ವಿತರಿಸುವುದು.

ಕೆಲವು ಸಂಸ್ಥೆಗಳಿಗೆ ತಮ್ಮ ಅರ್ಜಿಗಳಲ್ಲಿ ಅಪಾಯಗಳ ಬಗ್ಗೆ ಸಂಪೂರ್ಣವಾಗಿ ವಿವರಿಸುವುದು ಕಷ್ಟ ಎಂಬುವುದಾಗಿ ಎನ್‌ಹೆಚ್‌ಆರ್‌ಎಫ್‌ನ ಸಚಿವಾಲಯಕ್ಕೆ (ಸೆಕ್ರೆಟೇರಿಯಟ್) ತಿಳಿದಿದೆ. ಈ ಅಂತರವನ್ನು ತುಂಬುವ ಸಲುವಾಗಿ, ಕ್ಷೇತ್ರ ಭೇಟಿಗಳ ಸಮಯದಲ್ಲಿ ಅಥವಾ ಇತರ ರೀತಿಯ ಸಂವಹನಗಳ ಮೂಲಕ ನಾವು ಈ ಸಂಭಾಷಣೆಗಳನ್ನು ಅನುಸರಿಸುತ್ತೇವೆ. ಈ ಪ್ರಯತ್ನಗಳು ನಿಮ್ಮ ಸಂಸ್ಥೆಯು ಎದುರಿಸುತ್ತಿರುವ ಅಪಾಯಗಳನ್ನು ಮತ್ತು ಈ ಅಪಾಯಗಳನ್ನು ತಗ್ಗಿಸಲು ನೀವು ಹೇಗೆ ಯೋಜಿಸುತ್ತೀರಿ ಎಂಬುದನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಲು ನಮಗೆ ಸಹಾಯ ಮಾಡಲು ಉದ್ದೇಶಿಸಲಾಗಿದೆ. ನಿಮ್ಮ ಸಹಕಾರದೊಂದಿಗೆ ಭದ್ರತೆಯ ಬಗ್ಗೆ ಸಂವಹನ ನಡೆಸಲು ಉತ್ತಮ ಮಾರ್ಗಗಳನ್ನು ಕಂಡುಕೊಳ್ಳಬೇಕೆಂದು ನಾವು ಭಾವಿಸುತ್ತೇವೆ.


# ಬೆಂಬಲ ಕಾರ್ಯವಿಧಾನಗಳು

ಮೊದಲೇ ವಿವರಿಸಿದ ಸಾಮಾನ್ಯ ಚೌಕಟ್ಟಿನ ಆಧಾರದ ಮೇಲೆ, ಮಾನವ ಹಕ್ಕುಗಳ ರಕ್ಷಕರಿಗೆ ಹಲವು ವರ್ಷಗಳಿಂದ ವ್ಯಾಪಕವಾದ ಬೆಂಬಲ ಕಾರ್ಯವಿಧಾನಗಳು ಅಸ್ತಿತ್ವಕ್ಕೆ ಬಂದಿವೆ. ಇಲ್ಲಿ, ಮಾನವ ಹಕ್ಕುಗಳ ರಕ್ಷಕರಿಗೆ ಬೆಂಬಲ ನೀಡುವ ಮೂರು ಸಂಬಂಧಿತ ವಿಶ್ವ ಸಂಸ್ಥೆಯ ಕಾರ್ಯವಿಧಾನಗಳ, ಅಸ್ತಿತ್ವದಲ್ಲಿರುವ ಮಾರ್ಗಸೂಚಿಗಳ ಬಗ್ಗೆ ಮತ್ತು ಆಯ್ದ ವಿಶೇಷ ಸಂಸ್ಥೆಗಳಿಂದ ಲಭ್ಯವಿರುವ ಬೆಂಬಲವನ್ನು ಕೇಂದ್ರೀಕರಿಸಲು ನಾವು ಆಯ್ಕೆ ಮಾಡಿದ್ದೇವೆ. ಮಾನವ ಹಕ್ಕುಗಳ ಆಯೋಗಗಳು ಮತ್ತು ಸಂಸ್ಥೆಗಳು ಮತ್ತು ಸಂಬಂಧಿತ ಪರಿಣತಿಯನ್ನು ಹೊಂದಿರುವ ವಿವಿಧ ಸಂಸ್ಥೆಗಳಂತಹ ರಾಷ್ಟ್ರೀಯ ಮತ್ತು ಪ್ರಾದೇಶಿಕ ಬೆಂಬಲ ಕಾರ್ಯವಿಧಾನಗಳು ಸಹ ಲಭ್ಯವಿವೆ ಎಂಬುದನ್ನು ಗಮನಿಸುವುದು ಮುಖ್ಯ.

ಇದಲ್ಲದೆ, ದೇಶೀಯ ಸರ್ಕಾರೇತರ ಸಂಸ್ಥೆಗಳು, ಜಾಲಬಂಧಗಳು (ನೆಟ್‌ವರ್ಕ್‌ಗಳು) ಮತ್ತು ಮಾನವ ಹಕ್ಕುಗಳ ರಕ್ಷಕರಿಗೆ ಬೆಂಬಲ ನೀಡುವಲ್ಲಿ ಕೆಲಸ ಮಾಡುವ ಮೈತ್ರಿಗಳು ಮತ್ತು ನಿಮ್ಮ ಪ್ರದೇಶದಲ್ಲಿ ಸಹಾಯ ಮಾಡುವ ಬೆಂಬಲ ಗುಂಪುಗಳು ಮತ್ತು ವ್ಯಕ್ತಿಗಳೊಂದಿಗೆ ನೀವು ಗುರುತಿಸುವುದು ಮತ್ತು ಸಂಪರ್ಕವನ್ನು ಸ್ಥಾಪಿಸುವುದು ಬಹಳ ಮುಖ್ಯವಾಗುತ್ತದೆ. ನಿಮ್ಮ ಪ್ರದೇಶ, ದೇಶ ಮತ್ತು ಸ್ಥಳೀಯ ಸನ್ನಿವೇಶದಲ್ಲಿನ ವಿವಿಧ ಬೆಂಬಲ ಕಾರ್ಯವಿಧಾನಗಳ ಬಗ್ಗೆ ಮಾಹಿತಿ ಮತ್ತು ತಿಳುವಳಿಕೆಯನ್ನು ಪಡೆಯಲು ಮತ್ತು ಅವುಗಳನ್ನು ನಿಮಗಾಗಿ ಇರುವುದರಿಂದ ಅವುಗಳನ್ನು ಸಕ್ರಿಯವಾಗಿ ಬಳಸಲು ನಾವು ನಮ್ಮ ಎಲ್ಲ ಅನುದಾನ ಪಡೆಯುವವರನ್ನು ಪ್ರೋತ್ಸಾಹಿಸುತ್ತೇವೆ.

### ನಿಮ್ಮ ಸ್ಥಳೀಯ ಮತ್ತು ರಾಷ್ಟ್ರೀಯ ಸಂದರ್ಭಗಳಲ್ಲಿನ ಬೆಂಬಲ ಕಾರ್ಯವಿಧಾನಗಳು

- ನಿಮ್ಮ ಸರ್ಕಾರವು ಮಾನವ ಹಕ್ಕುಗಳ ರಕ್ಷಕರ ಬಗ್ಗೆ ಕ್ರಿಯಾ ಯೋಜನೆಯನ್ನು ಹೊಂದಿದೆಯೇ?
- ನಿಮ್ಮ ದೇಶದಲ್ಲಿ ರಾಷ್ಟ್ರೀಯ ಮಾನವ ಹಕ್ಕುಗಳ ರಕ್ಷಕರು ಸಂಪರ್ಕಿಸಲು ಕೇಂದ್ರಬಿಂದು ಇದೆಯೇ?
- ನಿಮ್ಮ ದೇಶದಲ್ಲಿ ಮಾನವ ಹಕ್ಕುಗಳ ರಕ್ಷಕರ ಜಾಲಬಂಧಗಳು (ನೆಟ್ವರ್ಕ್‌ಗಳು) ಮತ್ತು ಮೈತ್ರಿಗಳು ಇವೆಯೇ ಮತ್ತು ನೀವು ಅವರೊಂದಿಗೆ ಸಂಪರ್ಕವನ್ನು ಹೊಂದಿದ್ದೀರಾ?
- ನಿಮ್ಮ ದೇಶದಲ್ಲಿ ಮಾನವ ಹಕ್ಕುಗಳ ರಕ್ಷಕರ ಬೆಂಬಲಕ್ಕೆ ನಿರ್ದಿಷ್ಟವಾಗಿ ಕಾರ್ಯವಹಿಸುತ್ತಿರುವ ಸರ್ಕಾರೇತರ ಸಂಸ್ಥೆಗಳ ಬಗ್ಗೆ ನಿಮಗೆ ತಿಳಿದಿದೆಯೇ ಮತ್ತು ನೀವು ಅವರೊಂದಿಗೆ ಸಂಪರ್ಕವನ್ನು ಹೊಂದಿದ್ದೀರಾ?
- ನಿಮ್ಮ ದೇಶದೊಂದಿಗೆ ನಿರ್ದಿಷ್ಟವಾಗಿ ಕೆಲಸ ಮಾಡುವ ಸಂಬಂಧಿತ ಅಂತರ್–ಸರ್ಕಾರಿ ಸಂಸ್ಥೆಗಳನ್ನು ನೀವು ಸಂಪರ್ಕಿಸಿದ್ದೀರಾ?
- ನಿಮ್ಮ ಪ್ರದೇಶದಲ್ಲಿ ಇರುವ ಸಂಬಂಧಿತ ಸ್ಥಳೀಯ ಬೆಂಬಲ ಗುಂಪುಗಳು ಮತ್ತು / ಅಥವಾ ವ್ಯಕ್ತಿಗಳೊಂದಿಗೆ ನೀವು ಗುರುತಿಸಿದ್ದೀರಾ ಮತ್ತು ಸಂಪರ್ಕವನ್ನು ಹೊಂದಿದ್ದೀರಾ?



## ಟಿಪ್ಪಣಿಗಳು (NOTES)



## ಮಾನವ ಹಕ್ಕುಗಳ ರಕ್ಷಕರಿಗೆ ಸಂಬಂಧಿಸಿದ ವಿಶ್ವ ಸಂಸ್ಥೆಯ (UN) ಕಾರ್ಯವಿಧಾನಗಳು



ವಿಶ್ವ ಸಂಸ್ಥೆ ಕಚೇರಿಯ ಮಾನವ ಹಕ್ಕುಗಳ ಹೈ ಕಮಿಷನರ್ (ಒಎಚ್‌ಸಿಎಚ್‌ಆರ್) ಮಾನವ ಹಕ್ಕುಗಳ ರಕ್ಷಕರ ಮೇಲೆ ಪ್ರಬಲ ಗಮನವನ್ನು ಹೊಂದಿದ್ದಾರೆ. ಈ ವಿಭಾಗದಲ್ಲಿ ನಾವು ಮಾನವ ಹಕ್ಕುಗಳ ರಕ್ಷಕರಿಗೆ ನಿರ್ದಿಷ್ಟವಾಗಿ ಸಂಬಂಧಿಸಿದ ಮೂರು ವಿಶ್ವ ಸಂಸ್ಥೆ ವಿಶೇಷ ಕಾರ್ಯವಿಧಾನಗಳ ಆದೇಶವನ್ನು ಹೊಂದಿರುವವರನ್ನು ಪರಿಚಯಿಸಲು ಆಯ್ಕೆ ಮಾಡಿದ್ದೇವೆ: ಮಾನವ ಹಕ್ಕುಗಳ ರಕ್ಷಕರ ಪರಿಸ್ಥಿತಿಯ ಬಗ್ಗೆ ವಿಶೇಷ ವರದಿಗಾರರು; ಶಾಂತಿಯುತ ಸಭೆ ಮತ್ತು ಸಂಘಟನೆಯ ಸ್ವಾತಂತ್ರ್ಯದ ಹಕ್ಕುಗಳ ಕುರಿತ ವಿಶೇಷ ವರದಿಗಾರರು; ಮತ್ತು ಅಭಿಪ್ರಾಯ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕಿನ ಪ್ರಚಾರ ಮತ್ತು ರಕ್ಷಣೆಯ ಕುರಿತ ವಿಶೇಷ ವರದಿಗಾರರು.

ತಮ್ಮ ಕೆಲಸದ ಭಾಗವಾಗಿ, ಈ ವಿಶೇಷ ವರದಿಗಾರರು ವಿಶ್ವ ಸಂಸ್ಥೆಯ ಮಾನವ ಹಕ್ಕುಗಳ ಪರಿಷತ್ತು ಮತ್ತು ಸಾಮಾನ್ಯ ಸಭೆಗೆ ವಾರ್ಷಿಕ ವರದಿಗಳನ್ನು ತಯಾರಿಸುತ್ತಾರೆ ಮತ್ತು ರಾಷ್ಟ್ರಮಟ್ಟದಲ್ಲಿ ಮಾನವ ಹಕ್ಕುಗಳ ಪರಿಸ್ಥಿತಿಯನ್ನು ತನಿಖೆ ಮಾಡಲು ದೇಶಗಳ ಭೇಟಿಗಳನ್ನು ಮಾಡುತ್ತಾರೆ. ಅವರ ಭೇಟಿಗಳ ನಂತರ, ಅವರು ತಮ್ಮ ಶೋಧನಗಳನ್ನು ಮತ್ತು ಶಿಫಾರಸ್ಸುಗಳನ್ನು ಒಳಗೊಂಡಂತಹ ಅಭಿಯಾನದ ವರದಿಯನ್ನು ಮಾನವ ಹಕ್ಕುಗಳ ಪರಿಷತ್ತಿಗೆ ಸಲ್ಲಿಸುತ್ತಾರೆ. ಅವರು ಒಂದು ದೇಶಕ್ಕೆ ಅನೌಪಚಾರಿಕ ಭೇಟಿಗಳನ್ನು ಮಾಡಬಹುದು, ನಾಗರಿಕ ಸಮಾಜ ಮತ್ತು ಇತರ ಸಂಬಂಧಿತ ಪಾತ್ರದಾರಿಗಳೊಂದಿಗೆ ಕ್ಷೇತ್ರ ಮಟ್ಟದಲ್ಲಿ ಭಾಗಿಯಾಗಬಹುದು. ಈ ಕೆಳಗೆ, ಆದೇಶ ಹೊಂದಿರುವವರು ಸಂಬಂಧಪಟ್ಟ ರಾಷ್ಟ್ರಗಳೊಂದಿಗೆ ಪ್ರತ್ಯೇಕ ಪ್ರಕರಣಗಳನ್ನು ತೆಗೆದುಕೊಳ್ಳುವ ಸಾಧ್ಯತೆಯನ್ನು ನಾವು ಎತ್ತಿ ತೋರಿಸಿದ್ದೇವೆ. ಪ್ರತಿ ವಿಭಾಗದ ಅಡಿಯಲ್ಲಿ ನೀವು ವಿಶೇಷ ವರದಿಗಾರರ ಸಂಪರ್ಕ ಮಾಹಿತಿ ಮತ್ತು ವೆಬ್‌ಸೈಟ್‌ನ ಮುಖಪುಟ ಮತ್ತು ವೈಯಕ್ತಿಕ ದೂರುಗಳ ಕಾರ್ಯವಿಧಾನಗಳ ಲಿಂಕ್‌ಗಳನ್ನು ಕಾಣಬಹುದು.

ಈ ಕೆಳಗೆ ತಿಳಿಸಲಾದ ಮೂರು ವಿಶೇಷ ವರದಿಗಾರರ ಜೊತೆಗೆ, ಮಾನವ ಹಕ್ಕುಗಳ ರಕ್ಷಕರ ಮತ್ತು ಸಂಬಂಧಿತ ವಿಷಯಗಳ ಮೇಲೆ ಕೇಂದ್ರೀಕರಿಸುವ ಇತರ ವಿಷಯಾಧಾರಿತ ಆದೇಶಗಳಿವೆ. ಇದಕ್ಕೆ ಒಂದು ಉದಾಹರಣೆ ಎಂದರೆ, ಬಲವಂತದ ಅಥವಾ ಅನೈಚ್ಛಿಕ ಕಣ್ಮರೆಗಳ ಬಗ್ಗೆ ಕೆಲಸ ಮಾಡುವ ಗುಂಪು (ವರ್ಕಿಂಗ್ ಗ್ರೂಪ್ ಆನ್ ಎನ್ಫೋರ್ಸ್ಡ್ ಆರ್ ಇಂವಾಲಂಟರಿ ಡಿಸ್‌ಅಪೀಯರೆನ್ಸಸ್ (ಡಬ್ಲ್ಯುಜಿಇಐಡಿ), ಇದು ಒಂದು ವಿಶೇಷ ತುರ್ತು ಕಾರ್ಯವಿಧಾನವನ್ನು ಸಹ ಹೊಂದಿರುತ್ತದೆ. ಇತರ ಆದೇಶಗಳೆಂದರೆ, ಸ್ಥಳೀಯ ಜನರ ಹಕ್ಕುಗಳು, ಮಹಿಳೆಯರ ಮೇಲಿನ ದೌರ್ಜನ್ಯ ಮತ್ತು ಸುರಕ್ಷಿತ, ಸ್ವಚ್ಛ, ಆರೋಗ್ಯಕರ ಮತ್ತು ಸುಸ್ಥಿರ ವಾತಾವರಣದ ಆಹ್ಲಾದಿಸುವ ಬಗ್ಗೆ ವಿಶೇಷ ವರದಿಗಾರರನ್ನು ಒಳಗೊಂಡಿರುತ್ತಾರೆ. ಅಸ್ತಿತ್ವದಲ್ಲಿರುವ ಎಲ್ಲಾ ವಿಶೇಷ ಕಾರ್ಯವಿಧಾನಗಳ ಆದೇಶವನ್ನು ಹೊಂದಿರುವವರ ಅವಲೋಕನವನ್ನು ಪಡೆಯಲು ನಾವು ನಿಮ್ಮನ್ನು ಪ್ರೋತ್ಸಾಹಿಸುತ್ತೇವೆ, ಏಕೆಂದರೆ ನೀವು ಕೆಲಸ ಮಾಡುವ ಮಾನವ ಹಕ್ಕುಗಳ ಸಮಸ್ಯೆಗಳನ್ನು ಅವಲಂಬಿಸಿರುವ ಕಾರಣ ಇವುಗಳಲ್ಲಿ ಹಲವು ನಿಮಗೆ ಮಹತ್ವದ್ದಾಗಿರಬಹುದು.



### ಮಾನವ ಹಕ್ಕುಗಳ ಪರಿಷತ್ತಿನ ಕಾರ್ಯವಿಧಾನಗಳು

ಸೆಪ್ಟೆಂಬರ್ 2018 ರ ಹೊತ್ತಿಗೆ, ಮಾನವ ಹಕ್ಕುಗಳ ಪರಿಷತ್ತಿನ ವಿಶೇಷ ಕಾರ್ಯವಿಧಾನಗಳ ಅಡಿಯಲ್ಲಿ 44 ವಿಷಯಾಧಾರಿತ ಮತ್ತು 12 ದೇಶದ ಆದೇಶಗಳಿವೆ. ಪೂರ್ಣ ಅವಲೋಕನಕ್ಕಾಗಿ, ವಿಶೇಷ ಕಾರ್ಯವಿಧಾನಗಳ ವೆಬ್‌ಸೈಟ್ ಮುಖಪುಟವನ್ನು ನೋಡಿ:

(Special Procedures of the Human Rights Council) https://bit.ly/3dwnB6y

## ಮಾನವ ಹಕ್ಕುಗಳ ರಕ್ಷಕರ ಪರಿಸ್ಥಿತಿ ಕುರಿತು ವಿಶೇಷ ವರದಿಗಾರರು

ಮಾನವ ಹಕ್ಕುಗಳ ರಕ್ಷಕರ ಕುರಿತ 1998ರ ಘೋಷಣೆಯನ್ನು ಅನುಷ್ಠಾನವನ್ನು ಬೆಂಬಲಿಸಲು, ಮಾನವ ಹಕ್ಕುಗಳ ರಕ್ಷಕರ ಪರಿಸ್ಥಿತಿಯ ಕುರಿತಾದ ಆದೇಶವನ್ನು 2000ದಲ್ಲಿ ಅಂದಿನ ಮಾನವ ಹಕ್ಕುಗಳ ಆಯೋಗವು (ವಿಶೇಷ ಕಾರ್ಯವಿಧಾನವಾಗಿ) ಸ್ಥಾಪಿಸಿತು. ಮೂರು ವರ್ಷಗಳ ಅವಧಿಗೆ ನಿರ್ಣಯ ಎ / ಎಚ್‌ಆರ್‌ಸಿ / ಆರ್‌ಇಎಸ್ / 34/5 https://bit.ly/2wtVjZC ದೊಂದಿಗೆ 2017 ರಲ್ಲಿ ಆದೇಶವನ್ನು ಇತ್ತೀಚೆಗೆ ನವೀಕರಿಸಲಾಯಿತು.[15]

ವಿಶೇಷ ವರದಿಗಾರರು ರಾಷ್ಟ್ರಗಳು ಮತ್ತು ರಕ್ಷಕರ ವಿರುದ್ಧದ ಮಾನವ ಹಕ್ಕುಗಳ ಉಲ್ಲಂಘನೆಯ ವೈಯಕ್ತಿಕ ಪ್ರಕರಣಗಳೊಂದಿಗೆ ಕೆಲಸ ಮಾಡುತ್ತಾರೆ. ಅಂತಹ ಪ್ರಕರಣಗಳ ಮಾಹಿತಿಯನ್ನು ವೈಯಕ್ತಿಕ ರಕ್ಷಕರು, ಸರ್ಕಾರೇತರ ಸಂಸ್ಥೆಗಳು ಮತ್ತು ವಿಶ್ವ ಸಂಸ್ಥೆಯ ಸಂಸ್ಥೆಗಳು (ಯುಎನ್ ಏಜೆನ್ಸಿಗಳು) ಸೇರಿದಂತೆ ವಿವಿಧ ಮೂಲಗಳ ಮೂಲಕ ಸ್ವೀಕರಿಸಲಾಗುತ್ತದೆ.

ಮಾಹಿತಿಯು ಆದೇಶದ ವ್ಯಾಪ್ತಿಗೆ ಬಂದರೆ ಮತ್ತು ಅದರ ಸಂಭವನೀಯ ಸಿಂಧುತ್ವವನ್ನು ದೃಢೀಕರಿಸಿದರೆ, ವಿಶೇಷ ವರದಿಗಾರರು ಅಲ್ಲಿ ಉಲ್ಲಂಘನೆ ಸಂಭವಿಸಿದೆ ಎಂದು ಭಾವಿಸಲಾಗಿರುವ ರಾಷ್ಟ್ರ ಸರ್ಕಾರವನ್ನು ಸಂಪರ್ಕಿಸುತ್ತಾರೆ. ರಾಜಧಾನಿಗಳಿಗೆ ರವಾನೆ ಮಾಡುವ ಸಲುವಾಗಿ ಜಿನೀವಾದಲ್ಲಿ ವಿಶ್ವಸಂಸ್ಥೆಯೊಂದಿಗಿನ ರಾಷ್ಟ್ರದ ರಾಜತಾಂತ್ರಿಕ ಕಾರ್ಯಾಚರಣೆಯನ್ನು ಉದ್ದೇಶಿಸಿ ತುರ್ತು ಮನವಿ ಅಥವಾ ಆರೋಪ ಪತ್ರದ ಮೂಲಕ ('ಸಂವಹನ' ಎಂದು ಕರೆಯಲಾಗುತ್ತದೆ) ಸಂಪರ್ಕವನ್ನು ಸಾಮಾನ್ಯವಾಗಿ ನಡೆಸಲಾಗುತ್ತದೆ. ತುರ್ತು ಮೇಲ್ಮನವಿಗಳು ಮತ್ತು ಆರೋಪ ಪತ್ರಗಳೆರಡರೊಂದಿಗೆ, ವಿಶೇಷ ವರದಿಗಾರರು ಆಪಾದಿತ ಘಟನೆಗಳನ್ನು ತನಿಖೆ ಮಾಡಲು ಮತ್ತು ಪರಿಹರಿಸಲು ಎಲ್ಲಾ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುವಂತೆ ಸರ್ಕಾರವನ್ನು ಕೇಳುತ್ತಾರೆ ಮತ್ತು ಅದರ ತನಿಖೆ ಮತ್ತು ಕ್ರಮಗಳ ಫಲಿತಾಂಶಗಳನ್ನು ವಿಶೇಷ ವರದಿಗಾರರಿಗೆ ತಿಳಿಸಲು ಕೋರುತ್ತಾರೆ. ವಿಶೇಷ ವರದಿಗಾರರ ವೆಬ್‌ಸೈಟಿನಲ್ಲಿ ವಿಶೇಷ ವರದಿಗಾರರು ಅವನು / ಅವಳು ಒಂದು ಪ್ರಕರಣದ ಬಗ್ಗೆ ಕ್ರಮ ತೆಗೆದುಕೊಳ್ಳಲು ಮತ್ತು ಮಾಹಿತಿಯನ್ನು ಹೇಗೆ ಸಲ್ಲಿಸಬಹುದು ಎಂಬುದರ ಕುರಿತು ಮಾರ್ಗಸೂಚಿಗಳನ್ನು ನೀವು ಕಾಣಬಹುದು.




ಮೇ 2020 ರಿಂದ ಮಾನವ ಹಕ್ಕುಗಳ ರಕ್ಷಕರ ಪರಿಸ್ಥಿತಿ ಕುರಿತು ಮೇರಿ ಲಾಲಾರ್, ವಿಶೇಷ ವರದಿಗಾರರು ಮತ್ತು ಎನ್‌ಹೆಚ್‌ಆರ್‌ಎಫ್ ಸಲಹಾ ಮಂಡಳಿ ಸದಸ್ಯರು, ಮಾಜಿ ನಾರ್ವೇಜಿಯನ್ ವಿದೇಶಾಂಗ ವ್ಯವಹಾರಗಳ ಕಾರ್ಯದರ್ಶಿ ಆಡುನ್ ಹಾಲ್ವರ್ಸನ್ ಮತ್ತು ವಿಶ್ವ ಸಂಸ್ಥೆಯ ಮಾಜಿ ಮಾನವ ಹಕ್ಕುಗಳ ಸಹಾಯಕ ಪ್ರಧಾನ ಕಾರ್ಯದರ್ಶಿ ಆಂಡ್ರ್ಯೂ ಗಿಲ್ಮೊರ್ ಮತ್ತು ಮಾನವ ಹಕ್ಕುಗಳ ರಕ್ಷಕರರ ಬಗೆಗಿನ ಮಾಜಿ ವಿಶೇಷ ವರದಿಗಾರರಾದ, ಮೈಕೆಲ್ ಫಾರ್ಸ್ಟ್ ಅವರೊಂದಿಗೆ ಸಂವಾದ ನಡೆಸಿದರು.

**ವಿಶೇಷ ವರದಿಗಾರರ ಅಧಿಕೃತ ವೆಬ್‌ಸೈಟ್**
https://bit.ly/2WBXXag

**ವಿಶೇಷ ವರದಿಗಾರರ ವೈಯಕ್ತಿಕ ದೂರುಗಳ ಕಾರ್ಯವಿಧಾನ**
https://www.ohchr.org/EN/HRBodies/SP/Pages/Communications.aspx

ಇ–ಮೇಲ್ ಸಂಪರ್ಕ ವಿವರಗಳು: urgent-action@ohchr.org
(ಆರೋಪಗಳಿಗಾಗಿ) ಅಥವಾ defenders@ohchr.org
ಇ–ಮೇಲ್‌ನ ಪತ್ರದಲ್ಲಿ ಮಾನವ ಹಕ್ಕುಗಳ ರಕ್ಷಕರ ಆದೇಶವನ್ನು ಉಲ್ಲೇಖಿಸಬೇಕು.

ಮಾನವ ಹಕ್ಕುಗಳ ರಕ್ಷಕರ ಕುರಿತಾದ ವಿಶೇಷ ವರದಿಗಾರರು ಅವರ ಸ್ವಂತ ವೆಬ್‌ಸೈಟನ್ನು https://bit.ly/3anY9Ok ಇಂಗ್ಲಿಷ್, ಫ್ರೆಂಚ್ ಮತ್ತು ಸ್ಪ್ಯಾನಿಷ್ ಭಾಷೆಗಳಲ್ಲಿ ಸಹ ಹೊಂದಿದ್ದಾರೆ.



## ಶಾಂತಿಯುತವಾಗಿ ಸಭೆ ಸೇರುವ ಮತ್ತು ಸಂಘಟಿಸುವ ಸ್ವಾತಂತ್ರ್ಯದ ಹಕ್ಕುಗಳ ಕುರಿತು ವಿಶೇಷ ವರದಿಗಾರರು

ಶಾಂತಿಯುತವಾಗಿ ಸಭೆ ಸೇರುವ ಮತ್ತು ಸಂಘಟಿಸುವ ಸ್ವಾತಂತ್ರ್ಯದ ಹಕ್ಕುಗಳ ಕುರಿತು ವಿಶೇಷ ವರದಿಗಾರರು

ಅಕ್ಟೋಬರ್ 2010ರಲ್ಲಿ, ಮಾನವ ಹಕ್ಕುಗಳ ಪರಿಷತ್ತು ನಿರ್ಣಯ 15/21ನ್ನು ಅಂಗೀಕರಿಸಿತು https://bit.ly/2UzHIYW ಇದು ಮೂರು ವರ್ಷಗಳ ಆರಂಭಿಕ ಅವಧಿಗೆ ಶಾಂತಿಯುತವಾಗಿ ಸಭೆ ಸೇರುವ ಮತ್ತು ಸಂಘಟಿಸುವ ಸ್ವಾತಂತ್ರ್ಯದ ಹಕ್ಕುಗಳ ಬಗ್ಗೆ ವಿಶೇಷ ವರದಿಗಾರರ ಆದೇಶವನ್ನು ಸ್ಥಾಪಿಸಿತು. ಆದೇಶವನ್ನು ಹೊಂದಿರುವವರು ಮೂರು ವರ್ಷಗಳ ಆರಂಭಿಕ ಅವಧಿಗೆ ಸೇವೆ ಸಲ್ಲಿಸುತ್ತಾರೆ, ಹಾಗೇ ಒಮ್ಮೆ ನವೀಕರಿಸಬಹುದಾಗಿದೆ. ಪರಿಷತ್ತು ಜುಲೈ 2016 ರಲ್ಲಿ ವಿಶೇಷ ವರದಿಗಾರರ ಆದೇಶವನ್ನು ಮೂರು ವರ್ಷಗಳ ಹೆಚ್ಚುವರಿ ಅವಧಿಗೆ ವಿಸ್ತರಿಸಿತು (ನಿರ್ಣಯ 32/32) https://bit.ly/2vHkQOF.[17]

ಶಾಂತಿಯುತವಾಗಿ ಸಭೆ ಸೇರುವ ಮತ್ತು ಸಂಘಟಿಸುವ ಸ್ವಾತಂತ್ರ್ಯದ ಹಕ್ಕುಗಳನ್ನು ಉತ್ತೇಜಿಸಲು ಮತ್ತು ರಕ್ಷಿಸಲು ವಿಶೇಷ ವರದಿಗಾರರನ್ನು ಕಡ್ಡಾಯಗೊಳಿಸಲಾಗಿರುವುದರಿಂದ, ಸಂಬಂಧಿತ ಸನ್ನಿವೇಶಗಳ ಮತ್ತು ಪ್ರಕರಣಗಳ ಬಗ್ಗೆ ತಿಳುವಳಿಕೆ ಹೊಂದಿರುವ ಸರ್ಕಾರಗಳು, ಎನ್‌ಜಿಓಗಳು ಇತರ ಯಾವುದೇ ಪಕ್ಷಗಳಿಂದ ನಂಬಲರ್ಹ ಮತ್ತು ವಿಶ್ವಾಸಾರ್ಹ ಮಾಹಿತಿಯನ್ನು ಪಡೆಯುವಂತೆ ಮಾನವ ಹಕ್ಕುಗಳ ಪರಿಷತ್ತು ವಿಶೇಷ ವರದಿಗಾರರನ್ನು ಕೋರಿದೆ. ಅಂತಹ ಮಾಹಿತಿ ದೊರೆತ ನಂತರ, ವಿಶೇಷ ವರದಿಗಾರರು ಎದ್ದಿರುವ ಆರೋಪಗಳ ಬಗ್ಗೆ ಸ್ಪಷ್ಟತೆಗಾಗಿ ಸಂಬಂಧಪಟ್ಟ ಅಧಿಕಾರಿಗಳಿಗೆ ತುರ್ತು ಮೇಲ್ಮನವಿ ಅಥವಾ ಆರೋಪ ಪತ್ರಗಳನ್ನು ಕಳುಹಿಸುತ್ತಾರೆ. ವಿಶೇಷ ವರದಿಗಾರರ ವೆಬ್‌ಸೈಟ್‌ನಲ್ಲಿ, ವಿಶೇಷ ವರದಿಗಾರರು ಅವನು / ಅವಳು ಒಂದು ಪ್ರಕರಣದ ಬಗ್ಗೆ ಕ್ರಮ ತೆಗೆದುಕೊಳ್ಳಲು ಬೇಕಾಗುವ ಮಾಹಿತಿಯ ವಿಧಗಳು ಮತ್ತು ಈ ಮಾಹಿತಿಯನ್ನು ಹೇಗೆ ಸಲ್ಲಿಸಬಹುದು ಎಂಬ ಮಾರ್ಗಸೂಚಿಗಳನ್ನು ನೀವು ಕಾಣಬಹುದು.

2012 ರಿಂದ ಸರ್ಕಾರೇತರ ಸಂಸ್ಥೆಗಳ ಮೇಲೆ ನೀತಿಗಳನ್ನು, ಕಾನೂನುಗಳನ್ನು ಮತ್ತು ನಿಬಂಧನೆಗಳನ್ನು ದುರ್ಬಲಗೊಳಿಸುವ ಹೆಚ್ಚಳ ಕಂಡುಬಂದಿದೆ. ಈ ಕ್ರಮಗಳ ಮುಖಾಂತರ ವಿದೇಶದಿಂದ ಬರುವ ಧನಸಹಾಯವನ್ನು ಗುರಿ ಮಾಡಲಾಗಿದೆ ಮತ್ತು ಮಾನವ ಹಕ್ಕುಗಳ ರಕ್ಷಕರನ್ನು ಮೌನಗೊಳಿಸುವ ಗುರಿಯೊಂದಿಗೆ ಸರ್ಕಾರಗಳು ಇದನ್ನು ತಡೆಯುತ್ತವೆ. 2013 ರಲ್ಲಿ ಶಾಂತಿಯುತವಾಗಿ ಸಭೆ ಸೇರುವ ಮತ್ತು ಸಂಘಟಿಸುವ ಸ್ವಾತಂತ್ರ್ಯದ ಹಕ್ಕುಗಳ ಬಗ್ಗೆ ವಿಶೇಷ ವರದಿಗಾರರು ಸಂಘಟಿಸುವ ಸ್ವಾತಂತ್ರ್ಯದ ಹಕ್ಕಿನ ಪ್ರಮುಖ ಭಾಗವಾಗಿ ಆರ್ಥಿಕ ಸಂಪನ್ಮೂಲಗಳನ್ನು ಪಡೆಯುವ ಸಂಘಟನೆಗಳ ಸಾಮರ್ಥ್ಯದ ಬಗ್ಗೆ ಗಮನ ಸೆಳೆದರು. ಈ ಕುರಿತು ಹಲವಾರು ಆಸಕ್ತಿದಾಯಕ ಟೀಕೆಗಳನ್ನು ಅವರ ಏಪ್ರಿಲ್ 2013 ರ ವಿಷಯಾಧಾರಿತ ವರದಿಯಲ್ಲಿ ಮತ್ತು ಪ್ರಸ್ತುತ ವಿಶೇಷ ವರದಿಗಾರರ ಆಗಸ್ಟ್ 2018 ರ ವರದಿಯಲ್ಲಿ ಕಾಣಬಹುದು; ಹಾಗೂ ಸಮಸ್ಯೆಗಳು ಮುಂದುವರಿಯುತ್ತಿದೆ ಎಂದು ವರದಿಯಲ್ಲಿ ತೋರಿಸುತ್ತದೆ.[18 19]

**ಶಾಂತಿಯುತವಾಗಿ ಸಭೆ ಸೇರುವ ಮತ್ತು ಸಂಘಟಿಸುವ ಸ್ವಾತಂತ್ರ್ಯದ ಹಕ್ಕುಗಳ ಕುರಿತು ವಿಶೇಷ ವರದಿಗಾರರು**

**ವಿಶೇಷ ವರದಿಗಾರರ ಅಧಿಕೃತ ವೆಬ್‌ಸೈಟ್**
https://bit.ly/2U9o2vR

**ವಿಶೇಷ ವರದಿಗಾರರ ವೈಯಕ್ತಿಕ ದೂರುಗಳ ಕಾರ್ಯವಿಧಾನ**
https://bit.ly/39fgg7U

ಇ–ಮೇಲ್ ಸಂಪರ್ಕ ವಿವರಗಳು: urgent-action@ohchr.org
ಅಥವಾ freeassembly@ohchr.org
ಇ–ಮೇಲ್‌ನ ಪತ್ರದಲ್ಲಿ ಶಾಂತಿಯುತವಾಗಿ ಸಭೆ ಸೇರುವ ಮತ್ತು ಸಂಘಟಿಸುವ ಸ್ವಾತಂತ್ರ್ಯದ ಆದೇಶವನ್ನು ಉಲ್ಲೇಖಿಸಬೇಕು.

ಆನ್‌ಲೈನ್ ಅರ್ಜಿಯನ್ನು https://bit.ly/3bkeu72 ಬಳಸಿಯೂ ಸಹ ಸಲ್ಲಿಕೆಗಳನ್ನು ಮಾಡಬಹುದು

16 ಎ/ಹೆಚ್‌ಆರ್‌ಸಿ/ಆರ್‌ಇಎಸ್/15/21 https://bit.ly/2UzHIYW
17 ಎ/ಹೆಚ್‌ಆರ್‌ಸಿ/ಆರ್‌ಇಎಸ್/32/32 https://bit.ly/2vHkQOF
18 ಎ/ಹೆಚ್‌ಆರ್‌ಸಿ/23/39 https://bit.ly/3abGGsH
19 ಎ/73/2791 https://bit.ly/2U8QsWJ

"ಯಾವುದೇ ಸಂಘಟನೆಯು ಎಷ್ಟೇ ಚಿಕ್ಕದಾದರೂ, ಅದರ ಅಸ್ತಿತ್ವಕ್ಕೆ ಮತ್ತು ಪರಿಣಾಮಕಾರಿ ಕಾರ್ಯಾಚರಣೆಗಳಿಗೆ ಸಂಪನ್ಮೂಲಗಳನ್ನು ಹುಡುಕುವುದು, ಪಡೆಯುವುದು ಮತ್ತು ಬಳಸುವ ಸಾಮರ್ಥ್ಯವು ಅತ್ಯಗತ್ಯವಾಗಿರುತ್ತದೆ. ಸಂಘಟನೆಯ ಸ್ವಾತಂತ್ರ್ಯದ ಹಕ್ಕಿನಲ್ಲಿ ವ್ಯಕ್ತಿಗಳು ಅಥವಾ ಕಾನೂನು ಘಟಕಗಳು ಸಂಘಟನೆಯನ್ನು ರಚಿಸುವ ಮತ್ತು ಸಂಘಟನೆಯನ್ನು ಸೇರುವ ಸಾಮರ್ಥ್ಯವನ್ನು ಒಳಗೊಂಡಿರುವುದರ ಜೊತೆಗೆ ದೇಶೀಯ, ವಿದೇಶಿ ಮತ್ತು ಅಂತರರಾಷ್ಟ್ರೀಯ ಮೂಲಗಳಿಂದ ಮಾನವ ಸಂಪನ್ಮೂಲ, ಭೌತಿಕ ಸಂಪನ್ಮೂಲ ಮತ್ತು ಹಣಕಾಸು ಸಂಪನ್ಮೂಲಗಳನ್ನು ಹುಡುಕುವುದು, ಸ್ವೀಕರಿಸುವುದು ಮತ್ತು ಬಳಸುವುದನ್ನೂ ಸಹ ಒಳಗೊಂಡಿರುತ್ತದೆ."

ಶಾಂತಿಯುತವಾಗಿ ಸಭೆ ಸೇರುವ ಮತ್ತು ಸಂಘಟನೆಯ ಹಕ್ಕುಗಳ ಸ್ವಾತಂತ್ರ್ಯದ ಬಗ್ಗೆ ವಿಶೇಷ ವರದಿಗಾರರ ವರದಿ, ಮೈನಾ ಕಿಯಾ, ಪ್ಯಾರಾ 8 https://bit.ly/3abGGsH.[20]

## ಅಭಿಪ್ರಾಯ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕಿನ ಪ್ರಚಾರ ಮತ್ತು ರಕ್ಷಣೆಯ ಕುರಿತು ವಿಶೇಷ ವರದಿಗಾರರು

**ಅಭಿಪ್ರಾಯ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕಿನ ಪ್ರಚಾರ ಮತ್ತು ರಕ್ಷಣೆಯ ಕುರಿತು ವಿಶೇಷ ವರದಿಗಾರರು**

**ವಿಶೇಷ ವರದಿಗಾರರ ಅಧಿಕೃತ ವೆಬ್‌ಸೈಟ್**
https://bit.ly/2wtl0bB

**ವಿಶೇಷ ವರದಿಗಾರರ ವೈಯಕ್ತಿಕ ದೂರುಗಳ ಕಾರ್ಯವಿಧಾನ**
https://bit.ly/2WyULwc

ಇ–ಮೇಲ್ ಸಂಪರ್ಕ ವಿವರಗಳು: urgent-action@ohchr.org (ಆರೋಪಗಳಿಗಾಗಿ) ಅಥವಾ freedex@ohchr.org
ಇ–ಮೇಲ್‌ನ ಪಠ್ಯದಲ್ಲಿ ಅಭಿಪ್ರಾಯ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಆದೇಶವನ್ನು ಉಲ್ಲೇಖಿಸಬೇಕು.

ಆನ್‌ಲೈನ್ ಅರ್ಜಿಯನ್ನು https://bit.ly/3bkeu72 ಬಳಸಿಯೂ ಸಹ ಸಲ್ಲಿಕೆಗಳನ್ನು ಮಾಡಬಹುದು

ಅಭಿಪ್ರಾಯ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕನ್ನು ಉತ್ತೇಜಿಸುವ ಮತ್ತು ರಕ್ಷಿಸುವ ಕುರಿತು ವಿಶೇಷ ವರದಿಗಾರರ ಆದೇಶವನ್ನು 1993 ರಲ್ಲಿ ಸ್ಥಾಪಿಸಲಾಯಿತು. ಮಾರ್ಚ್ 21, 2017 ರಂದು, ಮಾನವ ಹಕ್ಕುಗಳ ಪರಿಷತ್ತು ವಿಶೇಷ ವರದಿಗಾರರ ಆದೇಶವನ್ನು ಮೂರು ವರ್ಷಗಳ ಅವಧಿಗೆ ವಿಸ್ತರಿಸಿತು (ನಿರ್ಣಯ 34 /18). https://bit.ly/2QB75lk[21]

ಅಭಿಪ್ರಾಯ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಉತ್ತೇಜಿಸಲು ಮತ್ತು ರಕ್ಷಿಸಲು ವಿಶೇಷ ವರದಿಗಾರರನ್ನು ಕಡ್ಡಾಯಗೊಳಿಸಲಾಗಿದೆ. ಸಂಬಂಧಿತ ಸನ್ನಿವೇಶಗಳ ಮತ್ತು ಪ್ರಕರಣಗಳ ಬಗ್ಗೆ ತಿಳುವಳಿಕೆ ಹೊಂದಿರುವ ಸರ್ಕಾರಗಳು, ಎನ್‌ಜಿಒಗಳು ಇತರ ಯಾವುದೇ ಪಕ್ಷಗಳಿಂದ ನಂಬಲರ್ಹ ಮತ್ತು ವಿಶ್ವಾಸಾರ್ಹ ಮಾಹಿತಿಯನ್ನು ಪಡೆಯುವಂತೆ ಮಾನವ ಹಕ್ಕುಗಳ ಪರಿಷತ್ತು ವಿಶೇಷ ವರದಿಗಾರರನ್ನು ಕೋರಿದೆ. ವಿಶೇಷ ವರದಿಗಾರರು ನಂತರ ಎದ್ದಿರುವ ಆರೋಪಗಳ ಬಗ್ಗೆ ಸ್ಪಷ್ಟತೆಗಾಗಿ ಸಂಬಂಧಪಟ್ಟ ಅಧಿಕಾರಿಗಳಿಗೆ ತುರ್ತು ಮೇಲ್ಮನವಿ ಅಥವಾ ಆರೋಪ ಪತ್ರಗಳನ್ನು ಕಳುಹಿಸುತ್ತಾರೆ. ಮಾನವ ಹಕ್ಕುಗಳ ರಕ್ಷಕರ ಚಟುವಟಿಕೆಗಳ ನಿರ್ದಿಷ್ಟವಾದ ಮಾಹಿತಿಯನ್ನು ಸ್ವೀಕರಿಸಲು ವಿಶೇಷ ವರದಿಗಾರರು ಆಸಕ್ತಿಯನ್ನು ಹೊಂದಿರುತ್ತಾರೆ. ವಿಶೇಷ ವರದಿಗಾರರ ವೆಬ್‌ಸೈಟ್‌ನಲ್ಲಿ, ವಿಶೇಷ ವರದಿಗಾರರು ಅವನು / ಅವಳು ಒಂದು ಪ್ರಕರಣದ ಬಗ್ಗೆ ಕ್ರಮ ತೆಗೆದುಕೊಳ್ಳಲು ಬೇಕಾಗುವ ಮಾಹಿತಿಯ ವಿಧಗಳು ಮತ್ತು ಈ ಮಾಹಿತಿಯನ್ನು ಹೇಗೆ ಸಲ್ಲಿಸಬಹುದು ಎಂಬ ಮಾರ್ಗಸೂಚಿಗಳನ್ನು ನೀವು ಕಾಣಬಹುದು.

**20** ಎ/ಹೆಚ್‌ಆರ್‌ಸಿ/23/39 https://bit.ly/3abGGsH
**21** ಎ/ಹೆಚ್‌ಆರ್‌ಸಿ/ಆರ್‌ಇಎಸ್/34/18 https://bit.ly/2QB75lk



## ಪ್ರತೀಕಾರ ಮತ್ತು ಬೆದರಿಕೆ

ಮಾನವ ಹಕ್ಕುಗಳ ಕ್ಷೇತ್ರದಲ್ಲಿ ವಿಶ್ವಸಂಸ್ಥೆಯ ಜೊತೆ ಸಹಕರಿಸಿದ, ಸಹಕರಿಸುವವರ ಅಥವಾ ಸಹಕರಿಸಿದವರ ವಿರುದ್ಧ ಬೆದರಿಕೆ ಮತ್ತು ಪ್ರತೀಕಾರದ ಕ್ರಮಗಳನ್ನು ಪರಿಹರಿಸುವುದು ವಿಶೇಷ ಕಾರ್ಯವಿಧಾನಗಳಿಗೆ ಆದ್ಯತೆಯಾಗಿದೆ. ಈ ಸ್ವೀಕರಿಸಲು ಸಾಧ್ಯವಾಗದ ಅಭ್ಯಾಸದ ಬಗ್ಗೆ ಅವರು ಪ್ರತ್ಯೇಕವಾಗಿ ಮತ್ತು ವ್ಯವಸ್ಥಿತವಾಗಿ ತಮ್ಮ ಕಳವಳವನ್ನು ನಿರಂತರವಾಗಿ ಎತ್ತಿದ್ದಾರೆ. ವಿಶೇಷ ಕಾರ್ಯವಿಧಾನಗಳು ಅವರೊಂದಿಗಿನ ಸಹಕಾರಕ್ಕೆ ಸಂಬಂಧಿಸಿದಂತೆ ಬೆದರಿಕೆ ಮತ್ತು ಪ್ರತೀಕಾರದ ಆರೋಪಗಳನ್ನು ಪರಿಹರಿಸುವುದಲ್ಲದೆ, ಜೊತೆಗೆ ವ್ಯಾಪಕವಾದ ವಿಶ್ವಸಂಸ್ಥೆಯ ವ್ಯವಸ್ಥೆಯೊಂದಿಗೆ, ಅದರ ಪ್ರತಿನಿಧಿಗಳು ಮತ್ತು ಮಾನವ ಹಕ್ಕುಗಳ ಕ್ಷೇತ್ರದ ಕಾರ್ಯವಿಧಾನಗಳೊಂದಿಗೆ ಪರಿಹರಿಸುತ್ತದೆ. ಇದರ ಬಗ್ಗೆ ಬೆಳೆಯುತ್ತಿರುವ ಗಮನ ಮತ್ತು ಆದೇಶವನ್ನು ಹೊಂದಿರುವವರು ಗಮನಿಸಿದ ಬೆದರಿಕೆ ಮತ್ತು ಪ್ರತೀಕಾರ ಹೆಚ್ಚುತ್ತಿರುವ ನಿದರ್ಶನಗಳ ಪರಿಣಾಮವಾಗಿ, 2015 ರ ಜೂನ್‌ನಲ್ಲಿ ನಡೆದ ವಿಶೇಷ ಕಾರ್ಯವಿಧಾನಗಳ 22 ನೇ ವಾರ್ಷಿಕ ಸಭೆಯಲ್ಲಿ, ಈ ಸ್ವೀಕರಿಸಲು ಸಾಧ್ಯವಾಗದ ಅಭ್ಯಾಸಗಳಿಗೆ ಪ್ರತಿಕ್ರಿಯೆಯಾಗಿ ಸುಸಂಬದ್ಧ ಚೌಕಟ್ಟನ್ನು ಸ್ಥಾಪಿಸುವ ಮೂಲಕ ವಿಶೇಷ ಕಾರ್ಯವಿಧಾನಗಳ ಪ್ರತಿಕ್ರಿಯೆಯನ್ನು ಕ್ರೋಢೀಕರಿಸಲು ಮತ್ತು ಹೆಚ್ಚಿಸಲು ಒಪ್ಪಿಕೊಂಡರು. ಪ್ರತೀಕಾರವು ಮಾನವ ಹಕ್ಕುಗಳ ರಕ್ಷಕರು ಮತ್ತು ನಾಗರಿಕ ಸಮಾಜಕ್ಕೆ ಮಾತ್ರವಲ್ಲದೆ ವಿಶೇಷ ಕಾರ್ಯವಿಧಾನಗಳೊಂದಿಗೆ ಸಹಕರಿಸುವ ಯಾವುದೇ ವ್ಯಕ್ತಿಯ ಮೇಲೆ ಪರಿಣಾಮ ಬೀರಬಹುದು ಎಂಬುದನ್ನು ಇಲ್ಲಿ ಗಮನಿಸಬೇಕು. ಇದರಲ್ಲಿ ಅವರ ದೇಶದ ಭೇಟಿ ಮತ್ತು / ಅಥವಾ ವಿಶೇಷ ಕಾರ್ಯವಿಧಾನಗಳಿಗೆ ಮಾಹಿತಿಯನ್ನು ಸಲ್ಲಿಸಿದವರು, ಹಾಗೆಯೇ ಕಾನೂನು ಅಥವಾ ಇತರ ಸಹಾಯವನ್ನು ಒದಗಿಸಿದವರು, ಮಾನವ ಹಕ್ಕುಗಳ ಉಲ್ಲಂಘನೆಯ ಬಲಿಪಶುಗಳ ಸಂಬಂಧಿಕರು ಮತ್ತು ರಾಷ್ಟ್ರೀಯ ಮಾನವನ ಸಿಬ್ಬಂದಿಗಳು ಸೇರಿದಂತೆ ಜನಾದೇಶ ಹೊಂದಿರುವವರನ್ನು ಭೇಟಿ ಮಾಡಿದ ವ್ಯಕ್ತಿಗಳು ಅಥವಾ ಗುಂಪುಗಳನ್ನು ಒಳಗೊಂಡಿದೆ. ಹಕ್ಕುಗಳ ಸಂಸ್ಥೆಗಳು ಅಥವಾ ರಾಷ್ಟ್ರೀಯ ತಡೆಗಟ್ಟುವ ಕಾರ್ಯವಿಧಾನಗಳು. ಇದರಲ್ಲಿ ಆದೇಶ ಹೊಂದಿರುವವರನ್ನು ಭೇಟಿ ಮಾಡಿದ ವ್ಯಕ್ತಿಗಳು ಅಥವಾ ಗುಂಪುಗಳನ್ನು ಒಳಗೊಂಡಂತೆ ಅವರ ದೇಶದ ಭೇಟಿಗಳು ಮತ್ತು/ ಅಥವಾ ವಿಶೇಷ ಕಾರ್ಯವಿಧಾನಗಳಿಗೆ ಮಾಹಿತಿಯನ್ನು ಸಲ್ಲಿಸಿದವರು, ಹಾಗೆಯೇ ಕಾನೂನು ಅಥವಾ ಇತರ ಸಹಾಯವನ್ನು ನೀಡಿದವರು, ಮಾನವ ಹಕ್ಕುಗಳ ಉಲ್ಲಂಘನೆಗೆ ಬಲಿಯಾದವರ ಸಂಬಂಧಿಕರು ಮತ್ತು ರಾಷ್ಟ್ರೀಯ ಮಾನವ ಹಕ್ಕುಗಳ ಸಂಸ್ಥೆಗಳ  ಅಥವಾ ರಾಷ್ಟ್ರೀಯ ತಡೆಗಟ್ಟುವ ಕಾರ್ಯವಿಧಾನಗಳ ಸಿಬ್ಬಂದಿಗಳು ಇದರಲ್ಲಿ ಸೇರಿರುತ್ತಾರೆ.

ಬೆದರಿಕೆ ಮತ್ತು ಪ್ರತೀಕಾರದ ಕ್ರಿಯೆಗಳ ವ್ಯಾಖ್ಯಾನಕ್ಕಾಗಿ ಮತ್ತು ಕಾರ್ಯಗಳಿಗಾಗಿ ಇರುವ ವಿಶ್ವಸಂಸ್ಥೆಯ ಚೌಕಟ್ಟಿನ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಈ ಲಿಂಕನ್ನು ಅನುಸರಿಸಿ: https://bit.ly/3acsDmB

ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ, ಆಂಟೋನಿಯೊ ಗುಟೆರೆಸ್ ಅವರ ಒಂಬತ್ತನೇ ವಾರ್ಷಿಕ ವರದಿಯು https://bit.ly/39dxhPK ದೇಶದಿಂದ–ದೇಶಗಳ ಆಧಾರದ ಮೇಲೆ ಮಾನವ ಹಕ್ಕುಗಳ ರಕ್ಷಕರ ವಿರುದ್ಧ ಪ್ರತೀಕಾರದ ಮಟ್ಟವನ್ನು ವಿವರಿಸುತ್ತದೆ,  ಇದರಲ್ಲಿ ಕೊಲೆಯ ಆರೋಪ, ಚಿತ್ರಹಿಂಸೆ, ಅನಿಯಂತ್ರಿತ ಬಂಧನಗಳು ಮತ್ತು ಸಾರ್ವಜನಿಕ ಕಳಂಕಿತ ಅಭಿಯಾನಗಳು ಸೇರಿದಂತೆ ಹಕ್ಕುಗಳ ದುರುಪಯೋಗವಾದ ಬಲಿಪಶುಗಳನ್ನು ಸಹ ಗುರಿಯಾಗಿಸುತ್ತದೆ ಎಂದು ಹೇಳಿದೆ. ಈ ವರದಿಯು 38 ದೇಶಗಳಲ್ಲಿ ಪ್ರತೀಕಾರ ಮತ್ತು ಬೆದರಿಕೆ ಆರೋಪಗಳನ್ನು ದಾಖಲಿಸಿದ್ದು, ಅವುಗಳಲ್ಲಿ ಕೆಲವು ದೇಶಗಳು ಮಾನವ ಹಕ್ಕುಗಳ ಪರಿಷತ್ತಿನ ಸದಸ್ಯರಾಗಿದ್ದಾರೆ.[22]

"ಮಾನವ ಹಕ್ಕುಗಳಿಗಾಗಿ ನಿಂತಿರುವ ಧೈರ್ಯಶಾಲಿ ಜನರಿಗೆ ವಿಶ್ವವು ಋಣಿಯಾಗಿದೆ, ಅವರು ವಿಶ್ವಸಂಸ್ಥೆಗೆ ಮಾಹಿತಿ ನೀಡುವ ಮತ್ತು ತೊಡಗಿಸಿಕೊಳ್ಳುವ ವಿನಂತಿಗಳಿಗೆ ಸ್ಪಂದಿಸಿ, ಭಾಗವಹಿಸುವ ಹಕ್ಕನ್ನು ಗೌರವಿಸಲಾಗುತ್ತದೆ ಎಂದು ಖಚಿತಪಡಿಸಿಕೊಳ್ಳುತ್ತಿದ್ದಾರೆ. ವಿಶ್ವಸಂಸ್ಥೆಯೊಂದಿಗೆ ಸಹಕರಿಸಿದ್ದಕ್ಕಾಗಿ ವ್ಯಕ್ತಿಗಳನ್ನು ಶಿಕ್ಷಿಸುವುದು ನಾಚಿಕೆಗೇಡಿನ ಅಭ್ಯಾಸವಾಗಿದ್ದು, ಇದನ್ನು ನಿಲ್ಲಿಸುವ ಪ್ರಯತ್ನದಲ್ಲಿ ಪ್ರತಿಯೊಬ್ಬರೂ ಹೆಚ್ಚಿನದನ್ನು ಮಾಡಬೇಕು"

ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ, ಆಂಟೋನಿಯೊ ಗುಟೆರೆಸ್ ಅವರ ವಿಶ್ವಸಂಸ್ಥೆಯ ಸಾಮಾನ್ಯ ಸಭೆಗೆ ಸಲ್ಲಿಸಿದ ವರದಿ, ವಿಶ್ವಸಂಸ್ಥೆ, ಅದರ ಪ್ರತಿನಿಧಿಗಳು ಮತ್ತು ಮಾನವ ಹಕ್ಕುಗಳ ಕ್ಷೇತ್ರದಲ್ಲಿ ಕಾರ್ಯವಿಧಾನಗಳೊಂದಿಗೆ ಸಹಕಾರ[23]

**22** ವಿಶ್ವಸಂಸ್ಥೆಯ ವಾರ್ತೆ, ಮಾನವ ಹಕ್ಕುಗಳ ಪ್ರತಿಪಾದಕ ಮತ್ತು ಬಲಿಪಶುಗಳ ವಿರುದ್ಧ ಪ್ರತೀಕಾರದ ಆತಂಕಕಾರಿ ಮಟ್ಟ
– ವಿಶ್ವಸಂಸ್ಥೆಯ ಹೊಸ ವರದಿ, 2018
https://bit.ly/39dxhPK
**23** ಎ/ಹೆಚ್‌ಆರ್‌ಸಿ/39/41
https://bit.ly/2UzKaP8

## ಒಹೆಚ್‌ಸಿಹೆಚ್‌ಆರ್ ಕ್ಷೇತ್ರದ ಉಪಸ್ಥಿತಿ

ಹಲವು ವರ್ಷಗಳಿಂದ, ಒಹೆಚ್‌ಸಿಹೆಚ್‌ಆರ್ ದೇಶ ಮಟ್ಟದಲ್ಲಿ ಮಾನವ ಹಕ್ಕುಗಳನ್ನು ಉತ್ತೇಜಿಸುವ ಮತ್ತು ರಕ್ಷಿಸುವ ಉದ್ದೇಶದಿಂದ ಕ್ಷೇತ್ರದಲ್ಲಿ ತನ್ನ ಅಸ್ತಿತ್ವವನ್ನು ಹೆಚ್ಚಿಸಿದೆ; ರಾಷ್ಟ್ರೀಯ ಸಂಸ್ಥೆಗಳಿಗೆ ಮತ್ತು ನಾಗರಿಕ ಸಮಾಜವನ್ನು ಬಲಪಡಿಸಲು ಸಹಾಯ ಮಾಡಲು; ಮತ್ತು ಮಾನವ ಹಕ್ಕುಗಳನ್ನು ಮುಖ್ಯವಾಹಿನಿಗೆ ತರುಲು – ಅಂದರೆ, ಮಾನವ ಹಕ್ಕುಗಳ ದೃಷ್ಟಿಕೋನವನ್ನು ವಿಶ್ವಸಂಸ್ಥೆಯ ದೇಶಿಯ ತಂಡಗಳ (ಯುಎನ್‌ಸಿಟಿ) ಕೆಲಸಕ್ಕೆ ಸಂಯೋಜಿಸುವುದಾಗಿದೆ. 2018 ಕ್ಕೆ ಒಹೆಚ್‌ಸಿಹೆಚ್‌ಆರ್‌ನ ಕ್ಷೇತ್ರ ಉಪಸ್ಥಿತಿಯು 14 ದೇಶ / ಸ್ವತಂತ್ರ ಕಚೇರಿಗಳನ್ನು ಒಳಗೊಂಡಿದ್ದು; 12 ಪ್ರಾದೇಶಿಕ ಕಚೇರಿಗಳನ್ನು ಮತ್ತು ಕೇಂದ್ರಗಳನ್ನು; ಮತ್ತು ಯುಎನ್‌ಸಿಟಿಯನ್ನು ಬೆಂಬಲಿಸಲು 27 ತಜ್ಞ ಮಾನವ ಹಕ್ಕುಗಳ ಸಲಹೆಗಾರರನ್ನು ಒಹೆಚ್‌ಸಿಹೆಚ್‌ಆರ್ ಕ್ಷೇತ್ರದಲ್ಲಿ ನಿಯೋಜಿಸಿದೆ. ಒಹೆಚ್‌ಸಿಹೆಚ್‌ಆರ್ ಒಂದು ಕ್ಷಿಪ್ರ ಪ್ರತಿಕ್ರಿಯಾ ಘಟಕವನ್ನು ಸಹ ಹೊಂದಿದ್ದು, ಇದು ಮಾನವ ಹಕ್ಕುಗಳು ಮತ್ತು ಮಾನವೀಯ ತುರ್ತುಸ್ಥಿತಿಗಳಲ್ಲಿ ವೇಗವಾಗಿ ನಿಯೋಜಿಸಬಹುದಾದ ಮತ್ತು ಒಹೆಚ್‌ಸಿಹೆಚ್‌ಆರ್ ಕ್ಷೇತ್ರ ಕಚೇರಿಗಳಿಗೆ ಅವಶ್ಯಕವಿರುವ ಸಾಮರ್ಥ್ಯವನ್ನು ಒದಗಿಸುವ ಸಿಬ್ಬಂದಿಗಳ ಆಂತರಿಕ ಪಟ್ಟಿಯನ್ನು ನಿರ್ವಹಿಸುತ್ತದೆ.

**ಒಹೆಚ್‌ಸಿಹೆಚ್‌ಆರ್ ಮತ್ತು ವಿಶ್ವಸಂಸ್ಥೆಯ ದೇಶಿಯ ತಂಡಗಳು**

**ಒಹೆಚ್‌ಸಿಹೆಚ್‌ಆರ್‌ನ ಕ್ಷೇತ್ರ ಉಪಸ್ಥಿತಿಯ**
ಕುರಿತ ಹೆಚ್ಚಿನ ಮಾಹಿತಿಯನ್ನು ಈ ಕೆಳಗಿನ ಲಿಂಕನ್ನು ಅನುಸರಿಸುವ ಮೂಲಕ ಕಾಣಬಹುದು: ವಿಶ್ವದ ಒಹೆಚ್‌ಸಿಹೆಚ್‌ಆರ್: ಮಾನವ ಹಕ್ಕುಗಳನ್ನು ಭೂಮಿಯ ಮೇಲೆ ವಾಸ್ತವಿಕತೆಯನ್ನಾಗಿ ಮಾಡುವುದು
https://bit.ly/2WCGY82

**ವಿಶ್ವಸಂಸ್ಥೆಯು ತನ್ನ ದೇಶಿಯ ತಂಡಗಳನ್ನು (ಯುಎನ್‌ಸಿಟಿ ಗಳನ್ನು)** 131 ದೇಶಗಳಲ್ಲಿ ಹೊಂದಿದೆ, ವಿಶ್ವಸಂಸ್ಥೆಯ ಕಾರ್ಯಕ್ರಮಗಳು ಇರುವ ಎಲ್ಲಾ 165 ದೇಶಗಳನ್ನು ಒಳಗೊಂಡಿದೆ. ಯುಎನ್‌ಸಿಟಿಗಳು ಮತ್ತು ರಚನೆಯ ಬಗ್ಗೆ ಹೆಚ್ಚಿನ ಮಾಹಿತಿಗಾಗಿ:
https://unsdg.un.org/un-in-action/country-level

**ವಿಶ್ವಸಂಸ್ಥೆಯ ಕ್ಷೇತ್ರದ ಉಪಸ್ಥಿತಿಯ ಬಗ್ಗೆ ಮುಂಚೂಣಿಯಲ್ಲಿರುವ ರಕ್ಷಕರಿಗಾಗಿ ಸಂಪನ್ಮೂಲ**
ವಿಶ್ವಸಂಸ್ಥೆಯ ಕ್ಷೇತ್ರದ ಉಪಸ್ಥಿತಿಗಳು ಯಾವ ರಕ್ಷಣೆ ನೀಡಬಹುದು?
https://bit.ly/2WC7puu





## ಟಿಪ್ಪಣಿಗಳು (NOTES)

# ಮಾನವ ಹಕ್ಕುಗಳ ರಕ್ಷಕರಿಗೆ ಬೆಂಬಲ ನೀಡುವ ಬಗ್ಗೆ ಅಸ್ತಿತ್ವದಲ್ಲಿರುವ ಮಾರ್ಗಸೂಚಿಗಳು

ಈ ವಿಭಾಗದಲ್ಲಿ, ಯುರೋಪಿಯನ್ ಯೂನಿಯನ್ (ಇಯು), ಯುರೋಪಿನಲ್ಲಿ ಭದ್ರತೆ ಮತ್ತು ಸಹಕಾರಕ್ಕಾಗಿ ಇರುವ ಸಂಸ್ಥೆ (ಒಎಸ್‌ಸಿಇ), ನಾರ್ವೆ, ಸ್ವಿಟ್ಜರ್ಲೆಂಡ್ ಮತ್ತು ಫಿನ್‌ಲ್ಯಾಂಡ್ ಒದಗಿಸಿದ ಮಾನವ ಹಕ್ಕುಗಳ ರಕ್ಷಕರಿಗೆ ಬೆಂಬಲ ನೀಡುವ ಮಾರ್ಗಸೂಚಿಗಳ ಬಗ್ಗೆ ನಾವು ಗಮನ ಸೆಳೆಯಲು ಬಯಸುತ್ತೇವೆ. ಅಂತಹ ಮಾರ್ಗಸೂಚಿಗಳ ತಿಳುವಳಿಕೆ ಮತ್ತು ನಿಮ್ಮ ದೇಶದ ಮತ್ತು / ಅಥವಾ ಪ್ರದೇಶದ ಸಂಬಂಧಿತ ಪ್ರತಿನಿಧಿಗಳೊಂದಿಗಿನ ಸಂಪರ್ಕವು ಎಲ್ಲಾ ಮಾನವ ಹಕ್ಕುಗಳ ರಕ್ಷಕರಿಗೆ ಹೆಚ್ಚು ಅವಶ್ಯಕವಾಗಿದೆ ಮತ್ತು ನಿಮ್ಮ ದಿನನಿತ್ಯದ ಕೆಲಸದಲ್ಲಿ ಮತ್ತು ಭವಿಷ್ಯದ ಕಾರ್ಯತಂತ್ರಗಳಲ್ಲಿ ಸಹಾಯಕವಾಗಬಹುದು.

## ಮಾನವ ಹಕ್ಕುಗಳ ರಕ್ಷಕರಿಗೆ ಯೂರೋಪಿನ ಒಕ್ಕೂಟದ (EU) ಬೆಂಬಲ

ಮಾನವ ಹಕ್ಕುಗಳ ರಕ್ಷಕರಿಗೆ ಬೆಂಬಲ ನೀಡುವುದು ಯೂರೋಪಿನ ಒಕ್ಕೂಟದ ಬಾಹ್ಯ ಮಾನವ ಹಕ್ಕುಗಳ ನೀತಿಯ ಪ್ರಮುಖವಾದ ಆದ್ಯತೆಗಳಲ್ಲಿ ಒಂದಾಗಿದೆ. ಯೂರೋಪಿನ ಒಕ್ಕೂಟದ ಬೆಂಬಲವನ್ನು ಮಾನವ ಹಕ್ಕುಗಳ ರಕ್ಷಕರ ಕುರಿತ ವಿಶ್ವಸಂಸ್ಥೆಯ ಘೋಷಣೆಯ ಮೇಲೆ ನಿರ್ಮಿಸಲಾಗಿದೆ ಮತ್ತು ಇದು ಸಹಾಯ ಮತ್ತು ರಕ್ಷಣೆಯನ್ನು ಒದಗಿಸುವ ಗುರಿಯನ್ನು ಹೊಂದಿದೆ.

ಮಾನವ ಹಕ್ಕುಗಳ ರಕ್ಷಕರ ಕುರಿತಾದ ಯೂರೋಪಿನ ಒಕ್ಕೂಟದ ಮಾರ್ಗಸೂಚಿಗಳನ್ನು ಯೂರೋಪಿನ ಒಕ್ಕೂಟ ಅಭಿವೃದ್ಧಿಪಡಿಸಿದ್ದು https://bit.ly/2UH5mmn (ಇದು ಮೊದಲು 2004 ರಲ್ಲಿ ಪ್ರಕಟವಾಯಿತು ಮತ್ತು ಅದನ್ನು 2008 ರಲ್ಲಿ ನವೀಕರಿಸಲಾಗಿದೆ), ಇದು ಯೂರೋಪಿನ ಒಕ್ಕೂಟದ ಪಾತ್ರ ಮತ್ತು ಆಕಾಂಕ್ಷೆಗಳ ಅವಲೋಕನವನ್ನು ಒದಗಿಸುತ್ತದೆ ಮತ್ತು ತೃತೀಯ ದೇಶಗಳಲ್ಲಿನ ಯೂರೋಪಿನ ಒಕ್ಕೂಟದ ಕಾರ್ಯಾಚರಣೆಗಳಿಗಾಗಿ ಸ್ಥಳೀಯ ಕಾರ್ಯತಂತ್ರಗಳಿಗೆ ಅನುವಾದಿಸಲಾಗಿದೆ. ಈ ಮಾರ್ಗಸೂಚಿಗಳು 'ಆ ಸ್ಥಳಗಳ (ದೇಶಗಳ)' ಮಾನವ ಹಕ್ಕುಗಳ ಸಂರಕ್ಷಣೆಯ ಮೇಲೆ ದೃಢವಾದ ಪರಿಣಾಮವನ್ನು ಬೀರಬಹುದು. ತೃತೀಯ ರಾಷ್ಟ್ರಗಳಲ್ಲಿ ಯೂರೋಪಿನ ಒಕ್ಕೂಟದ ಉಪಸ್ಥಿತಿ ಇರುವ ಮೂಲಕ, ಮಾನವ ಹಕ್ಕುಗಳ ರಕ್ಷಕರು ಅಪಾಯದಲ್ಲಿದ್ದಾಗ ಮತ್ತು ಈ ವ್ಯಕ್ತಿಗಳಿಗೆ ಮತ್ತು ಸರ್ಕಾರೇತರ ಸಂಸ್ಥೆಗಳಿಗೆ ಬೆಂಬಲಿಸುವ ಮತ್ತು ಸಹಾಯ ಮಾಡುವ ಪ್ರಾಯೋಗಿಕ ವಿಧಾನಗಳನ್ನು ಪ್ರಸ್ತಾಪಿಸುತ್ತದೆ, ಹಾಗೂ ಯೂರೋಪಿನ ಒಕ್ಕೂಟವು ಮಧ್ಯಸ್ಥಿಕೆಯನ್ನು ವಹಿಸುತ್ತದೆ. ತಮ್ಮ ದೇಶಗಳಲ್ಲಿ ಮಾನವ ಹಕ್ಕುಗಳ ಉತ್ತೇಜನ ಮತ್ತು ಪ್ರಜಾಪ್ರಭುತ್ವೀಕರಣದಲ್ಲಿ ತೊಡಗಿರುವ ಮಾನವ ಹಕ್ಕುಗಳ ರಕ್ಷಕರು ಯೂರೋಪಿನ ಒಕ್ಕೂಟಕ್ಕೆ ನೈಸರ್ಗಿಕ ಮತ್ತು ಅನಿವಾರ್ಯ "ಮಿತ್ರರು" ಎಂದು ಮಾರ್ಗಸೂಚಿಗಳು ದೃಢಪಡಿಸಿವೆ.[24]

ರಕ್ಷಕರಿಗೆ ಯೂರೋಪಿನ ಒಕ್ಕೂಟ ನೀಡಿದ ರಾಜಕೀಯ ಬೆಂಬಲವನ್ನು ಪ್ರಜಾಪ್ರಭುತ್ವ ಮತ್ತು ಮಾನವ ಹಕ್ಕುಗಳಿಗಾಗಿ ಯೂರೋಪಿನ ಸಾಧನದ (ಇಐಡಿಹೆಚ್‌ಆರ್) https://www.europarl.europa.eu/thinktank/en/document.html?reference=EPRS_BRI(2018)628251 ಮೂಲಕ ಮೀಸಲಾದ ಆರ್ಥಿಕ ನೆರವಿನ ಬೆಂಬಲವನ್ನು ನೀಡುತ್ತದೆ ಮತ್ತು ಮಾನವ ಹಕ್ಕುಗಳ ರಕ್ಷಕರಿಗೆ ಕೆಲಸ ಮಾಡಲು ಸ್ಪಷ್ಟವಾದ ವಿಧಾನಗಳನ್ನು ಒದಗಿಸಲು ಮತ್ತು ಅವರ ಸಾಮರ್ಥ್ಯಗಳನ್ನು ಬಲಪಡಿಸಲು ಮತ್ತು ಅವರಿಗೆ ರಕ್ಷಣೆ ನೀಡಲು ಯೂರೋಪಿನ ಒಕ್ಕೂಟಕ್ಕೆ ಅನುವು ಮಾಡಿ ಕೊಡುತ್ತದೆ. ಅಭಿವೃದ್ಧಿ ಸಹಕಾರ ಸ್ಥಾಪಿತವಿಲ್ಲದಿರುವಲ್ಲಿ ಇಐಡಿಹೆಚ್‌ಆರ್ ಸಾಧನವು ನೆರವು ನೀಡಬಹುದು ಮತ್ತು ತೃತೀಯ ರಾಷ್ಟ್ರಗಳ ಸರ್ಕಾರಗಳ ಒಪ್ಪಂದವಿಲ್ಲದೆ ಮಧ್ಯಪ್ರವೇಶಿಸಬಹುದು. ಸೂಕ್ಷ್ಮ ರಾಜಕೀಯ ಸಮಸ್ಯೆಗಳನ್ನು (ಉದಾಹರಣೆಗೆ, ಮರಣದಂಡನೆ, ಚಿತ್ರಹಿಂಸೆ, ನಿರ್ಬಂಧಿತ ಸಂದರ್ಭಗಳಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯ, ದುರ್ಬಲ ಗುಂಪುಗಳ ವಿರುದ್ಧದ ತಾರತಮ್ಯಗಳು) ಪರಿಹರಿಸುವ ಸಾಮರ್ಥ್ಯವನ್ನು ಇದು ಹೊಂದಿದೆ ಮತ್ತು ಅನುಷ್ಠಾನ ವಿಧಾನಗಳ ವಿಷಯದಲ್ಲಿ ಹೆಚ್ಚಿನ ಸಡಿಲತೆ ಇರುವುದರಿಂದ ಹೊರಹೊಮ್ಮಬಹುದಾದ ಮತ್ತು ಸಂಕೀರ್ಣ ಸವಾಲುಗಳಿಗೂ ಸ್ಪಂದಿಸಬಹುದು. ಇದು ಪ್ರಜಾಪ್ರಭುತ್ವವನ್ನು ರಕ್ಷಿಸುವ ನಾಗರಿಕ ಸಮಾಜದೊಳಗಿನ ಗುಂಪುಗಳನ್ನು ಅಥವಾ ವ್ಯಕ್ತಿಗಳನ್ನು, ಜೊತೆಗೆ ಮಾನವ ಹಕ್ಕುಗಳ ಸಂರಕ್ಷಣೆಗಾಗಿ ಅಂತರರಾಷ್ಟ್ರೀಯ ಕಾರ್ಯವಿಧಾನಗಳನ್ನು ಜಾರಿಗೆ ತರುವ ಅಂತರ್ ಸರ್ಕಾರಿ ಸಂಸ್ಥೆಗಳನ್ನೂ ಬೆಂಬಲಿಸಬಹುದು. ಇಐಡಿಹೆಚ್‌ಆರ್ ನಾಗರಿಕ ಸಮಾಜ ಸಂಸ್ಥೆಗಳೊಂದಿಗೆ, ಸಂಸ್ಥೆಗಳಿಗಾಗಿ ಮತ್ತು ಸಂಸ್ಥೆಗಳ ಮೂಲಕ ಕಾರ್ಯನಿರ್ವಹಿಸುತ್ತದೆ ಮತ್ತು ಮಾನವ ಹಕ್ಕುಗಳ ರಕ್ಷಕರಿಗೆ ಸಣ್ಣ ಅನುದಾನವನ್ನು ನೀಡುಬಹುದು.

ಇಐಡಿಎಚ್‌ಆರ್ ಅಡಿಯಲ್ಲಿ ಅಪಾಯದಲ್ಲಿರುವ ಮಾನವ ಹಕ್ಕುಗಳ ರಕ್ಷಕರಿಗೆ ನಿರ್ವಹಿಸಲ್ಪಡುವ ತುರ್ತು ನಿಧಿಯು ಮಾನವ ಹಕ್ಕುಗಳ ರಕ್ಷಕರಿಗೆ ಪ್ರತಿ ಅನುದಾನಕ್ಕೆ 10,000 ಯೂರೋಗಳವರೆಗೆ ತಾತ್ಕಾಲಿಕ ಅನುದಾನವನ್ನು ಒದಗಿಸಬಹುದು, ಅದು ವ್ಯಕ್ತಿಗಳು ಅಥವಾ ಸಂಸ್ಥೆಗಳಿಗೆ ನೀಡಬಹುದು ಮತ್ತು ತುರ್ತು ಬೆಂಬಲದ ಅಗತ್ಯವಿದ್ದಲ್ಲಿ ಅದನ್ನು ಪ್ರಧಾನ ಕಚೇರಿಯಿಂದ ಅಥವಾ ಯೂರೋಪಿನ ಒಕ್ಕೂಟದ ನಿಯೋಗಗಳಿಂದ ಒದಗಿಸಬಹುದು.

24 ಮಾನವ ಹಕ್ಕುಗಳ ರಕ್ಷಕರ ಕುರಿತಾದ ಯೂರೋಪಿನ ಒಕ್ಕೂಟದ ಮಾರ್ಗಸೂಚಿಗಳು https://bit.ly/2UH5mmn

25 ಇಐಡಿಹೆಚ್‌ಆರ್ ಎಂದರೇನು? https://www.europarl.europa.eu/thinktank/en/document.html?reference=EPRS_BRI(2018)628251



ಈ ತುರ್ತು ಬೆಂಬಲವು ಅಗತ್ಯವೆಂದು ಪರಿಗಣಿಸಲಾದ ಯಾವುದೇ ರೂಪವನ್ನು ತೆಗೆದುಕೊಳ್ಳಬಹುದು. ಉದಾಹರಣೆಗಳೆಂದರೆ: ವೈದ್ಯಕೀಯ ವೆಚ್ಚಗಳು ಅಥವಾ ರಕ್ಷಕರ ಕಾನೂನು ಪ್ರಾತಿನಿಧ್ಯಕ್ಕಾಗಿನ ಶುಲ್ಕಗಳು, ಕಚೇರಿಗಳಿಗೆ ಅಥವಾ ಮನೆಗಳಿಗೆ ಭದ್ರತಾ ಸಾಮಗ್ರಿಗಳನ್ನು ಖರೀದಿಸುವ, ಮಾನವ ಹಕ್ಕುಗಳ ರಕ್ಷಕರನ್ನು ಬೇರೆ ದೇಶಕ್ಕೆ ಸ್ಥಳಾಂತರಿಸಲು ಪಾವತಿಸಲು, ಅಥವಾ ಭೀಕರ ಆರ್ಥಿಕ ಪರಿಸ್ಥಿತಿಯನ್ನು ಎದುರಿಸುತ್ತಿರುವ ಮಾನವ ಹಕ್ಕುಗಳ ಸಂಘಟನೆಯ ಕಾರ್ಯಾಚರಣೆಯನ್ನು ಬೆಂಬಲಿಸುವ ವೆಚ್ಚಗಳನ್ನು ಒಳಗೊಂಡಿರುತ್ತದೆ.

ಮಾನವ ಹಕ್ಕುಗಳ ರಕ್ಷಕರಿಗೆ ಸಣ್ಣ ಅನುದಾನದ ಕಾರ್ಯವಿಧಾನ ಅಥವಾ ತುರ್ತು ಸೌಲಭ್ಯವನ್ನು ಬಳಸುವ ವಿನಂತಿಗಳನ್ನು ನಿಮ್ಮ ದೇಶದಲ್ಲಿನ ಯುರೋಪಿಯನ್ ಒಕ್ಕೂಟದ ನಿಯೋಗಕ್ಕೆ ಅಥವಾ ಇಐಡಿಹೆಚ್‌ಆರ್ ತಂಡಕ್ಕೆ ತಿಳಿಸಬೇಕು, ಸಹಾಯ ಬಯಸುವ ನಿರ್ದಿಷ್ಟ ಪ್ರಕರಣದ ಮಾಹಿತಿಯೊಂದಿಗೆ: ರಕ್ಷಕರ ಹೆಸರು, ಪ್ರಕರಣದ ಹಿನ್ನೆಲೆ(ಗಳು), ವಿನಂತಿಸಿದ ಅನುದಾನದ ಮೊತ್ತ ಮತ್ತು ಯಾವ ಉದ್ದೇಶಕ್ಕಾಗಿ ಸಹಾಯವನ್ನು ಬಯಸಲಾಗಿದೆ ಎಂಬ ಮಾಹಿತಿಗಳನ್ನು ಒಳಗೊಂಡಿರಬೇಕು. ಸ್ವೀಕರಿಸಿದ ಮಾಹಿತಿಯನ್ನು ಗೌಪ್ಯತೆಯೊಂದಿಗೆ ವ್ಯವಹರಿಸಲಾಗುವುದು.

ಹೆಚ್ಚುವರಿಯಾಗಿ, ಯುರೋಪಿಯನ್ ಒಕ್ಕೂಟದ ಹೊಸ ಧನಸಹಾಯ ಸಾಧನವಾದ 'ನೆರೆಹೊರೆ', ಅಭಿವೃದ್ಧಿ ಮತ್ತು ಅಂತರರಾಷ್ಟ್ರೀಯ ಸಹಕಾರ ಸಾಧನವನ್ನು (ನೆಬರ್‌ಹುಡ್, ಡೆವೆಲಪ್‌ಮೆಂಟ್ ಅಂಡ್ ಇಂಟರ್‌ನ್ಯಾಷನಲ್ ಕೋಓಪರೇಷನ್ ಇಕ್ವಿಪ್‌ಮೆಂಟ್ – ಎನ್‌ಡಿಐಸಿ) ಪರಿಚಯಿಸಿದೆ ಮತ್ತು 2021–2027ರ[26] ಅವಧಿಗೆ 86 ಬಿಲಿಯನ್ ಯುರೋಗಳನ್ನು ಮೀಸಲಿಟ್ಟಿದೆ. ಬಡತನವನ್ನು ನಿರ್ಮೂಲನೆ ಮಾಡಲು ಮತ್ತು ಸುಸ್ಥಿರ ಅಭಿವೃದ್ಧಿ, ಶಾಂತಿ, ಸಮೃದ್ಧಿ ಮತ್ತು ಸ್ಥಿರತೆಯ ಉತ್ತೇಜನಕ್ಕಾಗಿ[26] ಈ ಹಣಕಾಸು ಸಾಧನವನ್ನು ಬಳಸಲಾಗುತ್ತದೆ. ನಿಮ್ಮ ಕೆಲಸಕ್ಕೆ ಅವಶ್ಯಕವಾಗಿರಬಹುದು ಎಂದು ನಾವು ಈ ಹೊಸ ಸಾಧನವನ್ನು ನಿಮ್ಮ ಗಮನಕ್ಕೆ ತರಲು ಬಯಸಿದ್ದೇವೆ. ಎನ್‌ಡಿಐಸಿ ಬಗ್ಗೆ ಹೆಚ್ಚಿನ ಮಾಹಿತಿಯನ್ನು ನೀವು ಇಲ್ಲಿ ಕಾಣಬಹುದು: https://bit.ly/2Uszl1d

ನಿಮ್ಮ ದೇಶದಲ್ಲಿ ಯುರೋಪಿಯನ್ ಒಕ್ಕೂಟದ ನಿಯೋಗದೊಂದಿಗೆ ಮತ್ತು ಮಾನವ ಹಕ್ಕುಗಳ ರಕ್ಷಕರಿಗೆಂದು ಇರುವ ಅದರ ಮಾನವ ಹಕ್ಕುಗಳ ಕೇಂದ್ರಬಿಂದು ಮತ್ತು ಸಂಪರ್ಕ ಅಧಿಕಾರಿಯೊಂದಿಗೆ ಸಂಪರ್ಕವನ್ನು ಸ್ಥಾಪಿಸಲು ನಾವು ನಿಮ್ಮನ್ನು ಪ್ರೋತ್ಸಾಹಿಸುತ್ತೇವೆ, ಏಕೆಂದರೆ ನಿಮ್ಮ ಕೆಲಸಕ್ಕೆ ಸಂಬಂಧಿಸಿದಂತೆ ನೀವು ಮಾರ್ಗಸೂಚಿಗಳನ್ನು ಸಕ್ರಿಯವಾಗಿ ಬಳಸಬಹುದಾಗಿದೆ. ಕೇಂದ್ರ ಬಿಂದು ಮತ್ತು ಸಂಪರ್ಕ ಅಧಿಕಾರಿಗಳು ಯುರೋಪಿಯನ್ ಒಕ್ಕೂಟದ ನಿಯೋಗದಲ್ಲಿ ನೆಲೆಸಿರುತ್ತಾರೆ, ಅಲ್ಲದೇ ಆ ಅಧಿಕಾರಿಯು ಸದಸ್ಯ ರಾಷ್ಟ್ರ ರಾಯಭಾರ ಕಚೇರಿಗಳಲ್ಲಿ ಒಬ್ಬ ಸಿಬ್ಬಂದಿಯಾಗಿರಬಹುದು ಎಂಬುದನ್ನು ದಯವಿಟ್ಟು ಗಮನಿಸಿ, ಯುರೋಪಿಯನ್ ಒಕ್ಕೂಟದ ನಿಯೋಗಗಳ ವೆಬ್‌ಸೈಟ್‌ಗಳಲ್ಲಿ ಮಾನವ ಹಕ್ಕುಗಳ ಕೇಂದ್ರಬಿಂದುವನ್ನು ಕಂಡುಹಿಡಿಯಲು, ಮುಖಪುಟದ ಎಡ ಬದಿಯಲ್ಲಿರುವ 'ಪ್ರಮುಖ ಯುರೋಪಿಯನ್ ಒಕ್ಕೂಟದ ನೀತಿಗಳು' (ಕೀ ಇಯು ಪಾಲಿಸೀಸ್) ಅನುಸರಣೆ (ಕ್ಲಿಕ್) ಮಾಡುವ ಮೂಲಕ ಮತ್ತು ನಂತರ ಬಲಭಾಗದಲ್ಲಿ 'ನಿಯೋಗದ ಮಾನವ ಹಕ್ಕುಗಳ ಫೋಕಲ್ ಪಾಯಿಂಟ್' ಕಂಡುಕೊಳ್ಳಲು ಮಾನವ ಹಕ್ಕುಗಳ ರಕ್ಷಕರಿಗೆ ಸಾಧ್ಯವಾಗುತ್ತದೆ. ದುರದೃಷ್ಟವಶಾತ್, ಇನ್ನೂ ಹೆಸರನ್ನು ಸೂಚಿಸದೇ ಇರುವ ಅನೇಕ ಪ್ರಕರಣಗಳಿವೆ. ಆದ್ದರಿಂದ ಮಾನವ ಹಕ್ಕುಗಳ ರಕ್ಷಕರು ಯುರೋಪಿಯನ್ ಒಕ್ಕೂಟದ ನಿಯೋಗವನ್ನು ಕರೆದು ಕೇಳಬೇಕು.


ಸದಸ್ಯ ರಾಷ್ಟ್ರಗಳ ಸ್ಥಳೀಯ ರಾಯಭಾರ ಕಚೇರಿಗಳಿಗೆ ಸಂಬಂಧವನ್ನು ಸ್ಥಾಪಿಸುವುದರಿಂದ, ನಿಮ್ಮನ್ನು ಅಥವಾ ನಿಮ್ಮ ಸಂಸ್ಥೆಯನ್ನು ಪರಿಚಯಿಸುವುದರಿಂದ ಅಥವಾ ಸಂಪರ್ಕಿಸುವುದರಿಂದ ಬೆಂಬಲವನ್ನು ಪಡೆಯಲು ಉಪಯುಕ್ತವೆಂದು ಸಾಬೀತುಪಡಿಸಬಹುದು ಮತ್ತು ನಿಮಗೆ ಮತ್ತು ನಿಮ್ಮ ಕೆಲಸಕ್ಕೆ ರಕ್ಷಣೆಯ ಪದರವನ್ನು ಸೇರಿಸಿಕೊಳ್ಳಲು ಸಾಧ್ಯವಾಗಬಹುದು.


**ಯುರೋಪಿಯನ್ ಒಕ್ಕೂಟದ ಮಾರ್ಗಸೂಚಿಗಳು ಮತ್ತು ಇಐಡಿಹೆಚ್‌ಆರ್ ತುರ್ತು ಅನುದಾನಗಳು**

ಮಾನವ ಹಕ್ಕುಗಳ ರಕ್ಷಕರ ಕುರಿತು ಯುರೋಪಿಯನ್ ಒಕ್ಕೂಟದ ಮಾರ್ಗಸೂಚಿಗಳು https://eeas.europa.eu/topics/human-rights-democracy/414/human-rights-

ಇಐಡಿಹೆಚ್‌ಆರ್ ಮತ್ತು ಅದರ ತುರ್ತು ಅನುದಾನಗಳ ಬಗ್ಗೆ ಹೆಚ್ಚಿನ ಮಾಹಿತಿಗಾಗಿ: https://bit.ly/2J6amey







26 ಯೂರೋಪಿಯ ಸಂಸತ್ತಿನ ವಿಚಾರ ವೇದಿಕೆ, ಹೊಸ ನೆರೆಹೊರೆ, ಅಭಿವೃದ್ಧಿ ಮತ್ತು ಅಂತರರಾಷ್ಟ್ರೀಯ ಸಹಕಾರ ಸಾಧನ: ಹೊಸ ನಿರ್ಣಯದ ಪ್ರಸ್ತಾಪ, 2019 https://bit.ly/2Uszl1d

## ಮಾನವ ಹಕ್ಕುಗಳ ರಕ್ಷಕರಿಗೆ ಬೆಂಬಲ ನೀಡುವ ಯೂರೋಪಿನಲ್ಲಿ ಭದ್ರತೆ ಮತ್ತು ಸಹಕಾರಕ್ಕಾಗಿ ಇರುವ ಸಂಸ್ಥೆಯ (ಒಎಸ್‌ಸಿಇ) ಮಾರ್ಗಸೂಚಿಗಳು

ಯೂರೋಪಿನಲ್ಲಿ ಭದ್ರತೆ ಮತ್ತು ಸಹಕಾರಕ್ಕಾಗಿ ಇರುವ ಸಂಸ್ಥೆಯು (ಒಎಸ್‌ಸಿಇ) ಮಾನವ ಹಕ್ಕುಗಳ ರಕ್ಷಕರ ಬಗ್ಗೆ ಒಂದು ಮಾರ್ಗಸೂಚಿಗಳನ್ನು ಸಹ ಅಳವಡಿಸಿಕೊಂಡಿದೆ. ಈ ಮಾರ್ಗಸೂಚಿಗಳು ಮಾನವ ಹಕ್ಕುಗಳ ರಕ್ಷಕರಿಗೆ ಹೊಸ ಮಾನದಂಡಗಳನ್ನು ನಿಗದಿಪಡಿಸುವುದಿಲ್ಲ ಆದರೆ ಅವರ ಮಾನವ ಹಕ್ಕುಗಳ ಕೆಲಸದ ಪರಿಣಾಮವಾಗಿ ಅಪಾಯದಲ್ಲಿರುವವರ ಮಾನವ ಹಕ್ಕುಗಳ ರಕ್ಷಣೆಯತ್ತ ಗಮನ ಹರಿಸುತ್ತವೆ. ತಮ್ಮ ರಾಜತಾಂತ್ರಿಕ ಪ್ರಾತಿನಿಧ್ಯಗಳ ಮೂಲಕ ತಮ್ಮ ಪ್ರದೇಶಗಳಲ್ಲಿ ಮತ್ತು ತೃತೀಯ ದೇಶಗಳಲ್ಲಿ ಅವರು ಮಾನವ ಹಕ್ಕುಗಳ ರಕ್ಷಕರ ರಕ್ಷಣಾ ಕಾರ್ಯವಿಧಾನಗಳನ್ನು ಸ್ಥಾಪಿಸುವಂತೆ ಒಎಸ್‌ಸಿಇ ಯಲ್ಲಿ ಭಾಗವಹಿಸುವ ರಾಷ್ಟ್ರಗಳಿಗೆ ಕರೆ ನೀಡುತ್ತಾರೆ.

**ಒಎಸ್‌ಸಿಇ) ಮಾರ್ಗಸೂಚಿಗಳು**
https://bit.ly/3dkoEWZ

### ಮಾನವ ಹಕ್ಕುಗಳ ರಕ್ಷಕರಿಗೆ ಬೆಂಬಲ ನೀಡುವ ನಾರ್ವೆಯ ಮಾರ್ಗಸೂಚಿಗಳು

ನಾರ್ವೆ ದೇಶದ ವಿದೇಶಾಂಗ ವ್ಯವಹಾರಗಳ ಸಚಿವಾಲಯವು (ಎಂಎಫ್‌ಎ) ಮಾನವ ಹಕ್ಕುಗಳ ರಕ್ಷಕರಿಗೆ ಬೆಂಬಲ ನೀಡುಲು ತನ್ನ ವಿದೇಶಿ ಸೇವೆಯ ಮಾರ್ಗಸೂಚಿಯನ್ನು ಅಭಿವೃದ್ಧಿಪಡಿಸಿದೆ. ಈ ಮಾರ್ಗಸೂಚಿಯ ಮುಖ್ಯ ಉದ್ದೇಶವೆಂದರೆ ಎಂಎಫ್‌ಎ ಮತ್ತು ನಾರ್ವೇ ದೇಶದ ನಿಯೋಗಕ್ಕೆ ಮಾನವ ಹಕ್ಕುಗಳ ರಕ್ಷಕರಿಗಾಗಿ ಮತ್ತು ಅವರ ಕೆಲಸವನ್ನು ಬೆಂಬಲಿಸುವ ಪ್ರಯತ್ನಗಳ ಕ್ರಮಗಳನ್ನು ವ್ಯವಸ್ಥಿತಗೊಳಿಸಲು ಮತ್ತು ತೀವ್ರಗೊಳಿಸಲು ಸಹಾಯ ಮಾಡುವುದಾಗಿದೆ. ಮಾನವ ಹಕ್ಕುಗಳ ರಕ್ಷಕರ ಕುರಿತ ವಿಶ್ವಸಂಸ್ಥೆಯ ಘೋಷಣೆಯು ಮಾನವ ಹಕ್ಕುಗಳ ರಕ್ಷಕರಿಗೆ ನಾರ್ವೆ ನೀಡುವ ಬೆಂಬಲಕ್ಕೆ ಪ್ರಮಾಣಿತ ಆಧಾರವಾಗಿದೆ. ಈ ಕೆಲಸದಲ್ಲಿ ರಾಜತಾಂತ್ರಿಕ ನಿಯೋಗಗಳು ಮತ್ತು ಎಂಎಫ್‌ಎಗಳ ಪಾತ್ರವನ್ನು ಮಾರ್ಗಸೂಚಿಯು ವಿವರಿಸುತ್ತದೆ. ಇದು ಈ ಕೆಳಗಿನ ರೀತಿಯಲ್ಲಿ ನಿಯೋಗಕ್ಕೆ ಸಲಹೆ ನೀಡುತ್ತದೆ:

- ಮಾನವ ಹಕ್ಕುಗಳ ರಕ್ಷಕರು ಯಾವ ಪರಿಸ್ಥಿತಿಗಳಲ್ಲಿ ಕೆಲಸ ಮಾಡುತ್ತಾರೆ ಎಂಬುದನ್ನು ಕಂಡುಹಿಡಿಯುವುದು
- ತೆಗೆದುಕೊಳ್ಳಬೇಕಾದ ಕ್ರಮಗಳು, ಉದಾಹರಣೆಗೆ ಮಾನವ ಹಕ್ಕುಗಳ ರಕ್ಷಕರೊಂದಿಗೆ ಸಂಪರ್ಕ ಮತ್ತು ಮಾಹಿತಿ ವಿನಿಮಯ, ಅಧಿಕಾರಿಗಳೊಂದಿಗೆ ಸಂಪರ್ಕ; ನ್ಯಾಯಾಲಯದ ಪ್ರಕರಣಗಳ ವೀಕ್ಷಣೆ; ಮಾಧ್ಯಮದ ಬಳಕೆ, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಪಾತ್ರಧಾರರ ಸಹಕಾರ; ಆರ್ಥಿಕ ಬೆಂಬಲ; ಮತ್ತು ರಕ್ಷಣೆಯ ತೀವ್ರ ಅಗತ್ಯ
- ಯಾವುದೇ ಕೈಗೊಳ್ಳಬೇಕಾದ ಕ್ರಮವನ್ನು ನಿರ್ಧರಿಸುವ ಮೊದಲು ಅಪಾಯದ ಮೌಲ್ಯಮಾಪನ
- ನಿರ್ದಿಷ್ಟ ಅಪಾಯದಲ್ಲಿರುವ ಮಾನವ ಹಕ್ಕುಗಳ ರಕ್ಷಕರು
- ಸಂಪನ್ಮೂಲಗಳು ಮತ್ತು ಸಾಮರ್ಥ್ಯದ–ನಿರ್ಮಾಣ
- ದಿನಚರಿಯನ್ನು ವರದಿ ಮಾಡುವುದು

ಈ ಮಾರ್ಗಸೂಚಿಯು ಪ್ರಚಾರ ಮತ್ತು ಅನುದಾನಗಳ ಮತ್ತು ರಾಜಕೀಯ ಮಟ್ಟದ ಸಭೆಗಳಲ್ಲಿ, ರಾಜಕೀಯ ಭೇಟಿಗಳ ಸಮಯದಲ್ಲಿ ಮತ್ತು ಬಹುಪಕ್ಷೀಯ ವೇದಿಕೆಗಳಲ್ಲಿ ಮಾನವ ಹಕ್ಕುಗಳ ಸಮಸ್ಯೆಗಳನ್ನು ಉದ್ದೇಸಿರುವ ಬಗ್ಗೆ ಎಂಎಫ್‌ಎಗೆ ಸಲಹೆಗಳನ್ನು ನೀಡುತ್ತದೆ.

**ನಾರ್ವೇಯ ಮಾನವ ಹಕ್ಕುಗಳ ನೀತಿ**
ನಾರ್ವೇ ದೇಶದ ವಿದೇಶಾಂಗ ವ್ಯವಹಾರಗಳ ಸಚಿವಾಲಯ

ಮಾನವ ಹಕ್ಕುಗಳ ರಕ್ಷಕರಿಗೆ (ಇಂಗ್ಲೀಷ್ ಮತ್ತು ಸ್ಪ್ಯಾನಿಷ್ ಆವೃತ್ತಿಯಲ್ಲಿ) ಬೆಂಬಲ ಸೇರಿದಂತೆ ಮಾನವ ಹಕ್ಕುಗಳ ನೀತಿಯ ಕುರಿತಂತೆ ನಾರ್ವೇಯ ಮಾರ್ಗಸೂಚಿಗಳು
https://bit.ly/3adxuno

ಮಾನವ ಹಕ್ಕುಗಳ ರಕ್ಷಕರ ಬಗ್ಗೆ ನಾರ್ವೇ ದೇಶದ ನೇತೃತ್ವದ ನಿರ್ಣಯದ ವಾರ್ತೆ (2019)
ಮಾನವ ಹಕ್ಕುಗಳ ರಕ್ಷಕರ ರಕ್ಷಣೆಯನ್ನು ಬಲಪಡಿಸುವ ಬಗ್ಗೆ ವಿಶ್ವಸಂಸ್ಥೆಯ ಒಮ್ಮತ
ಮಾನವ ಹಕ್ಕುಗಳ ರಕ್ಷಕರ ರಕ್ಷಣೆಯನ್ನು ಬಲಪಡಿಸುವ ಬಗ್ಗೆ ವಿಶ್ವಸಂಸ್ಥೆಯ ಒಮ್ಮತ https://bit.ly/2JdrsqV

ನಾರ್ವೇ ದೇಶದ ನೇತೃತ್ವದ ನಿರ್ಣಯವನ್ನು ನವೆಂಬರ್ 2019ರಲ್ಲಿ ಅಂಗೀಕರಿಸಲಾಯಿತು
[A/C.3/74/L.31/Rev.1] https://bit.ly/2UzLgue

## ಮಾನವ ಹಕ್ಕುಗಳ ರಕ್ಷಕರಿಗೆ ಬೆಂಬಲ ನೀಡುವ ಸ್ವಿಟ್ಜರ್ಲೆಂಡ್‌ನ ಮಾರ್ಗಸೂಚಿಗಳು

ಸ್ವಿಟ್ಜರ್ಲೆಂಡ್‌ನ ಸಂಯುಕ್ತ ವಿದೇಶಾಂಗ ವ್ಯವಹಾರಗಳ ಇಲಾಖೆ (ಫೆಡರಲ್ ಡಿಪಾರ್ಟ್ಮೆಂಟ್ ಆಫ್ ಫಾರಿನ್ ಅಫೇರ್ಸ್ (ಎಫ್‌ಡಿಎಫ್‌ಎ)) ಮಾನವ ಹಕ್ಕುಗಳ ರಕ್ಷಕರ ರಕ್ಷಣೆಯ ಕುರಿತು ಡಿಸೆಂಬರ್ 2013 ರಲ್ಲಿ ತನ್ನ ಮಾರ್ಗಸೂಚಿಗಳನ್ನು ಸ್ಥಾಪಿಸಿತು. ಮಾನವ ಹಕ್ಕುಗಳ ರಕ್ಷಕರಿಗೆ ಹೆಚ್ಚು ಪರಿಣಾಮಕಾರಿಯಾದ ಬೆಂಬಲವನ್ನು ಮತ್ತು ರಾಷ್ಟ್ರದ ಪ್ರಾಧಿಕಾರಗಳ ಅನಿಯಂತ್ರಿತವಾಗಿ ನಡೆಸಿಕೊಳ್ಳುವ ವಿರುದ್ಧ ಉತ್ತಮ ರಕ್ಷಣೆಯನ್ನು ನೀಡುವ ಗುರಿಯನ್ನು ಸ್ವಿಟ್ಜರ್ಲೆಂಡ್ ಹೊಂದಿದೆ.

**ಸ್ವಿಟ್ಜರ್ಲೆಂಡ್‌ನ ಮಾರ್ಗಸೂಚಿಗಳು**
ಸ್ವಿಟ್ಜರ್ಲೆಂಡ್‌ನ ಸಂಯುಕ್ತ ವಿದೇಶಾಂಗ ವ್ಯವಹಾರಗಳ ಇಲಾಖೆ (ಸ್ವಸ್ ಫೆಡರಲ್ ಡಿಪಾರ್ಟ್ಮೆಂಟ್ ಆಫ್ ಫಾರಿನ್ ಅಫೇರ್ಸ್)

Protecting human rights defenders
https://bit.ly/33Geonn

### ಮಾನವ ಹಕ್ಕುಗಳ ರಕ್ಷಕರಿಗೆ ಬೆಂಬಲ ನೀಡುವ ಫಿನ್‌ಲ್ಯಾಂಡಿನ ಮಾರ್ಗಸೂಚಿಗಳು

ಫಿನ್ನಿಷ್ ವಿದೇಶಾಂಗ ನೀತಿಯ ಉದ್ದೇಶವು ಕಾನೂನು, ಪ್ರಜಾಪ್ರಭುತ್ವ ಮತ್ತು ಮಾನವ ಹಕ್ಕುಗಳ ಪ್ರಚಾರವನ್ನು ಮಾಡುವುದಾಗಿದೆ. ಮಾನವ ಹಕ್ಕುಗಳ ರಕ್ಷಕರನ್ನು ಬೆಂಬಲಿಸುವುದು ಮತ್ತು ರಕ್ಷಿಸುವುದು ಈ ಉದ್ದೇಶದ ಒಂದು ಪ್ರಮುಖ ಭಾಗವಾಗಿದೆ. ಮಾನವ ಹಕ್ಕುಗಳ ರಕ್ಷಕರನ್ನು ರಕ್ಷಿಸುವುದು ಮತ್ತು ಬೆಂಬಲಿಸುವುದು ಎಂಬ ಶೀರ್ಷಿಕೆಯ ಫಿನ್ನಿಷ್ ಮಾರ್ಗಸೂಚಿಗಳು ಮಾನವ ಹಕ್ಕುಗಳ ರಕ್ಷಕರ ಕುರಿತ ಯುರೋಪಿಯನ್ ಯೂನಿಯನ್ನಿನ ಮಾರ್ಗಸೂಚಿಗಳ ಅನುಷ್ಠಾನಕ್ಕೆ ಸಂಬಂಧಿಸಿದ ಫಿನ್ಲೆಂಡ್‌ನ ವಿದೇಶಾಂಗ ಸಚಿವಾಲಯದ ಸಾರ್ವಜನಿಕ ಮಾರ್ಗಸೂಚಿಗಳಾಗಿವೆ. ಮಾನವ ಹಕ್ಕುಗಳ ರಕ್ಷಕರನ್ನು ಬೆಂಬಲಿಸುವಲ್ಲಿ ಸಚಿವಾಲಯದ ಕೆಲಸವನ್ನು ಇನ್ನಷ್ಟು ಬಲಪಡಿಸಲು ಫಿನ್ನಿಷ್ ಮಾರ್ಗಸೂಚಿಗಳನ್ನು ಅಭಿವೃದ್ಧಿಪಡಿಸಲಾಗಿದೆ.

**ಫಿನ್‌ಲ್ಯಾಂಡಿನ ಮಾರ್ಗಸೂಚಿಗಳು**
ಫಿನ್‌ಲ್ಯಾಂಡ್ ದೇಶದ ವಿದೇಶಾಂಗ ವ್ಯವಹಾರಗಳ ಸಚಿವಾಲಯ

ಮಾನವ ಹಕ್ಕುಗಳ ರಕ್ಷಕರನ್ನು ರಕ್ಷಿಸುವುದು ಮತ್ತು ಬೆಂಬಲಿಸುವುದು
https://bit.ly/2vLmM8S

ಮಾನವ ಹಕ್ಕುಗಳ ರಕ್ಷಕರನ್ನು ರಕ್ಷಿಸುವುದು ಮತ್ತು ಬೆಂಬಲಿಸುವುದು: ಮಾನವ ಹಕ್ಕುಗಳ ರಕ್ಷಕರ ಕುರಿತ ಯುರೋಪಿಯನ್ ಯೂನಿಯನ್ನಿನ ಮಾರ್ಗಸೂಚಿಗಳ ಅನುಷ್ಠಾನಕ್ಕೆ ಸಂಬಂಧಿಸಿದ ಫಿನ್ಲೆಂಡ್‌ನ ವಿದೇಶಾಂಗ ಸಚಿವಾಲಯದ ಸಾರ್ವಜನಿಕ ಮಾರ್ಗಸೂಚಿಗಳು
https://bit.ly/3afwoHK

### ಮಾನವ ಹಕ್ಕುಗಳ ರಕ್ಷಕರಿಗೆ ಬೆಂಬಲ ನೀಡುವ ಕೆನಡಾದ ಮಾರ್ಗಸೂಚಿಗಳು

ಕೆನಡಾದ ಮಾನವ ಹಕ್ಕುಗಳ ರಕ್ಷಕರನ್ನು ಬೆಂಬಲಿಸುವ ಮಾರ್ಗಸೂಚಿಗಳು ಮಾನವ ಹಕ್ಕುಗಳ ರಕ್ಷಕರ ಪ್ರಮುಖ ಕಾರ್ಯವನ್ನು ಬೆಂಬಲಿಸುವ ಬಗ್ಗೆ ಕೆಸಡಾದ ಬದ್ಧತೆಯ ಸ್ಪಷ್ಟ ಹೇಳಿಕೆಯಾಗಿದೆ. ಈ ಮಾರ್ಗಸೂಚಿಗಳು ರೂಪರೇಖೆಗಳು ವಿದೇಶಗಳಲ್ಲಿನ ಮತ್ತು ಪ್ರಧಾನ ಕಚೇರಿಯರುವ ಅಧಿಕಾರಿಗಳಿಗೆ ಮಾನವ ಹಕ್ಕುಗಳ ರಕ್ಷಕರನ್ನು ಗೌರವಿಸಲು ಮತ್ತು ಬೆಂಬಲಿಸಲು ವಿಧಾನವನ್ನು ಮತ್ತು ಪ್ರಾಯೋಗಿಕ ಸಲಹೆಯನ್ನು ನೀಡುತ್ತದೆ. ಮಾರ್ಗಸೂಚಿಗಳನ್ನು ಕಾರ್ಯಗತಗೊಳಿಸಲು ತಮ್ಮ ಕೈಲಾದಷ್ಟು ಪ್ರಯತ್ನಗಳನ್ನು ಮಾಡಲು ಕೆನಡಾ ತನ್ನ ನಿಯೋಗಗಳಿಗೆ ಸಲಹೆ ನೀಡುತ್ತದೆ, ಜೊತೆಗೆ ಪ್ರತಿಯೊಂದು ವಿಧಾನವು ಸ್ಥಳೀಯ ಹಿನಲೆಗಳಿಗೆ ಮತ್ತು ಸಂದರ್ಭಗಳಿಗೆ ಅನುಗುಣವಾಗಿರಬೇಕು ಮತ್ತು ವೈಯಕ್ತಿಕ ಮಾನವ ಹಕ್ಕುಗಳ ರಕ್ಷಕರ ನಿರ್ದಿಷ್ಟ ಅಗತ್ಯಗಳಿಗೆ ಸ್ಪಂದಿಸಬೇಕು ಎಂದು ಗುರುತಿಸುತ್ತದೆ. ಕೆನಡಾದ ಸ್ತ್ರೀಸಮಾನತಾವಾದಿ ವಿದೇಶಾಂಗ ನೀತಿಯನ್ನು ಪ್ರತಿಬಿಂಬಿಸಲು 2016 ಮಾರ್ಗಸೂಚಿಯ ಆವೃತ್ತಿಯನ್ನು ನವೀಕರಿಸಲಾಗಿದೆ, ಮತ್ತು ಇದರಲ್ಲಿ ಮಾನವ ಹಕ್ಕುಗಳ ರಕ್ಷಕರು–ಮತ್ತು ಬಹುಮುಖ್ಯವಾಗಿ ಮಹಿಳೆಯರು ಮತ್ತು ಎಲ್‌ಜಿಬಿಟಿಐ ಮಾನವ ಹಕ್ಕುಗಳ ರಕ್ಷಕರು–ಅಂತರ್ವಿಭಾಗೀ ಗುರುತುಗಳನ್ನು ಹೊಂದಿದ್ದಾರೆ (ಉದಾಹರಣೆಗೆ ಜನಾಂಗ, ವಯಸ್ಸು, ವಿಕಲಚೇತನತೆ, ಜನಾಂಗೀಯತೆ, ಧರ್ಮ, ಲೈಂಗಿಕತೆ ದೃಷ್ಟಿಕೋನ ಮತ್ತು ಲಿಂಗ ಗುರುತಿಸುವಿಕೆ), ಮತ್ತು ಹಲವಾರು ಮತ್ತು ಏಕರೂಪ ರೀತಿಯ ತಾರತಮ್ಯ, ಕಿರುಕುಳ ಮತ್ತು ಅಂಚಿಗೆತಳ್ಳಲ್ಪಡುವುದನ್ನು ಅನುಭವಿಸುತ್ತಿದ್ದಾರೆ. ಮಾನವ ಹಕ್ಕುಗಳ ರಕ್ಷಕರ ಜೀವನದ ವಿವಿಧ ಅನ್ನುಭವಗಳನ್ನು, ವಿವಿಧ ಸಂದರ್ಭಗಳನ್ನು, ತಾರತಮ್ಯವನ್ನು ಎದುರಿಸುತ್ತಿರುವ ಒಂದು ಅಥವಾ ಹೆಚ್ಚಿನ ನಿರ್ದಿಷ್ಟವಾಗಿ ಗುರುತಿಸಬಹುದಾದ ಗುಂಪುಗಳಿಗೆ ಸೇರಿರುವ, ಅವುಗಳೆಂದರೆ: ಮಹಿಳಾ ಮಾನವ ಹಕ್ಕುಗಳ ರಕ್ಷಕರು, ಎಲ್‌ಜಿಬಿಟಿಐ ಮಾನವ ಹಕ್ಕುಗಳ ರಕ್ಷಕರು, ಸ್ಥಳೀಯ ಮಾನವ ಹಕ್ಕುಗಳ ರಕ್ಷಕರು, ಭೂಮಿ ಮತ್ತು ಪರಿಸರ ಹಕ್ಕುಗಳ ರಕ್ಷಕರು, ವಿಕಲಚೇತನ ಹಕ್ಕುಗಳ ರಕ್ಷಕರು, ಯುವ ಮಾನವ ಹಕ್ಕುಗಳ ರಕ್ಷಕರು, ಧರ್ಮದ ಸ್ವಾತಂತ್ರ್ಯ ಅಥವಾ ನಂಬಿಕೆಯ ಮಾನವ ಹಕ್ಕುಗಳ ರಕ್ಷಕರು, ಪತ್ರಕರ್ತರು ಮತ್ತು ಆನ್‌ಲೈನ್ ಮತ್ತು ಡಿಜಿಟಲ್ ಸಂದರ್ಭಗಳಲ್ಲಿ ಮಾನವ ಹಕ್ಕುಗಳ ರಕ್ಷಕರನ್ನು ಗುರುತಿಸಲು ನಿರ್ದಿಷ್ಟವಾದ ಮಾರ್ಗಸೂಚಿಗಳನ್ನು ಅಭಿವೃದ್ಧಿಪಡಿಸಲಾಗಿದೆ.


ಮಾನವ ಹಕ್ಕುಗಳಿಗಾಗಿ ಕೆಲಸ ಮಾಡುವ ವಿಶ್ವದಾದ್ಯಂತ ಜನರಿಗೆ ಪರಿಣಾಮಕಾರಿ ಬೆಂಬಲವನ್ನು ನೀಡುವುದು, ಮಾನವ ಹಕ್ಕುಗಳ ರಕ್ಷಕರಿಗೆ ಹೆಚ್ಚು ಪರಿಣಾಮಕಾರಿ ವಕಾಲತ್ತುಗಾರರಾಗಲು ಸಹಾಯ ಮಾಡುವ ಮೂಲಕ, ಸುರಕ್ಷಿತ ಮತ್ತು ಪೂರಕ ವಾತಾವರಣದಲ್ಲಿ ತಮ್ಮ ಕೆಲಸವನ್ನು ನಿರ್ವಹಿಸಲು ಸಮರ್ಥರಾಗಿದ್ದಾರೆ ಎಂಬುವುದನ್ನು ಖಚಿತಪಡಿಸಿಕೊಳ್ಳುವುದು ಮತ್ತು ಅವರನ್ನು ಹಾನಿಯಿಂದ ರಕ್ಷಿಸುವುದು ಕೆನಡಾದ ಅಂತಿಮ ಗುರಿಯಾಗಿದೆ.[27]

**ಕೆನಡಾದ ಮಾರ್ಗಸೂಚಿಗಳು**
ಕೆನಡಾ ಸರ್ಕಾರ

ಧ್ವನಿಗಳು ಅಪಾಯದಲ್ಲಿದೆ: ಮಾನವ ಹಕ್ಕುಗಳ ರಕ್ಷಕರಿಗೆ ಬೆಂಬಲ ನೀಡುವ ಕೆನಡಾದ ಮಾರ್ಗಸೂಚಿಗಳು
https://bit.ly/2y1t0Ci

---

27 ಕೆನಡಾ ಸರ್ಕಾರ, ಧ್ವನಿಗಳು ಅಪಾಯದಲ್ಲಿದೆ: ಮಾನವ ಹಕ್ಕುಗಳ ರಕ್ಷಕರಿಗೆ ಬೆಂಬಲ ನೀಡುವ ಕೆನಡಾದ ಮಾರ್ಗಸೂಚಿಗಳು, 2016 https://bit.ly/2y1t0Ci



# ಟಿಪ್ಪಣಿಗಳು (NOTES)





# ಟಿಪ್ಪಣಿಗಳು (NOTES)

# ವಿಶೇಷ ಸಂಸ್ಥೆಗಳು




ಮಾನವ ಹಕ್ಕುಗಳ ಪ್ರತಿಪಾದಕರಿಗೆ ಜೊತೆಯಾಗಿರುವುದು ಒಂದು ಸುರಕ್ಷತಾ ಕ್ರಮವಾಗಿದ್ದು ಅದು ಅತೀಯಾಗಿ ಗೋಚರಿಸುವ ಪಾತ್ರಗಳಲ್ಲಿ ಮತ್ತು ಸ್ಥಳಗಳಲ್ಲಿ ಮಾನವ ಹಕ್ಕುಗಳ ಪ್ರತಿಪಾದಕರಿಗೆ ಅಪಾಯವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ (ಚಿತ್ರ ಸಲ್ಲಿಕೆ: ಸ್ವೀಫೋರ್)

ಮಾನವ ಹಕ್ಕುಗಳ ರಕ್ಷಕರಿಗೆ ಅನೇಕ ರೀತಿಯ ಬೆಂಬಲವನ್ನು ನೀಡುವ ಹಲವಾರು ಅಂತರರಾಷ್ಟ್ರೀಯ ಸಂಸ್ಥೆಗಳು ಇವೆ. ಅವರ ಆದೇಶಕ್ಕೆ ಅನುಗುಣವಾಗಿ, ಈ ಸಂಸ್ಥೆಗಳು ತುರ್ತು ಅನುದಾನದಿಂದ ಹಿಡಿದು ಭದ್ರತಾ ತರಬೇತಿ, ರಕ್ಷಣೆ ಮತ್ತು ತುರ್ತು ಮಧ್ಯಸ್ಥಿಕೆಗಳವರೆಗೆ ಸಹಾಯವನ್ನು ನೀಡಬಹುದು. ಹಲವಾರು ಸಂಸ್ಥೆಗಳು ಮಾಹಿತಿಯ ಅತ್ಯುತ್ತಮ ಮೂಲಗಳಾಗಿದೆ ಮತ್ತು ವಿಶ್ವದ ವಿವಿಧ ಭಾಗಗಳಲ್ಲಿನ ಮಾನವ ಹಕ್ಕುಗಳ ಸಂದರ್ಭಗಳ ಕುರಿತು ಪ್ರಮುಖ ದಾಖಲೆಗಳನ್ನು ಮತ್ತು ವರದಿಗಳನ್ನು ತಯಾರಿಸುತ್ತವೆ. ಇವುಗಳಲ್ಲಿ ಕೆಲವು ಸಂಸ್ಥೆಗಳು ಪರಿಸ್ಥಿತಿ ನಿರ್ಣಾಯಕವಾಗಿರುವಲ್ಲಿ ಸರ್ಕಾರಗಳನ್ನು ಹೊಣೆಗಾರರನ್ನಾಗಿ ಮಾಡುವ ಅಭಿಯಾನ ಮತ್ತು ವಕಾಲತ್ತು ಪ್ರಯತ್ನಗಳಲ್ಲಿ ತೊಡಗಿಕೊಂಡಿವೆ ಮತ್ತು ಕೆಲವು ಸಂಸ್ಥೆಗಳು ನಿರ್ದಿಷ್ಟ ದೇಶಗಳಲ್ಲಿ ಅಸ್ತಿತ್ವವನ್ನು ಹೊಂದಿವೆ. ಕೆಳಗೆ ನೀವು ಆಯ್ಕೆ ಮಾಡಬಹುದಾದ ಕೆಲವು ಸಂಸ್ಥೆಗಳನ್ನು ಮತ್ತು ಅವುಗಳ ಆದೇಶಗಳ ಸಂಕ್ಷಿಪ್ತ ವಿವರಣೆಯನ್ನು ಕಾಣಬಹುದು. ಅವರ ವೆಬ್‌ಸೈಟ್ ಮುಖಪುಟಗಳಿಗೆ ಭೇಟಿ ನೀಡಲು ಮತ್ತು ಅವರು ಒದಗಿಸುವ ಮಾಹಿತಿ ಮತ್ತು ಅವರು ನೀಡುವ ವಿವಿಧ ಬೆಂಬಲಗಳ ಬಗ್ಗೆ ನವೀಕೃತ ಮಾಹಿತಿಯನ್ನು ನೀವು ಹೊಂದುವಂತೆ ನಾವು ನಿಮ್ಮನ್ನು ಪ್ರೋತ್ಸಾಹಿಸುತ್ತೇವೆ. ಕೆಳಗಿನ ಪಟ್ಟಿಯು ಪೂರ್ಣವಾಗಿಲ್ಲ ಎಂಬುದನ್ನು ದಯವಿಟ್ಟು ಗಮನಿಸಿ.

### ಅಗೀರ್ ಎನ್ಸ್‌ಂಬಲ್ ಪೋರ್ ಲೆಸ್ ಡ್ರಾಯಿಟ್ಸ್ ಡೆ ಎಲ್ ಹೋಮೆ

ಅತೀರ್ ಎನ್ಸೆಂಬಲ್ ಪೋರ್ ಲೆಸ್ ಡ್ರಾಯಿಟ್ಸ್ ಡೆ ಎಲ್ ಹೋಮೆ (ಎಇಡಿಎಚ್) ಒಂದು ಅಂತರರಾಷ್ಟ್ರೀಯ ಒಗ್ಗಟ್ಟಿನ ಸಂಘಟನೆಯಾಗಿದ್ದು, ಇದು ದಕ್ಷಿಣ ಮತ್ತು ಪೂರ್ವದ ಸ್ಥಳೀಯ ಸಂಘಟನೆಗಳ ಸಹಭಾಗಿತ್ವದ ಮೂಲಕ ಮಾನವ ಹಕ್ಕುಗಳನ್ನು ರಕ್ಷಿಸಲು ಬದ್ಧವಾಗಿದೆ. ಎಇಡಿಎಚ್ ಕ್ಷೇತ್ರ ಮಟ್ಟದ ಚಟುವಟಿಕೆಗಳನ್ನು ಬೆಂಬಲಿಸುತ್ತದೆ, ಸ್ಥಳೀಯ ಪಾತ್ರಧಾರಿಗಳ ಸಾಮರ್ಥ್ಯವನ್ನು ಬಲಪಡಿಸುತ್ತದೆ ಮತ್ತು ಅಪಾಯದಲ್ಲಿರುವ ಮಾನವ ಹಕ್ಕುಗಳ ರಕ್ಷಕರಿಗೆ ಸಹಾಯ ಮಾಡುತ್ತದೆ. ಕ್ಷೇತ್ರ ಮಟ್ಟದ ಸಂಸ್ಥೆಗಳನ್ನು ಬೆಂಬಲಿಸುವುದರ ಜೊತೆಗೆ, ಅಪಾಯದಲ್ಲಿರುವ ಮಾನವ ಹಕ್ಕುಗಳ ರಕ್ಷಕರಿಗೆ ಎಇಡಿಎಚ್ ತುರ್ತು ಅನುದಾನವನ್ನು ಒದಗಿಸಬಲ್ಲದು ಜೊತೆಗೆ ವಕಾಲತ್ತು ಮತ್ತು ಲಾಬಿಯನ್ನು ಒಳಗೊಂಡಂತೆ "ತುರ್ತು ಕ್ರಮಗಳಲ್ಲಿ", ಕಾನೂನು ಕ್ರಮಗಳಲ್ಲಿ ಮತ್ತು ಒಗ್ಗಟ್ಟಿನ ಜಾಲಬಂಧಗಳ (ನೆಟ್‌ವರ್ಕ್‌ಗಳಲ್ಲಿ) ಭಾಗವಹಿಸುವಿಯಲ್ಲಿ ತೊಡಗಿಸಿಕೊಳ್ಳುತ್ತದೆ.

ಅಗೀರ್ ಎನ್ಸೆಂಬಲ್ ಪೋರ್ ಲೆಸ್ ಡ್ರಾಯಿಟ್ಸ್ ಡೆ ಎಲ್ ಹೋಮೆ – ವೆಬ್‌ಸೈಟ್ https://bit.ly/2xjO7PG

### ಅಮ್ನೆಸ್ಟಿ ಇಂಟರ್ನಾಷನಲ್

ಅಮ್ನೆಸ್ಟಿ ಇಂಟರ್ನ್ಯಾಷನಲ್ (ಎಐ) ಸ್ವತಂತ್ರವಾದ ಜಾಗತಿಕ ಚಳುವಳಿಯಾಗಿದ್ದು, ಇದು ಸರ್ಕಾರಗಳಿಂದ, ಜೊತೆಗೆ ಸರ್ಕಾರೇತರ ಸಂಸ್ಥೆಗಳು, ಕಂಪನಿಗಳು ಮತ್ತು ಇತರ ರಾಷ್ಟ್ರೇತರ ಪಾತ್ರಧಾರರಿಂದ ಆಗುವ ಮಾನವ ಹಕ್ಕುಗಳ ಉಲ್ಲಂಘನೆಯನ್ನು ಬಹಿರಂಗಪಡಿಸಲು ಮತ್ತು ನಿಲ್ಲಿಸಲು ಪ್ರಯತ್ನಿಸುತ್ತದೆ. ಎಐನ ಮುಖ್ಯ ಗಮನವು ಮಾನವ ಹಕ್ಕುಗಳ ಉಲ್ಲಂಘನೆಯನ್ನು ತಡೆಯುವುದು ಮತ್ತು ವ್ಯಕ್ತಿಗಳನ್ನು ರಕ್ಷಿಸಲು ಪ್ರಚಾರ ಮಾಡುವುದರ ಮೇಲೆ ಕೇಂದ್ರೀಕರಿಸಿದೆ, ಜೊತೆಗೆ ಸಂಸ್ಥೆಯು ಅಂತರ್ ಸರ್ಕಾರಿ ಸಂಸ್ಥೆಗಳ ಮತ್ತು ಮಾನವ ಹಕ್ಕುಗಳ ಸಂಸ್ಥೆಗಳ ಕಡೆಗೆ ವಕಾಲತ್ತು ವಹಿಸುತ್ತದೆ. ಎಐ ಮಾನವ ಹಕ್ಕುಗಳ ರಕ್ಷಕರಿಗೆ ರಕ್ಷಣೆ ನೀಡುವ ಕೆಲವು ಕಾರ್ಯಕ್ರಮಗಳನ್ನು ಹೊಂದಿದೆ, ಆದರೆ ಅದು ಒಂದು ಸೀಮಿತ ವ್ಯಾಪ್ತಿಯಲ್ಲಿ ಮಾತ್ರ ಹೊಂದಿದೆ. ಎಐನ ಸಾಹಸಿ (ಬ್ರೇವ್) ಅಭಿಯಾನವು ನಮ್ಮೆಲ್ಲರ ಪರವಾಗಿ ಮಾತನಾಡುವವರ ಬಗ್ಗೆ ಮಾತನಾಡಲು ಜನರನ್ನು ಪ್ರೋತ್ಸಾಹಿಸುತ್ತದೆ.

### ಅಮ್ನೆಸ್ಟಿ ಇಂಟರ್ನಾಷನಲ್ – ಸಾಹಸಿಗಳಿಗಾಗಿ ಎದ್ದು ನಿಲ್ಲಿ

ಎಐ ಪರಿಹಾರ ಕಾರ್ಯಕ್ರಮವನ್ನು ಸಹ ಹೊಂದಿದೆ, ಇದು ಮಾನವ ಹಕ್ಕುಗಳ ರಕ್ಷಕರಿಗೆ ಮತ್ತು ತುರ್ತು ಸಂದರ್ಭಗಳಲ್ಲಿ ಮಾನವ ಹಕ್ಕುಗಳ ಉಲ್ಲಂಘನೆಯ ಬಲಿಪಶುಗಳಿಗೆ ಕಾನೂನು ನೆರವು, ತುರ್ತು ವಿಮಾನ ಪ್ರಯಾಣ, ಜೀವನ ವೆಚ್ಚಗಳು ಮತ್ತು ವಿಚಾರಣೆಯ ವೀಕ್ಷಣೆಗೆ ಅಥವಾ ಭದ್ರತಾ ಸಾಧನಗಳಿಗೆ ಹಣ ಸಹಾಯವನ್ನು ಒದಗಿಸುತ್ತದೆ.[28]

ಅಮ್ನೆಸ್ಟಿ ಇಂಟರ್ನಾಷನಲ್ – ಸಾಹಸಿಗಳಿಗಾಗಿ ಎದ್ದು ನಿಲ್ಲಿ – ವೆಬ್‌ಸೈಟ್ https://bit.ly/2xdSps6

### ಮಾನವ ಹಕ್ಕುಗಳಿಗೆ ಮತ್ತು ಅಭಿವೃದ್ಧಿಗಾಗಿ ಏಷ್ಯಾ ವೇದಿಕೆ

ಮಾನವ ಹಕ್ಕುಗಳಿಗೆ ಮತ್ತು ಅಭಿವೃದ್ಧಿಗಾಗಿ ಏಷ್ಯಾ ವೇದಿಕೆ (ಫೋರಮ್–ಏಷ್ಯಾ) ಏಷ್ಯಾದಲ್ಲಿ ಮಾನವ ಹಕ್ಕುಗಳು ಮತ್ತು ಮಾನವ ಅಭಿವೃದ್ಧಿ ಕ್ಷೇತ್ರದಲ್ಲಿ ಕೆಲಸ ಮಾಡುವ ಸ್ವತಂತ್ರ, ಲಾಭರಹಿತ, ಪಕ್ಷೇತರ, ಅಹಿಂಸಾತ್ಮಕ ಮತ್ತು ಸರ್ಕಾರೇತರ ನಾಗರಿಕ ಸಮಾಜ ಸಂಸ್ಥೆಗಳಿಗೆ ಸದಸ್ಯತ್ವವು ಮುಕ್ತವಾಗಿದೆ. ಫೋರಮ್–ಏಷ್ಯಾ ನ ಮಾನವ ಹಕ್ಕುಗಳ ರಕ್ಷಕರ ಕಾರ್ಯಕ್ರಮವು ಏಷ್ಯಾದಲ್ಲಿ ಮಾನವ ಹಕ್ಕುಗಳ ರಕ್ಷಕರು ಮತ್ತು ಮಹಿಳಾ ಮಾನವ ಹಕ್ಕುಗಳ ರಕ್ಷಕರ ರಕ್ಷಣೆಯನ್ನು ಬಲಪಡಿಸುವ ಗುರಿಯನ್ನು ಹೊಂದಿದೆ. ಕಾರ್ಯಕ್ರಮದ ಉದ್ದೇಶಗಳು ಈ ಕೆಳಗಿನವುಗಳನ್ನು ಒಳಗೊಂಡಿವೆ: ಏಷ್ಯಾದಲ್ಲಿನ ರಕ್ಷಕರಿಗೆ ವಿನಿಮಯ ಮತ್ತು ವಿಚಾರಗಳ ಪ್ರಾದೇಶಿಕ ವೇದಿಕೆಯನ್ನು ಒದಗಿಸುವುದು; ಮಾನವ ಹಕ್ಕುಗಳ ರಕ್ಷಕರ ಕುರಿತ ವಿಶ್ವಸಂಸ್ಥೆಯ ಘೋಷಣೆಯಡಿಯಲ್ಲಿ ರಕ್ಷಕರ ಪಾತ್ರ ಮತ್ತು ಹಕ್ಕುಗಳನ್ನು ಉತ್ತೇಜಿಸುವುದು; ತಮ್ಮ ದೇಶಗಳಲ್ಲಿ ರಾಷ್ಟ್ರೀಯ ಮಾನವ ಹಕ್ಕುಗಳ ಸಂಸ್ಥೆಗಳನ್ನು ಸ್ಥಾಪಿಸುವ ಅಥವಾ ಅಭಿವೃದ್ಧಿಪಡಿಸುವ ಸಂಯೋಜನೆಯಲ್ಲಿ ತೊಡಗಿಸಿಕೊಳ್ಳುವುದು; ಮತ್ತು ಅಪಾಯದಲ್ಲಿರುವ ರಕ್ಷಕರಿಗೆ ತುರ್ತು ಸಹಾಯ ಮತ್ತು ರಕ್ಷಣೆಯನ್ನು ನೀಡುವುದಾಗಿದೆ. ಈ ಕಾರ್ಯಕ್ರಮದಲ್ಲಿ ಮಾನವ ಹಕ್ಕುಗಳ ರಕ್ಷಕರ ರಕ್ಷಣಾ ಯೋಜನೆಯನ್ನು ಒಳಗೊಂಡಿದ್ದು, ಇದರ ಅಡಿಯಲ್ಲಿ ರಕ್ಷಕರು ತಾತ್ಕಾಲಿಕ ಸ್ಥಳಾಂತರ ಬೆಂಬಲ, ಇತರ ರೀತಿಯ ತುರ್ತು ಸಹಾಯ ಮತ್ತು ವಿಚಾರಣೆಯ ವೀಕ್ಷಣೆಗಾಗಿ ಅರ್ಜಿಯನ್ನು ಸಲ್ಲಿಸಬಹುದು. ಫೋರಮ್–ಏಷ್ಯಾ ದ್ವೈವಾರ್ಷಿಕ (ಎರಡು ವರ್ಷಗಳಿಗೊಮ್ಮೆ) ಏಷ್ಯಾದ ಪ್ರಾದೇಶಿಕ ಮಾನವ ಹಕ್ಕುಗಳ ರಕ್ಷಕರ ವೇದಿಕೆಯನ್ನು (ಎಆರ್‌ಹೆಚ್‌ಆರ್‌ಡಿಎಫ್) ಕರೆಯುತ್ತದೆ

ಫೋರಮ್–ಏಷ್ಯಾ – ವೆಬ್‌ಸೈಟ್ https://bit.ly/2QAv0YI
ಫೋರಮ್–ಏಷ್ಯಾ – ಮಾನವ ಹಕ್ಕುಗಳ ರಕ್ಷಕರ ಕಾರ್ಯಕ್ರಮ – ವೆಬ್‌ಸೈಟ್ https://bit.ly/39ajXvM
ಫೋರಮ್–ಏಷ್ಯಾ – ಮಾನವ ಹಕ್ಕುಗಳ ರಕ್ಷಕರ ರಕ್ಷಣಾ ಯೋಜನೆ – ವೆಬ್‌ಸೈಟ್ https://bit.ly/3afwP4Q

28 ಮಾನವ ಹಕ್ಕುಗಳ ಪರ ವಕಾಲತು, ಮಾನವ ಹಕ್ಕುಗಳ ರಕ್ಷಕರಿಗೆ ಸಂಪನ್ಮೂಲಗಳು, 2014 https://bit.ly/2UeA873

### ಅಸ್ಸೋಸಿಯೇಷನ್ ಫಾರ್ ವಿಮೆನ್ಸ್ ರೈಟ್ಸ್ ಇನ್ ಡೆವೆಲಪ್‌ಮೆಂಟ್

ಅಸ್ಸೋಸಿಯೇಷನ್ ಫಾರ್ ವಿಮೆನ್ಸ್ ರೈಟ್ಸ್ ಇನ್ ಡೆವೆಲಪ್‌ಮೆಂಟ್ (ಅಭಿವೃದ್ಧಿಯಲ್ಲಿ ಮಹಿಳೆಯರ ಹಕ್ಕುಗಳು) ಸಂಘಟನೆಯು (ಎಡಬ್ಲ್ಯುಐಡಿ) ಜಾಗತಿಕ, ಸ್ತ್ರೀವಾದಿ ಸದಸ್ಯತ್ವ ಸಂಘಟನೆಯಾಗಿದ್ದು, ಈ ಸಂಘಟನೆಯು ವಿಶ್ವದಾದ್ಯಂತ ಲಿಂಗ ನ್ಯಾಯ ಮತ್ತು ಮಹಿಳೆಯರ ಮಾನವ ಹಕ್ಕುಗಳ ಸಾಕ್ಷಾತ್ಕಾರಕ್ಕಾಗಿ ಕೆಲಸ ಮಾಡುತ್ತದೆ. ಎಡಬ್ಲ್ಯುಐಡಿ ಮಹಿಳೆಯರ ಹಕ್ಕುಗಳ ಸಂಸ್ಥೆಗಳು ತಮ್ಮ ಹೋರಾಟದಲ್ಲಿ ಹೆಚ್ಚು ಪರಿಣಾಮಕಾರಿಯಾಗಲು ಬೆಂಬಲ ಮತ್ತು ಸಂಪನ್ಮೂಲದ ಸಹಾಯವನ್ನು ಮಾಡುತ್ತದೆ ಜೊತೆಗೆ ಮಹಿಳೆಯರ ಹಕ್ಕುಗಳ ವಕಾಲತ್ತಿನ, ಸಂಸ್ಥೆಗಳ ಮತ್ತು ಚಳುವಳಿಗಳ ಧ್ವನಿ ಮತ್ತು ಪ್ರಭಾವವನ್ನು ಬಲಪಡಿಸುತ್ತದೆ. ಎಡಬ್ಲ್ಯುಐಡಿ ಮಹಿಳಾ ಮಾನವ ಹಕ್ಕುಗಳ ರಕ್ಷಕರು, ಚಳುವಳಿ ನಿರ್ಮಾಣ, ಸ್ತ್ರೀವಾದಿ ಮೇಲ್ವಿಚಾರಣೆ ಮತ್ತು ಧನಸಹಾಯದಂತಹ ವಿಷಯಗಳಿಗೆ ಸಂಬಂಧಿತ ಪ್ರಕಟಣೆಗಳನ್ನು ಸಹ ತಯಾರಿಸುತ್ತದೆ. ಎಡಬ್ಲ್ಯುಐಡಿ ಸಿಬ್ಬಂದಿಗಳು 15 ದೇಶಗಳಲ್ಲಿ ಕೆಲಸ ಮಾಡುತ್ತಿದ್ದಾರೆ, ಮತ್ತು ಅವರ ಕೆಲಸವು ಕೆಲವು ಆದ್ಯತೆಯ ಕ್ಷೇತ್ರಗಳ ಮೇಲೆ ಕೇಂದ್ರೀಕರಿಸುತ್ತದೆ: ಆರ್ಥಿಕ ನ್ಯಾಯ, ಮಹಿಳೆಯರ ಹಕ್ಕುಗಳಿಗೆ ಸಂಪನ್ಮೂಲ ಒದಗಿಸುವುದು, ಧಾರ್ಮಿಕ ಮೂಲಭೂತವಾದಗಳನ್ನು ಪ್ರಶ್ನಿಸುವುದು, ಮಹಿಳಾ ಮಾನವ ಹಕ್ಕುಗಳ ರಕ್ಷಕರು ಮತ್ತು ಯುವ ಸ್ತ್ರೀವಾದಿ ಹೋರಾಟಗಳನ್ನು ಬೆಂಬಲಿಸುವುದಾಗಿದೆ.

ಎಡಬ್ಲ್ಯುಐಡಿ – ವೆಬ್‌ಸೈಟ್ https://bit.ly/2y40cct

### ಫ್ರೀಡಂ ಹೌಸ್

ಫ್ರೀಡಂ ಹೌಸ್‌ನ ತುರ್ತು ಸಹಾಯ ಕಾರ್ಯಕ್ರಮವು https://bit.ly/2Ut6F83 ಬೆದರಿಕೆಗೆ ಒಳಪಟ್ಟ ನಾಗರಿಕ ಸಮಾಜ ಸಂಸ್ಥೆಗಳಿಗೆ, ವೈಯಕ್ತಿಕ ಮಾನವ ಹಕ್ಕುಗಳ ರಕ್ಷಕರಿಗೆ ಮತ್ತು ಧಾರ್ಮಿಕ ಕಿರುಕುಳದಿಂದ ಬದುಕುಳಿದವರಿಗೆ ವೈದ್ಯಕೀಯ ವೆಚ್ಚಗಳು, ಕಾನೂನು ಪ್ರಾತಿನಿಧ್ಯ, ಜೈಲು ಭೇಟಿಗಳು, ವಿಚಾರಣೆಯ ಮೇಲ್ವಿಚಾರಣೆ, ಮಾನವೀಯ ನೆರವು, ತಾತ್ಕಾಲಿಕ ಸ್ಥಳಾಂತರಕ್ಕಾಗಿ, ಭದ್ರತೆ, ಸಲಕರಣೆಗಳನ್ನು ಬದಲಿಸಲು, ಅವಲಂಬಿತ ಬೆಂಬಲ ಮತ್ತು ಇತರ ರೀತಿಯ ತುರ್ತು ವೆಚ್ಚಗಳಿಗಾಗಿ ಅಲ್ಪಾವಧಿಯ ತುರ್ತು ಅನುದಾನವನ್ನು ಬೆಂಬಲಿಸುತ್ತದೆ.[29] ಸಹಾಯ ಪಡೆಯಲು ಅರ್ಹತೆಯು, ಕಳೆದ 3 ತಿಂಗಳುಗಳಲ್ಲಿ ಬೆದರಿಕೆಗಳು ಸಂಭವಿಸಿರಬೇಕು ಮತ್ತು ಅರ್ಜಿದಾರರ ಮಾನವ ಹಕ್ಕುಗಳ ಕೆಲಸವನ್ನು ಆಧರಿಸಿರಬೇಕು (ಅಥವಾ ಧರ್ಮ / ನಂಬಿಕೆಯ ಆಧಾರದ ಮೇಲೆ ಕಿರುಕುಳ ಸಂಭವಿಸಿರಬೇಕು).

ಸಹಾಯಕ್ಕಾಗಿ ಅರ್ಜಿಯನ್ನು ಸಲ್ಲಿಸುವ ಬಗ್ಗೆ ವಿಚಾರಿಸಲು, ದಯವಿಟ್ಟು ಸಂಪರ್ಕಿಸಿ: info@csolifeline.org

ಫ್ರೀಡಂ ಹೌಸ್ ಎರಡು ಅಂತರರಾಷ್ಟ್ರೀಯ ಒಕ್ಕೂಟವನ್ನು ಮುನ್ನಡೆಸುತ್ತದೆ, ಅದು ತುರ್ತು ಸಹಾಯ, ಭದ್ರತಾ ಅನುದಾನ ಮತ್ತು ಅಲ್ಪಾವಧಿಯ ಕಾರ್ಯಕ್ರಮ ಬೆಂಬಲವನ್ನು ನೀಡುತ್ತದೆ

**ದಿ ಲೈಫ್‌ಲೈನ್ ಎಂಬಾಟಲ್ಡ್ ಸಿಎಸ್‌ಒ ಅಸ್ಸಿಸ್ಟೆನ್ಸ್ ಫಂಡ್** https://freedomhouse.org/programs/emergency-assistance-and-thematic-programs/lifeline-embattled-cso-assistance-fund
ದಿ ಲೈಫ್‌ಲೈನ್ ಎಂಬಾಟಲ್ಡ್ ಸಿಎಸ್‌ಒ ಅಸ್ಸಿಸ್ಟೆಂನ್ಸ್ ಫಂಡ್ ನಾಗರಿಕ ಸಮಾಜ ಸಂಸ್ಥೆಗಳಿಗೆ (ಸಿಎಸ್‌ಒ) ಬೆದರಿಕೆ ಅಥವಾ ದಾಳಿಯ ಅಡಿಯಲ್ಲಿ ತುರ್ತು ಹಣಕಾಸಿನ ನೆರವನ್ನು ನೀಡುತ್ತದೆ ಮತ್ತು ನಾಗರಿಕ ಸಮಾಜಕ್ಕೆ ವ್ಯಾಪಕ ಬೆದರಿಕೆಗಳಿಗೆ ಪ್ರತಿಕ್ರಯಿಸುವ ವಕಾಲತ್ತು ಬೆಂಬಲವನ್ನು ನೀಡುತ್ತದೆ.[30] ಮಾನವ ಹಕ್ಕುಗಳ ಸಂಸ್ಥೆಗಳು, ಪತ್ರಕರ್ತ ಸಂಘಗಳು, ವಿದ್ಯಾರ್ಥಿ ಗುಂಪುಗಳು, ಕಾರ್ಮಿಕ ಸಂಘಗಳು, ವಿಚಾರ ವೇದಿಕೆಗಳು ಮತ್ತು ಇತರವುಗಳನ್ನು ಒಳಗೊಂಡಂತೆ ವಕಾಲತ್ತು ನಡೆಸುವ, ಮಾನವ ಹಕ್ಕುಗಳನ್ನು ಉತ್ತೇಜಿಸುವ ಮತ್ತು ರಕ್ಷಿಸುವ ಮತ್ತು / ಅಥವಾ ಮೇಲ್ವಿಚಾರಣೆಯ ಸಾಮರ್ಥ್ಯದಲ್ಲಿ ಕಾರ್ಯನಿರ್ವಹಿಸುವ ವಿವಿಧ ಸಿಎಸ್‌ಒಗಳನ್ನು ಲೈಫ್‌ಲೈನ್ ಬೆಂಬಲಿಸುತ್ತದೆ. ಲೈಫ್‌ಲೈನ್ ಏಳು ಅಂತರರಾಷ್ಟ್ರೀಯ ಪಾಲುದಾರರ ಒಕ್ಕೂಟವಾಗಿದ್ದು, ಪ್ರಜಾಪ್ರಭುತ್ವ ಮತ್ತು ಮಾನವ ಹಕ್ಕುಗಳನ್ನು ಬೆಂಬಲಿಸುವ 17 ಸರ್ಕಾರಗಳು ಮತ್ತು ಸ್ವತಂತ್ರ ಅಡಿಪಾಯಗಳ ಅಂತರರಾಷ್ಟ್ರೀಯ ದಾನಿಗಳ ಸಮೂಹದ ಮೂಲಕ ಕೊಡುಗೆಗಳನ್ನು ಪಡೆಯುತ್ತದೆ.

- **ತುರ್ತು ಸಹಾಯ: ಅರ್ಜಿ ಹೇಗೆ ಸಲ್ಲಿಸಬೇಕು** [How to apply] https://bit.ly/2xjOARW
- **ವಕಾಲತ್ತು ಅನುದಾನ: ಅರ್ಜಿ ಹೇಗೆ ಸಲ್ಲಿಸಬೇಕು** [How to apply] https://bit.ly/2xfAQYw
- **ಚೇತರಿಸಿಕೊಳ್ಳಲು ಅನುದಾನ: ಅರ್ಜಿ ಹೇಗೆ ಸಲ್ಲಿಸಬೇಕು** [How to apply] https://bit.ly/3drVfuf

ಡಿಗ್ನಿಟಿ ಫಾರ್ ಆಲ್: ಎಲ್‌ಜಿಬಿಟಿಐ ಸಹಾಯ ಕಾರ್ಯಕ್ರಮ ದಿ ಡಿಗ್ನಿಟಿ ಫಾರ್ ಆಲ್: ಎಲ್‌ಜಿಬಿಟಿಐ ಸಹಾಯ ಕಾರ್ಯಕ್ರಮವು ಮಾನವ ಹಕ್ಕುಗಳ ರಕ್ಷಕರಿಗೆ ಮತ್ತು ನಾಗರಿಕ ಸಮಾಜ ಸಂಸ್ಥೆಗಳಿಗೆ ಸಲಿಂಗಕಾಮಿ ಮಹಿಳೆಯರು, ಗೇ, ದ್ವಿಲಿಂಗಕಾಮಿ, ಲಿಂಗತ್ವ ಅಲ್ಪಸಂಖ್ಯಾತರು (ಟ್ರಾನ್ಸ್‌ಜೆಂಡರ್) ಮತ್ತು ಅಂತರ್ಲಿಂಗೀ (ಎಲ್‌ಜಿಬಿಟಿಐ) ಸಮುದಾಯದವರ ಮಾನವ ಹಕ್ಕುಗಳಿಗಾಗಿ[31] ಮಾಡಿದ ಕೆಲಸದಿಂದಾಗಿ ಬೆದರಿಕೆ ಅಥವಾ ದಾಳಿಗೆ ಒಳಗಾದಂತಹ ಸಂದರ್ಭಗಳಲ್ಲಿ ತುರ್ತು ನಿಧಿಗಳನ್ನು, ವಕಾಲತ್ತು ಬೆಂಬಲ ಮತ್ತು ಭದ್ರತಾ ಸಹಾಯವನ್ನು ಒದಗಿಸುತ್ತದೆ. ಡಿಗ್ನಿಟಿ ಫಾರ್ ಆಲ್ ಎಲ್‌ಜಿಬಿಟಿಐ ಮಾನವ ಹಕ್ಕುಗಳು ಮತ್ತು ಮಾನವ ಹಕ್ಕುಗಳ ಕೆಲಸದಿಂದಾಗಿ ಬೆದರಿಕೆಗಳು ಅಥವಾ ದಾಳಿಗೆ ಪ್ರತಿಕ್ರಿಯಿಸಲು ಉದ್ದೇಶಿತವಾದ, ಸಮಯಕ್ಕೆ ಅನುಗುಣವಾದ ವಕಾಲತ್ತು ಅಭಿಯಾನಗಳನ್ನು ಬೆಂಬಲಿಸುತ್ತದೆ, ಜೊತೆಗೆ ವೈಯಕ್ತಿಕ ಬಲಿಪಶುಗಳು ಅಥವಾ ಧನಸಹಾಯದ ವಕಾಲತ್ತು ಅಭಿಯಾನಗಳಿಗೆ ಸಂಪರ್ಕ ಹೊಂದಿರುವ ಸಮುದಾಯಗಳಿಗೆ ಸಹಾಯ ಮಾಡುತ್ತದೆ. ಸಂಸ್ಥೆಗಳು ತಮ್ಮ ಕೆಲಸವನ್ನು ಹೆಚ್ಚು ಸುರಕ್ಷಿತವಾಗಿ ಮುಂದುವರಿಸಲು ಸಂಸ್ಥೆಗಳಿಗೆ ಪೂರ್ವಭಾವಿಯಾಗಿ ಸಹಾಯ ಮಾಡಲು ಭದ್ರತಾ ತರಬೇತಿಯು ಲಭ್ಯವಿರುತ್ತದೆ.

ಎಲ್‌ಜಿಬಿಟಿಐ ಮಾನವ ಹಕ್ಕುಗಳ ಪ್ರಭಾವವನ್ನು ಗಮನಾರ್ಹವಾಗಿ ಹೊಂದಲು ವಿನ್ಯಾಸಗೊಳಿಸಲಾದ ಯಾವುದೇ ತುರ್ತು, ಅಲ್ಪಾವಧಿಯ ವಕಾಲತ್ತು ಅಥವಾ ಭದ್ರತಾ ಕಾರ್ಯಕ್ರಮದ ಪರಿಕಲ್ಪನೆಯೊಂದಿಗೆ ನಿಮ್ಮ ಪ್ರದೇಶದಲ್ಲಿ ಕಾರ್ಯನಿರ್ವಹಿಸುತ್ತಿರುವ ಫ್ರೀಡಮ್ ಹೌಸ್ ಅಥವಾ ಡಿಗ್ನಿಟಿ ಒಕ್ಕೂಟದ ಸದಸ್ಯ ಸಂಘಟನೆಯನ್ನು ಸಂಪರ್ಕಿಸಿ.

### ಫ್ರಂಟ್ ಲೈನ್ ಡಿಫೆಂಡರ್ಸ್

ಫ್ರಂಟ್ ಲೈನ್ ಡಿಫೆಂಡರ್ಸ್ ಮಾನವ ಹಕ್ಕುಗಳ ರಕ್ಷಕರ ಅಂತರರಾಷ್ಟ್ರೀಯ ಪ್ರತಿಷ್ಠಾನವಾಗಿದೆ ಮತ್ತು ಅಪಾಯದಲ್ಲಿರುವ ಮಾನವ ಹಕ್ಕುಗಳ ರಕ್ಷಕರನ್ನು, ಮಾನವ ಹಕ್ಕುಗಳ ಸಾರ್ವತ್ರಿಕ ಘೋಷಣೆಯಲ್ಲಿ (ಯುಡಿಹೆಚ್‌ಆರ್) ಪ್ರತಿಪಾದಿಸಿರುವ ಯಾವುದೇ ಅಥವಾ ಎಲ್ಲಾ ಹಕ್ಕುಗಳಿಗಾಗಿ ಅಹಿಂಸಾತ್ಮಕವಾಗಿ ಕೆಲಸ ಮಾಡುವ ಜನರನ್ನು ರಕ್ಷಿಸುವ ನಿರ್ದಿಷ್ಟ ಗುರಿಯನ್ನು ಹೊಂದಿದೆ. ಫ್ರಂಟ್ ಲೈನ್ ಡಿಫೆಂಡರ್ಸ್ ಅಪಾಯದಲ್ಲಿರುವ ಮಾನವ ಹಕ್ಕುಗಳ ರಕ್ಷಕರಿಗೆ ತ್ವರಿತ ಮತ್ತು ಪ್ರಾಯೋಗಿಕ ಬೆಂಬಲವನ್ನು ಒದಗಿಸುತ್ತದೆ, ಅವುಗಳೆಂದರೆ: ಅನುದಾನ, ತರಬೇತಿ, ಅಂತರರಾಷ್ಟ್ರೀಯ ವಕಾಲತ್ತು, 24 ಗಂಟೆಗಳ ತುರ್ತು ದೂರವಾಣಿ ಸಂಪರ್ಕ ಮತ್ತು ತಾತ್ಕಾಲಿಕ ಸ್ಥಳಾಂತರಗಳನ್ನು ಒಳಗೊಂಡಿರುತ್ತದೆ.

ಫ್ರಂಟ್ ಲೈನ್ ಡಿಫೆಂಡರ್ಸ್ – ವೆಬ್‌ಸೈಟ್

https://bit.ly/3bejxpi

### ಮಾನವ ಹಕ್ಕುಗಳ ಅಂತರರಾಷ್ಟ್ರೀಯ ಒಕ್ಕೂಟ

ಮಾನವ ಹಕ್ಕುಗಳ ಅಂತರರಾಷ್ಟ್ರೀಯ ಒಕ್ಕೂಟ (ಎಫ್‌ಐಡಿಎಚ್) ಸ್ವತಂತ್ರ ಅಂತಾರಾಷ್ಟ್ರೀಯ ಎನ್‌ಜಿಒ ಆಗಿದ್ದು, 170 ಕ್ಕೂ ಹೆಚ್ಚು ಸದಸ್ಯ ಸಂಘಟನೆಗಳನ್ನು ಹೊಂದಿದ್ದು ಮಾನವ ಹಕ್ಕುಗಳ ಸಾರ್ವತ್ರಿಕ ಘೋಷಣೆಯಲ್ಲಿ ತಿಳಿಸಿರುವ ಎಲ್ಲಾ ನಾಗರಿಕ, ರಾಜಕೀಯ, ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಹಕ್ಕುಗಳನ್ನು ರಕ್ಷಿಸುತ್ತಿವೆ. ಮಾನವ ಹಕ್ಕುಗಳ ರಕ್ಷಣೆಗಾಗಿ ಮತ್ತು ಅವುಗಳ ಅನುಷ್ಠಾನಕ್ಕಾಗಿ ಅಂತರರಾಷ್ಟ್ರೀಯ ಸಾಧನಗಳ ರಚನೆ ಮತ್ತು ಬಲವರ್ಧನೆಗಾಗಿ ಕಾನೂನು ಮತ್ತು ರಾಜಕೀಯ ಕ್ಷೇತ್ರದಲ್ಲಿ ಎಫ್‌ಐಡಿಎಚ್ ಕಾರ್ಯನಿರ್ವಹಿಸುತ್ತದೆ. ಎಫ್‌ಐಡಿಎಚ್ ನ ಕ್ರಮಗಳಲ್ಲಿ ತುರ್ತು ಪ್ರತಿಕ್ರಿಯೆಗಳು (ಸಾರ್ವಜನಿಕವಾಗಿ ಮತ್ತು ಗೌಪ್ಯವಾಗಿ), ಅಂತರರಾಷ್ಟ್ರೀಯ ಸತ್ಯ–ಶೋಧನೆ, ವಿಚಾರಣೆ ವೀಕ್ಷಣೆ, ರಕ್ಷಣಾ ಕಾರ್ಯಚರಣೆಗಳು, ರಾಜಕೀಯ ಸಂಭಾಷಣೆ, ವಕಾಲತ್ತು, ಮೊಕದ್ದಮೆ ಮತ್ತು ಸಾರ್ವಜನಿಕ ಜಾಗೃತಿ ಅಭಿಯಾನಗಳನ್ನು ಒಳಗೊಂಡಿವೆ.

ಮಾನವ ಹಕ್ಕುಗಳ ಅಂತರರಾಷ್ಟ್ರೀಯ ಒಕ್ಕೂಟ – ವೆಬ್‌ಸೈಟ್ https://bit.ly/3dkxCn6

### ಮಾನವ ಹಕ್ಕುಗಳ ವೀಕ್ಷಣೆ

ಮಾನವ ಹಕ್ಕುಗಳ ವೀಕ್ಷಣೆ (ಹ್ಯೂಮನ್ ರೈಟ್ಸ್ ವಾಚ್ (ಎಚ್‌ಆರ್‌ಡಬ್ಲ್ಯು)) ಒಂದು ಸ್ವತಂತ್ರ, ಅಂತರರಾಷ್ಟ್ರೀಯ ಸಂಸ್ಥೆಯಾಗಿದ್ದು, ಇದು ಮಾನವನ ಘನತೆಯನ್ನು ಎತ್ತಿಹಿಡಿಯುವ ಮತ್ತು ಎಲ್ಲರಿಗೂ ಮಾನವ ಹಕ್ಕುಗಳ ಕಾರಣವನ್ನು ಮುನ್ನಡೆಸುವ ಚಳವಳಿಯ ಒಂದು ಭಾಗವಾಗಿ ಕಾರ್ಯನಿರ್ವಹಿಸುತ್ತದೆ. ದುರುಪಯೋಗದ ಬಗ್ಗೆ ತನಿಖೆ ನಡೆಸುವ ಮೂಲಕ, ಸತ್ಯಗಳನ್ನು ವ್ಯಾಪಕವಾಗಿ ಬಹಿರಂಗಪಡಿಸುವ ಮೂಲಕ ಮತ್ತು ಅಧಿಕಾರ ಹೊಂದಿರುವವರ ಮೇಲೆ ಒತ್ತಡ ಹೇರುವ ಮೂಲಕ ಹಕ್ಕುಗಳನ್ನು ಗೌರವಿಸಲು ಮತ್ತು ನ್ಯಾಯವನ್ನು ಭದ್ರಪಡಿಸಿಕೊಳ್ಳಲು ಎಚ್‌ಆರ್‌ಡಬ್ಲ್ಯು ವಿಶ್ವದಾದ್ಯಂತ ಜನರ ಹಕ್ಕುಗಳನ್ನು ರಕ್ಷಿಸುತ್ತದೆ. ಎಚ್‌ಆರ್‌ಡಬ್ಲ್ಯು ವಿಶ್ವದ ವಿವಿಧ ಭಾಗಗಳಲ್ಲಿ ತನ್ನ ಸಂಶೋಧಕರನ್ನು ಹೊಂದಿದೆ ಮತ್ತು ವಿವಿಧ ದೇಶಗಳು ಮತ್ತು ಪ್ರದೇಶಗಳಿಂದ ವರದಿಗಳನ್ನು ಮತ್ತು ಸುದ್ದಿಗಳನ್ನು ನಿಯಮಿತವಾಗಿ ಪ್ರಕಟಿಸುತ್ತದೆ.

ಹ್ಯೂಮನ್ ರೈಟ್ಸ್ ವಾಚ್ – ವೆಬ್‌ಸೈಟ್
https://bit.ly/2QEizuJ

### ಮಾನವ ಹಕ್ಕುಗಳಿಗಾಗಿ ಅಂತರರಾಷ್ಟ್ರೀಯ ಸೇವೆ

ಮಾನವ ಹಕ್ಕುಗಳ ಅಂತರರಾಷ್ಟ್ರೀಯ ಸೇವೆ (ಇಂಟರ್ನಾಷನಲ್ ಸರ್ವಿಸ್ ಫಾರ್ ಹ್ಯೂಮನ್ ರೈಟ್ಸ್ (ಐಎಸ್‌ಎಚ್‌ಆರ್)) ಮಾನವ ಹಕ್ಕುಗಳನ್ನು ಉತ್ತೇಜಿಸಲು ಮತ್ತು ರಕ್ಷಿಸಲು ಮೀಸಲಾಗಿರುವ ಸ್ವತಂತ್ರ, ಸರ್ಕಾರೇತರ ಸಂಸ್ಥೆಯಾಗಿದೆ. ಐಎಸ್‌ಎಚ್‌ಆರ್ ಮಾನವ ಹಕ್ಕುಗಳ ರಕ್ಷಕರನ್ನು ಬೆಂಬಲಿಸುತ್ತದೆ, ಮಾನವ ಹಕ್ಕುಗಳ ವ್ಯವಸ್ಥೆಯನ್ನು ಬಲಪಡಿಸುತ್ತದೆ ಮತ್ತು ಮಾನವ ಹಕ್ಕುಗಳ ಬದಲಾವಣೆಗಾಗಿ ಕೆಲಸ ಮಾಡುವ ಒಕ್ಕೂಟಗಳಲ್ಲಿ ಭಾಗವಹಿಸುತ್ತದೆ ಮತ್ತು ನೇತೃತ್ವವಹಿಸುತ್ತದೆ. ಮಾನವ ಹಕ್ಕುಗಳ ರಕ್ಷಕರಿಗೆ ಐಎಸ್‌ಎಚ್‌ಆರ್‌ನ ಬೆಂಬಲದಲ್ಲಿ ತೀವ್ರವಾದ ತರಬೇತಿ, ಸಾಮರ್ಥ್ಯ ಬೆಳವಣಿಗೆ, ವಕಾಲತ್ತು ಸಲಹೆ ಮತ್ತು ತಾಂತ್ರಿಕ ನೆರವುಗಳು ಒಳಗೊಂಡಿದೆ.

ಮಾನವ ಹಕ್ಕುಗಳಿಗಾಗಿ ಅಂತರರಾಷ್ಟ್ರೀಯ ಸೇವೆ – ವೆಬ್‌ಸೈಟ್ https://bit.ly/3acuTKB



29 https://bit.ly/2Ut6F83
30 https://bit.ly/3aekOHY
31 https://bit.ly/33I9erk

### ಅರ್ಜೆಂಟ್ ಆಕ್ಷನ್ ಫಂಡ್ ಫಾರ್ ವುಮೆನ್ಸ್ ಹ್ಯೂಮನ್ ರೈಟ್ಸ್

ಅರ್ಜೆಂಟ್ ಆಕ್ಷನ್ ಫಂಡ್ ಫಾರ್ ವುಮೆನ್ಸ್ ಹ್ಯೂಮನ್ ರೈಟ್ಸ್ (ಮಹಿಳೆಯರ ಮಾನವ ಹಕ್ಕುಗಳಿಗಾಗಿ ಅರ್ಜೆಂಟ್ ಆಕ್ಷನ್ ಫಂಡ್) ಜಾಗತಿಕ ಮಹಿಳಾ ನಿಧಿಯಾಗಿದ್ದು, ಹೋರಾಟಗಾರರು ಪರಿಸ್ಥಿತಿಯ ಹೆಚ್ಚಿನ ಲಾಭ ಗಳಿಸಲು ಮುಂದಾದಾಗ ಅಥವಾ ಅವರ ಜೀವನ ಮತ್ತು ಕೆಲಸಕ್ಕೆ ಗಂಭೀರ ಬೆದರಿಕೆಗಳನ್ನು ಎದುರಿಸಬೇಕಾದ ತ್ವರಿತವಾಗಿ ಮಧ್ಯಪ್ರವೇಶಿಸುವ ಮೂಲಕ ಮಹಿಳೆಯರನ್ನು ಮತ್ತು ಟ್ರಾನ್ಸ್‌ಜೆಂಡರ್ ಮಾನವ ಹಕ್ಕುಗಳ ರಕ್ಷಕರನ್ನು ರಕ್ಷಿಸುತ್ತದೆ, ಬಲಪಡಿಸುತ್ತದೆ ಮತ್ತು ಸುಸ್ಥಿರಗೊಳಿಸುತ್ತದೆ. ಅರ್ಜೆಂಟ್ ಆಕ್ಷನ್ ಫಂಡ್ 72 ಗಂಟೆಗಳ ಒಳಗೆ ಮಹಿಳೆಯರ ಮಾನವ ಹಕ್ಕುಗಳ ರಕ್ಷಕರ ಕೋರಿಕೆಗಳಿಗೆ ಸ್ಪಂದಿಸಲು ಆನ್‌ಲೈನ್ ಮತ್ತು ಮೊಬೈಲ್ ಅನುದಾನದ ಅರ್ಜಿಗಳನ್ನು ಬಳಸುತ್ತದೆ ಮತ್ತು 1–7 ದಿನಗಳಲ್ಲಿ ಕ್ಷೇತ್ರದಲ್ಲಿ ಹಣ ಸಹಾಯವನ್ನು ತಲುಪುವಂತೆ ಮಾಡುತ್ತದೆ. ಅರ್ಜೆಂಟ್ ಆಕ್ಷನ್ ಫಂಡ್ ವಕಾಲತ್ತು ಮತ್ತು ಮೈತ್ರಿ ನಿರ್ಮಾಣದ ಕಾರ್ಯದಲ್ಲೂ ತೊಡಗಿಸಿಕೊಂಡಿದೆ ಮತ್ತು ಅರ್ಜೆಂಟ್ ಆಕ್ಷನ್ ಫಂಡ್–ಆಫ್ರಿಕಾ ಮತ್ತು ಅರ್ಜೆಂಟ್ ಆಕ್ಷನ್ ಫಂಡ್–ಲ್ಯಾಟಿನ್ ಅಮೆರಿಕದೊಂದಿಗೆ ಜಾಗತಿಕವಾಗಿ ಮಹಿಳೆಯರ ಮತ್ತು ಹುಡುಗಿಯರ ಹೋರಾಟವನ್ನು ಬೆಂಬಲಿಸುತ್ತದೆ. 2017 ರಲ್ಲಿ ಸಹೋದರಿ–ನಿಧಿಯಾದ, ಅರ್ಜೆಂಟ್ ಆಕ್ಷನ್ ಫಂಡ್ ಫಾರ್ ವುಮೆನ್ಸ್ ಹ್ಯೂಮನ್ ರೈಟ್ಸ್ ಇನ್ ಏಷ್ಯಾ ಮತ್ತು ಪೆಸಿಫಿಕ್ (ಯುಎಎಫ್ ಎ & ಪಿ) ಅನ್ನು ಪ್ರಾರಂಭಿಸಲಾಯಿತು ಮತ್ತು ಇದು ಶೀಘ್ರ ಪ್ರತಿಕ್ರಿಯೆಯ ಅನುದಾನವನ್ನು ಸಹ ನೀಡುತ್ತದೆ.

ಅರ್ಜೆಂಟ್ ಆಕ್ಷನ್ ಫಂಡ್– ವೆಬ್‌ಸೈಟ್:
https://bit.ly/2QCJKWS

ಅರ್ಜೆಂಟ್ ಆಕ್ಷನ್ ಫಂಡ್– ಆಫ್ರಿಕಾ – ವೆಬ್‌ಸೈಟ್:
https://bit.ly/3dgE7Yd

ಅರ್ಜೆಂಟ್ ಆಕ್ಷನ್ ಫಂಡ್– ಲ್ಯಾಟಿನ್ ಅಮೆರಿಕ – ವೆಬ್‌ಸೈಟ್:
https://bit.ly/2QT4H03

ಅರ್ಜೆಂಟ್ ಆಕ್ಷನ್ ಫಂಡ್– ಏಷ್ಯಾ ಮತ್ತು ಪೆಸಿಫಿಕ್ – ವೆಬ್‌ಸೈಟ್:
https://bit.ly/33Eoy82

### ಒಬ್ಸರ್ವೇಟರಿ ಫಾರ್ ದಿ ಪ್ರೊಟೆಕ್ಷನ್ ಆಫ್ ಹ್ಯೂಮನ್ ರೈಟ್ಸ್ ಡಿಫೆಂಡರ್ಸ್ (ಎಫ್‌ಐಡಿಹೆಚ್ – ಒಎಂಸಿಟಿ)

ಮಾನವ ಹಕ್ಕುಗಳ ರಕ್ಷಕರ ವೀಕ್ಷಣಾಲಯವು (ಒಬ್ಸರ್ವೇಟರಿ ಫಾರ್ ದಿ ಪ್ರೊಟೆಕ್ಷನ್ ಆಫ್ ಹ್ಯೂಮನ್ ರೈಟ್ಸ್ ಡಿಫೆಂಡರ್ಸ್) ಮಾನವ ಹಕ್ಕುಗಳ ಅಂತರರಾಷ್ಟ್ರೀಯ ಒಕ್ಕೂಟ (ಎಫ್‌ಐಡಿಹೆಚ್, ಮೇಲೆ ನೋಡಿ) ಮತ್ತು ಚಿತ್ರಹಿಂಸೆ ವಿರುದ್ಧದ ವಿಶ್ವದ ಸಂಸ್ಥೆಯ (ಒಎಂಸಿಟಿ, ಕೆಳಗೆ ನೋಡಿ) ಜಂಟಿ ಕಾರ್ಯಕ್ರಮವಾಗಿದೆ. ಈ ಸಹಯೋಗವು ಎರಡು ಸಂಸ್ಥೆಗಳ ವಿಧಾನ ಮತ್ತು ಅವುಗಳ ಸರ್ಕಾರೇತರ ಸಂಸ್ಥೆಗಳ ಜಾಲಬಂಧಗಳ (ನೆಟ್‌ವರ್ಕ್‌ಗಳ) ಪೂರಕತೆಯನ್ನು ಆಧರಿಸಿದೆ. ಒಬ್ಸರ್ವೇಟರಿಯು ಕ್ಷೇತ್ರದಲ್ಲಿನ ಮಾನವ ಹಕ್ಕುಗಳ ರಕ್ಷಕರಿಗೆ ತುರ್ತು ರಕ್ಷಣೆಯನ್ನು ನೀಡುತ್ತದೆ (ತುರ್ತು ಮಧ್ಯಸ್ಥಿಕೆಗಳು, ಅಂತರರಾಷ್ಟ್ರೀಯ ಕಾರ್ಯಾಚರಣೆಗಳು, ವಸ್ತು ಸಹಾಯ ಮತ್ತು ಇತರ ರೀತಿಯ ರಕ್ಷಣೆಗಳು); ರಾಷ್ಟ್ರೀಯ, ಪ್ರಾದೇಶಿಕ ಮತ್ತು ಅಂತರರಾಷ್ಟ್ರೀಯ ಅಂತರ್‌ಸರ್ಕಾರಿ ಸಂರಕ್ಷಣಾ ಕಾರ್ಯವಿಧಾನಗಳೊಂದಿಗೆ ಸಹಕರಿಸುತ್ತದೆ; ಮತ್ತು ಅಂತರರಾಷ್ಟ್ರೀಯ ಸಮುದಾಯವನ್ನು ಮತ್ತು ಮಾಧ್ಯಮವನ್ನು ರಕ್ಷಕರಿಗೆ ರಕ್ಷಣಾ ಏಜೆಂಟ್‌ಗಳಾಗಿ (ಕಾರ್ಯಕರ್ತರಾಗಿ) ಸಜ್ಜುಗೊಳಿಸುತ್ತದೆ. ಪ್ರತಿವರ್ಷ, ಒಬ್ಸರ್ವೇಟರಿಯು ಮಾನವ ಹಕ್ಕುಗಳ ರಕ್ಷಕರು ಎದುರಿಸುತ್ತಿರುವ ಅತ್ಯಂತ ಗಂಭೀರವಾದ ಅಡೆತಡೆಗಳು ಮತ್ತು ಬೆದರಿಕೆಗಳನ್ನು ಎತ್ತಿ ತೋರಿಸುವ ಜಾಗತಿಕ ವರದಿಯನ್ನು ಪ್ರಕಟಿಸುತ್ತದೆ.


ಚಿತ್ರಹಿಂಸೆ ವಿರುದ್ಧದ ವಿಶ್ವದ ಸಂಸ್ಥೆ – ಮಾನವ ಹಕ್ಕುಗಳ ರಕ್ಷಕರು (ವರ್ಲ್ಡ್ ಆರ್ಗನೈಸೇಷನ್ ಎಗೇಸ್ಟ್ ಟೋರ್ಚರ್ – ಹ್ಯೂಮನ್ ರೈಟ್ಸ್ ಡಿಫೆಂಡರ್ಸ್)– ವೆಬ್‌ಸೈಟ್:
https://bit.ly/2QBhhRc

ಮಾನವ ಹಕ್ಕುಗಳ ಅಂತರರಾಷ್ಟ್ರೀಯ ಒಕ್ಕೂಟ – ಮಾನವ ಹಕ್ಕುಗಳ ರಕ್ಷಕರು (ಇಂಟರ್ನ್ಯಾಷನಲ್ ಫೆಡರೇಷನ್ ಫಾರ್ ಹ್ಯೂಮನ್ ರೈಟ್ಸ್ – ಹ್ಯೂಮನ್ ರೈಟ್ಸ್ ಡಿಫೆಂಡರ್ಸ್)– ವೆಬ್‌ಸೈಟ್:
https://bit.ly/33Ih5oz

### ಪೀಸ್ ಬ್ರಿಗೇಡ್ಸ್ ಇಂಟರ್ನ್ಯಾಷನಲ್

ಪೀಸ್ ಬ್ರಿಗೇಡ್ಸ್ ಇಂಟರ್ನ್ಯಾಷನಲ್ (ಪಿಬಿಐ) ಅಹಿಂಸೆಯನ್ನು ಉತ್ತೇಜಿಸುವ ಮತ್ತು ಮಾನವ ಹಕ್ಕುಗಳನ್ನು ರಕ್ಷಿಸುವ ಅಂತರರಾಷ್ಟ್ರೀಯ ಸರ್ಕಾರೇತರ ಸಂಸ್ಥೆಯಾಗಿದೆ. ಪಿಬಿಐನ ಸ್ವಯಂಸೇವಕರು ಸಂಘರ್ಷದ ಪ್ರದೇಶಗಳಲ್ಲಿ ಮಾನವ ಹಕ್ಕುಗಳ ರಕ್ಷಕರ ಜೊತೆಗೆ ಹೋಗುತ್ತಾರೆ. ರಾಜಕೀಯ ಹಿಂಸಾಚಾರದಿಂದ ಜೀವಕ್ಕೆ ಮತ್ತು ಕೆಲಸಕ್ಕೆ ಬೆದರಿಕೆಯಿರುವ ಮಾನವ ಹಕ್ಕುಗಳ ರಕ್ಷಕರನ್ನು ಮತ್ತು ಸಮುದಾಯಗಳನ್ನು ರಕ್ಷಿಸಲು ರಕ್ಷಣಾತ್ಮಕವಾಗಿ ಅವರ ಜೊತೆಯಲ್ಲಿ ಹೋಗುವುದನ್ನು ಪಿಬಿಐ ಒಂದು ಕಾರ್ಯತಂತ್ರವಾಗಿ ಪ್ರಾರಂಭಿಸಿದೆ. ಅಪಾಯದಲ್ಲಿರುವ ಸಂಸ್ಥೆಯು ನೇರವಾಗಿ ಪಿಬಿಐಯನ್ನು ಅವರ ಜೊತೆಯಲ್ಲಿ ಬರುವಂತೆ ಕೋರಿಕೆಯೊಂದಿಗೆ ಸಂಪರ್ಕಿಸಬೇಕು, ಅದರ ನಂತರ ಪಿಬಿಐ ರಕ್ಷಣೆಯ ಸಾಧ್ಯತೆಯನ್ನು ನಿರ್ಣಯಿಸುತ್ತದೆ. ಪಿಬಿಐ ವಿನಂತಿಗಳಿಗೆ ವೈಯಕ್ತಿಕ ಪ್ರತಿಕ್ರಿಯೆಗಳನ್ನು ಸಾಧ್ಯವಾದಲ್ಲಿ ಮಾತ್ರವೇ ನೀಡುತ್ತದೆ ಮತ್ತು ಅದು ಸಂಬಂಧಪಟ್ಟ ಸಂಸ್ಥೆಯೊಂದಿಗೆ ಒಪ್ಪಂದ ಮಾಡಿಕೊಳ್ಳುತ್ತದೆ.

ಪೀಸ್ ಬ್ರಿಗೇಡ್ಸ್ ಇಂಟರ್ನ್ಯಾಷನಲ್ –
ವೆಬ್‌ಸೈಟ್: https://bit.ly/2QCE92C



ಚಿತ್ರ: ಕೊಲಂಬಿಯಾದಲ್ಲಿ ಪಿಬಿಐ







ಸಮುದಾಯವನ್ನು ಒಗ್ಗೂಡಿಸುವ ಮತ್ತು ಕಾರ್ಯಗಳು ಮಾನವ ಹಕ್ಕುಗಳಿಗೆ ಬಲವಾದ ರಕ್ಷಣೆ ಮತ್ತು ಬೇಡಿಯನ್ನು ಮುಂದಿಡುತ್ತದೆ. (ಚಿತ್ರ ಸಲ್ಲಿಕೆ: ಪ್ರೊಟೆಕ್ಷನ್ ಇಚಿಟರ್ನ್ಯಾಷನಲ್)

### ಮಹಿಳಾ ಮಾನವ ಹಕ್ಕುಗಳ ರಕ್ಷಕರ ಅಂತರರಾಷ್ಟ್ರೀಯ ಒಕ್ಕೂಟ (ಡಬ್ಲ್ಯುಎಚ್‌ಆರ್‌ಡಿಐಸಿ) (ವಿಮೆನ್ ಹ್ಯೂಮನ್ ರೈಟ್ಸ್ ಡಿಫೆಂಡರ್ಸ್ ಕೊಯಲಿಷನ್)

ಮಹಿಳಾ ಮಾನವ ಹಕ್ಕುಗಳ ರಕ್ಷಕರ ಅಂತರರಾಷ್ಟ್ರೀಯ ಒಕ್ಕೂಟ (ಡಬ್ಲ್ಯುಎಚ್‌ಆರ್‌ಡಿಐಸಿ) ಎನ್ನುವುದು ವಿಶ್ವದಾದ್ಯಂತ ಮಹಿಳಾ ಮಾನವ ಹಕ್ಕುಗಳ ರಕ್ಷಕರನ್ನು ಬೆಂಬಲಿಸುವ ಮತ್ತು ರಕ್ಷಿಸುವ ಒಂದು ಜಾಲವಾಗಿದೆ. ಒಕ್ಕೂಟವು ಸ್ಥಳೀಯ, ತಳಮಟ್ಟದ ಸಂಸ್ಥೆಗಳಿಂದ ಹಿಡಿದು ದೊಡ್ಡ, ಅಂತರರಾಷ್ಟ್ರೀಯ ಸಂಸ್ಥೆಗಳವರೆಗೆ ವಿಶ್ವದಾದ್ಯಂತ 35 ಸದಸ್ಯರನ್ನು ಹೊಂದಿದೆ. ಡಬ್ಲ್ಯುಎಚ್‌ಆರ್‌ಡಿಐಸಿ ಕಾರ್ಯಕಾರಿ ಸಮಿತಿಯನ್ನು ಹೊಂದಿದೆ ಮತ್ತು ದಾಖಲೆ ಮತ್ತು ತರಬೇತಿ; ವಕಾಲತ್ತು; ಮತ್ತು ತುರ್ತು ಪ್ರತಿಕ್ರಿಯೆಗಳೆಂಬ ಮೂರು ಕಾರ್ಯ ಗುಂಪುಗಳ ಮೂಲಕ ಕಾರ್ಯನಿರ್ವಹಿಸುತ್ತದೆ:

ವಿಮೆನ್ ಹ್ಯೂಮನ್ ರೈಟ್ಸ್ ಡಿಫೆಂಡರ್ಸ್ ಕೊಯಲಿಷನ್ –
ವೆಬ್‌ಸೈಟ್: https://www.defendingwomen-defendingrights.org/

### ಪ್ರೊಟೆಕ್ಷನ್ ಇಂಟರ್ನ್ಯಾಷನಲ್

ಮಾನವ ಹಕ್ಕನ್ನು ರಕ್ಷಿಸುವ ಹಕ್ಕುಗಳನ್ನು ಬೆದರಿಕೆ, ನ್ಯಾಯಾಂಗ ಕಿರುಕುಳ, ಕಳಂಕಿತಗೊಳಿಸುವಿಕೆ ಅಥವಾ ಇತರ ರೀತಿಯ ದಬ್ಬಾಳಿಕೆಯ ಮೂಲಕ ಉಲ್ಲಂಘನೆಯಾಗುತ್ತಿರುವ ವ್ಯಕ್ತಿಗಳನ್ನು, ಸಂಸ್ಥೆಗಳನ್ನು, ನೆಟ್‌ವರ್ಕ್‌ಗಳನ್ನು ಮತ್ತು ಸಮುದಾಯಗಳನ್ನು ಪ್ರೊಟೆಕ್ಷನ್ ಇಂಟರ್ನ್ಯಾಷನಲ್ (ಪಿಐ) ಬೆಂಬಲಿಸುತ್ತದೆ. ಪಿಐ ಮಾನವ ಹಕ್ಕುಗಳ ರಕ್ಷಕರೊಂದಿಗೆ ಸೇರಿ ರಕ್ಷಣಾ ತಂತ್ರಗಳನ್ನು ಮತ್ತು ಅವುಗಳ ಕಾರ್ಯಗತಗೊಳಿಸುವುದನ್ನು ವ್ಯಾಖ್ಯಾನಿಸುತ್ತಾರೆ; ರಕ್ಷಕರು ನಿರ್ದಿಷ್ಟ ಅಪಾಯದಲ್ಲಿರುವ ದೇಶಗಳಲ್ಲಿ ಅಥವಾ ಪ್ರದೇಶಗಳಲ್ಲಿ ಮಾನವ ಹಕ್ಕುಗಳ ರಕ್ಷಕರು ತಮ್ಮ ಭದ್ರತೆಯನ್ನು ನಿರ್ವಹಿಸುವ ಸಾಮರ್ಥ್ಯವನ್ನು ಸುಧಾರಿಸುವ ಪ್ರಕ್ರಿಯೆಗಳೊಂದಿಗೆ ಹೋಗಲು ರಕ್ಷಣಾ ಕೇಂದ್ರಗಳನ್ನು (ಪ್ರೊಟೆಕ್ಷನ್ ಡೆಸ್ಕ್‌ಗಳನ್ನು) ಸ್ಥಾಪಿಸುತ್ತಾರೆ; ಉತ್ತಮ ರಕ್ಷಣಾ ಅಭ್ಯಾಸಗಳನ್ನು ಮತ್ತು ಸವಾಲುಗಳನ್ನು ಸಂಶೋಧಿಸುತ್ತದೆ; ಮತ್ತು ಅವುಗಳನ್ನು ಕೈಪಿಡಿಗಳು ಮತ್ತು ವರದಿಗಳ ರೂಪದಲ್ಲಿ ಮಾನವ ಹಕ್ಕುಗಳ ರಕ್ಷಕ ಸಮುದಾಯಕ್ಕೆ ದೊರಕುವಂತೆ ಮಾಡುತ್ತಾರೆ. ಮಾನವ ಹಕ್ಕುಗಳ ರಕ್ಷಕರ ಕುರಿತ ವಿಶ್ವಸಂಸ್ಥೆಯ ಘೋಷಣೆ ಮತ್ತು ಇತರ ಅಂತರರಾಷ್ಟ್ರೀಯ, ಪ್ರಾದೇಶಿಕ ಅಥವಾ ರಾಷ್ಟ್ರೀಯ ಮಾನದಂಡಗಳನ್ನು ಬಳಸಿಕೊಂಡು ಪರಿಣಾಮಕಾರಿಯಾಗಿ ಸಾರ್ವಜನಿಕ ನೀತಿಗಳ ಮೂಲಕ ಮಾನವ ಹಕ್ಕುಗಳ ರಕ್ಷಕರನ್ನು ರಕ್ಷಿಸುವ ಜವಾಬ್ದಾರಿಯನ್ನು ರಾಷ್ಟ್ರಗಳು ಪೂರೈಸಬೇಕೆಂದು ಪಿಐ ಪ್ರತಿಪಾದಿಸುತ್ತದೆ.

ಪ್ರೊಟೆಕ್ಷನ್ ಇಂಟರ್ನ್ಯಾಷನಲ್ – ವೆಬ್‌ಸೈಟ್:
https://bit.ly/2QFqgkx

### ಚಿತ್ರಹಿಂಸೆ ವಿರುದ್ಧದ ವಿಶ್ವದ ಸಂಸ್ಥೆ (ವರ್ಲ್ಡ್ ಆರ್ಗನೈಸೇಷನ್ ಎಗೇಸ್ಟ್ ಟೋರ್ಚರ್)

ಚಿತ್ರಹಿಂಸೆ ವಿರುದ್ಧ ವಿಶ್ವದ ಸಂಸ್ಥೆಯು (ಒಎಂಸಿಟಿ) ಒಂದು ಅಂತರರಾಷ್ಟ್ರೀಯ ಎನ್‌ಜಿಒಗಳ ಸ್ವತಂತ್ರ ಒಕ್ಕೂಟವಾಗಿದ್ದು ಚಿತ್ರಹಿಂಸೆ, ಸಾರಾಂಶ ಮರಣದಂಡನೆ (ಅಪರಾಧದ ಆರೋಪವಿದ್ದು ಮತ್ತು ಯಾವುದೇ ನ್ಯಾಯಯುತ ವಿಚಾರಣೆ ಇಲ್ಲದೇ ತಕ್ಷಣ ಕೊಲ್ಲಲ್ಪಡುವವರು), ಬಲವಂತವಾಗಿ ಕಣ್ಮರೆಗಳು ಮತ್ತು ಇತರ ಎಲ್ಲ ಕ್ರೂರ, ಅಮಾನವೀಯ ಅಥವಾ ಅವಮಾನಕರವಾಗಿ ನಡೆಸಿಕೊಳ್ಳುವ ವಿರುದ್ಧ ಹೋರಾಡುತ್ತದೆ. ಎಸ್‌ಒಎಸ್–ಟಾರ್ಚರ್ ನೆಟ್‌ವರ್ಕ್‌ನ ಸದಸ್ಯರು ಮತ್ತು ವಿಶ್ವದಾದ್ಯಂತದ ಇತರ ಪಾಲುದಾರ ಸಂಸ್ಥೆಗಳಿಂದ ಗಂಭೀರ ಮಾನವ ಹಕ್ಕುಗಳ ಉಲ್ಲಂಘನೆಯನ್ನು ತಡೆಗಟ್ಟಲು, ವ್ಯಕ್ತಿಗಳನ್ನು ರಕ್ಷಿಸಲು ಮತ್ತು ಶಿಕ್ಷೆಯ ಭೀತಿಯ ವಿರುದ್ಧ ಹೋರಾಡಲು ಪಡೆದ ತುರ್ತು ಮಧ್ಯಸ್ಥಿಕೆಗಳು ಪ್ರಸಾರವಾಗುವುದನ್ನು ಒಎಂಸಿಟಿ ಖಚಿತಪಡಿಸುತ್ತದೆ. ಇದು ವಿಶ್ವಸಂಸ್ಥೆಯ ಕಾರ್ಯವಿಧಾನಗಳಿಗೆ ವೈಯಕ್ತಿಕ ಸಂವಹನಗಳನ್ನು ಮತ್ತು ಪರ್ಯಾಯ ವರದಿಗಳನ್ನು ಸಲ್ಲಿಸುತ್ತದೆ. ಚಿತ್ರಹಿಂಸೆಗೆ ಒಳಗಾದವರಿಗೆ ಒಎಂಸಿಟಿ ತುರ್ತು ವೈದ್ಯಕೀಯ, ಕಾನೂನು ಮತ್ತು ಸಾಮಾಜಿಕ ನೆರವನ್ನು ನೀಡುತ್ತದೆ.

ವರ್ಲ್ಡ್ ಆರ್ಗನೈಸೇಷನ್ ಎಗೇಸ್ಟ್ ಟೋರ್ಚರ್ –
ವೆಬ್‌ಸೈಟ್: https://bit.ly/2xfCd9C

**ಪ್ರೊಟೆಕ್ಟ್ ಡಿಫೆಂಡರ್ಸ್.ಇಯು**

ಪ್ರೊಟೆಕ್ಟ್ ಡಿಫೆಂಡರ್‌ಗಳನ್ನು.ಇಯು ಅನ್ನು ಮಾನವ ಹಕ್ಕುಗಳ ರಕ್ಷಕರ ಪರವಾಗಿ ರಕ್ಷಣೆ, ಪ್ರಚಾರ ಮತ್ತು ವಕಾಲತ್ತು ಕ್ಷೇತ್ರದಲ್ಲಿ ಉತ್ತಮ ಕೆಲಸದ ದಾಖಲೆಯೊಂದಿಗೆ ಸಾಬೀತಾದ ಹನ್ನೆರಡು ಅಂತರರಾಷ್ಟ್ರೀಯ ಸಂಸ್ಥೆಗಳ ಒಕ್ಕೂಟವು ಅನುಷ್ಠಾನಗೊಳಿಸುತ್ತಿದೆ. ಅವರು ಮಾನವ ಹಕ್ಕುಗಳ ರಕ್ಷಕರಿಗೆ ತಮ್ಮ ಕಾರ್ಯಾಚರಣೆಯ ಆರು ಪ್ರಮುಖ ಕಾರ್ಯ ಘಟಕಗಳ ಮೂಲಕ 24/7 ಬೆಂಬಲವನ್ನು ಒದಗಿಸುತ್ತಾರೆ:

1. ಅಪಾಯದಲ್ಲಿರುವ ಮಾನವ ಹಕ್ಕುಗಳ ರಕ್ಷಕರಿಗೆ, ಅವರ ಕುಟುಂಬಗಳಿಗೆ ಮತ್ತು ಅವರ ಕೆಲಸಗಳಿಗೆ ತುರ್ತು ಬೆಂಬಲ ಮತ್ತು ವಸ್ತು ಸಹಾಯವನ್ನು ಒದಗಿಸಲು ತ್ವರಿತ ಪ್ರತಿಕ್ರಿಯೆಯ ಕಾರ್ಯವಿಧಾನವನ್ನು ನಿರ್ವಹಿಸುವುದು
2. ಮಾನವ ಹಕ್ಕುಗಳ ರಕ್ಷಕರಿಗಾಗಿ ತಾತ್ಕಾಲಿಕ ಸ್ಥಳಾಂತರದ ಬೆಂಬಲ ಕಾರ್ಯಕ್ರಮವನ್ನು ನಿರ್ವಹಿಸುವುದು
3. ಮಾನವ ಹಕ್ಕುಗಳ ರಕ್ಷಕರಿಗಾಗಿ ತಾತ್ಕಾಲಿಕ ಸ್ಥಳಾಂತರಕ್ಕೆ ಕೆಲಸ ಮಾಡುವ ಸಂಸ್ಥೆಗಳು ಮತ್ತು ಮಧ್ಯಸ್ಥಗಾರರಿಗೆ ವಿನಿಮಯ ವೇದಿಕೆಯ ಬೆಂಬಲ ಮತ್ತು ಸಂಯೋಜನೆ ನೀಡುವುದು
4. ಮಾನವ ಹಕ್ಕುಗಳ ರಕ್ಷಕರಿಗೆ ಮತ್ತು ಸ್ಥಳೀಯ ಸಂಸ್ಥೆಗಳಿಗೆ ತರಬೇತಿ, ಬೆಂಬಲ ಮತ್ತು ಸಾಮರ್ಥ್ಯವನ್ನು ಹೆಚ್ಚಿಸುವುದು
5. ರಕ್ಷಕರ ಪರಿಸ್ಥಿತಿಯನ್ನು ಮೇಲ್ವಿಚಾರಣೆ ಮಾಡುವುದು ಮತ್ತು ರಕ್ಷಣಾ ಕಾರ್ಯಸೂಚಿಗಾಗಿ ವಕಾಲತ್ತು ನಡೆಸುವುದು, ಮತ್ತು
6. ಮಾನವ ಹಕ್ಕುಗಳ ರಕ್ಷಕರಿಗೆ, ಇಯು ಸಂಸ್ಥೆಗಳಿಗೆ ಮತ್ತು ಇತರ ಸಂಬಂಧಿತ ಪಾತ್ರಧಾರಿಗಳಿಗೆ ಬೆಂಬಲ ನೀಡಲು ಮೀಸಲಾಗಿರುವ ಸಂಸ್ಥೆಗಳ ನಡುವೆ ಸಮನ್ವಯವನ್ನು ಉತ್ತೇಜಿಸುವುದು.

**ಪ್ರೊಟೆಕ್ಟ್ ಡಿಫೆಂಡರ್ಸ್.ಇಯು**

**ವೆಬ್‌ಸೈಟ್** https://bit.ly/2QE2JQL

**ನೇರ ಸಂಪರ್ಕ (ಹಾಟ್ ಲೈನ್) – +353 (0) 1 21 00 489**
ಸ್ಕೈಪ್ ನಂತಹ ಇತರ ಸಂಪರ್ಕ ಆಯ್ಕೆಗಳಿಗಾಗಿ ಅಥವಾ ಅವರ ಸುರಕ್ಷಿತ ವೆಬ್ ಅರ್ಜಿಯನ್ನು ಬಳಸಲು ಈ ಲಿಂಕನ್ನು ಅನುಸರಿಸಿ[32] https://bit.ly/397UmUd

**ತುರ್ತು ಬೆಂಬಲ** – https://bit.ly/2UuAc17
ಈ ಕಾರ್ಯವಿಧಾನವು ಸನ್ನಿಹಿತ ಅಪಾಯ ಅಥವಾ ಬೆದರಿಕೆಗಳನ್ನು ಎದುರಿಸುತ್ತಿರುವ ಮಾನವ ಹಕ್ಕುಗಳ ರಕ್ಷಕರಿಗೆ 24/7 ತುರ್ತು ಬೆಂಬಲವನ್ನು ಒದಗಿಸುತ್ತದೆ. ಬಿಕ್ಕಟ್ಟಿನ ಸಂದರ್ಭದಲ್ಲಿ, ರಕ್ಷಕರು ಶಾಶ್ವತ ತುರ್ತು ಸಹಾಯವಾಣಿ ಮತ್ತು ಸುರಕ್ಷಿತ ಸಂಪರ್ಕ ಅರ್ಜಿಯ ಮೂಲಕ ಪ್ರೊಟೆಕ್ಟ್ ಡಿಫೆಂಡರ್ಸ್.ಇಯು ಅನ್ನು ಸಂಪರ್ಕಿಸಬಹುದು (ಮೇಲೆ ಉಲ್ಲೇಖಿಸಲಾಗಿದೆ). ತುರ್ತು ಅನುದಾನ ಕಾರ್ಯಕ್ರಮವು ಮಾನವ ಹಕ್ಕುಗಳ ರಕ್ಷಕರು, ತಮ್ಮ ಕುಟುಂಬ ಮತ್ತು ಅವರ ಕೆಲಸವನ್ನು ರಕ್ಷಿಸಿಕೊಳ್ಳಲು ತುರ್ತು ಭದ್ರತಾ ಕ್ರಮಗಳನ್ನು ಪಡೆಯಬಹುದು ಮತ್ತು ಕಾರ್ಯಗತಗೊಳಿಸಬಹುದು ಎಂಬುವುದನ್ನು ಖಚಿತಪಡಿಸುತ್ತದೆ.[33]

**ತಾತ್ಕಾಲಿಕ ಸ್ಥಳಾಂತರ ಅನುದಾನ** – https://bit.ly/33Fhx7h
ತುರ್ತು ಬೆದರಿಕೆಯ ಸಂದರ್ಭದಲ್ಲಿ ತಮ್ಮ ದೇಶದಲ್ಲಿ ಅಥವಾ ವಿದೇಶದಲ್ಲಿ ತಾತ್ಕಾಲಿಕವಾಗಿ ಸ್ಥಳಾಂತರಗೊಳ್ಳಲು ಅಪಾಯದಲ್ಲಿರುವ ಮಾನವ ಹಕ್ಕುಗಳ ರಕ್ಷಕರಿಗೆ ಅನುದಾನ ಲಭ್ಯವಿರುತ್ತದೆ.[34]

**ತರಬೇತಿಗಳು** – https://bit.ly/2UqZQUA
ಪ್ರೊಟೆಕ್ಟ್ ಡಿಫೆಂಡರ್ಸ್.ಇಯು ಮಾನವ ಹಕ್ಕುಗಳ ರಕ್ಷಕರ ಸುರಕ್ಷತಾ ಅಗತ್ಯಗಳನ್ನು ಪೂರೈಸಲು ತರಬೇತಿಗಳ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುತ್ತದೆ ಮತ್ತು ಅವರಿಗೆ ಹೆಚ್ಚುವರಿ ತಿಳುವಳಿಕೆ ಮತ್ತು ಸಾಧನಗಳನ್ನು ಒದಗಿಸುತ್ತದೆ. ಪ್ರೊಟೆಕ್ಟ್ ಡಿಫೆಂಡರ್ಸ್.ಇಯು ತನ್ನ ಪಾಲುದಾರರ ಮೂಲಕ ತರಬೇತಿ ಮತ್ತು ಮಾಹಿತಿ ಕಾರ್ಯಕ್ರಮವನ್ನು ಅಭಿವೃದ್ಧಿಪಡಿಸುತ್ತದೆ: ಫ್ರಂಟ್ ಲೈನ್ ಡಿಫೆಂಡರ್ಸ್, ಎಫ್‌ಐಡಿಹೆಚ್, ಒಎಂಸಿಟಿ, ಆರ್‌ಎಸ್‌ಎಫ್, ಫೋರಮ್ ಏಷ್ಯಾ, ಇಹೆಚ್‌ಎಹೆಚ್‌ಆರ್‌ಡಿಪಿ (ಡಿಫೆಂಡ್ ಡಿಫೆಂಡರ್ಸ್), ಪೀಸ್ ಬ್ರಿಗೇಡ್ಸ್ ಇಂಟರ್ನ್ಯಾಷನಲ್, ಪ್ರೊಟೆಕ್ಷನ್ ಇಂಟರ್ನ್ಯಾಷನಲ್, ಐಎಲ್‌ಜಿಎ ಮತ್ತು ಇಎಸ್‌ಸಿಆರ್–ನೆಟ್.[35]




**ಸ್ವೀಡಿಷ್ ಫೆಲೋಶಿಪ್ ಆಫ್ ರಿಕಂಸಿಲಿಯೇಷನ್**
**(ಸ್ವೇಫಾರ್ ಅಥವಾ ದಿ ಕ್ರಿಸ್ಟಿಯನ್ ಪೀಸ್ ಮೂವ್‌ಮೆಂಟ್)**

ಸ್ವೀಫರ್‌ನ ಶಾಂತಿ ವೀಕ್ಷಕರು ಮಾನವ ಹಕ್ಕುಗಳ ರಕ್ಷಕರನ್ನು ಹಿಂಸಾತ್ಮಕ ಘರ್ಷಣೆಗಳಿಂದ ರಕ್ಷಿಸುತ್ತಾರೆ, ಜೊತೆಗೆ ಸುಸ್ಥಿರ ಮತ್ತು ಕೇವಲ ಶಾಂತಿಗೆ ಕೊಡುಗೆ ನೀಡುವ ಸಾಮರ್ಥ್ಯವನ್ನು ಹೆಚ್ಚಿಸಲು ಸಹಾಯ ಮಾಡುತ್ತಾರೆ.

ಸ್ವೀಫರ್ ಮಾನವ ಹಕ್ಕುಗಳ ರಕ್ಷಕರಿಗೆ ತಡೆಗಟ್ಟುವ ಉಪಸ್ಥಿತಿ ಎಂದು ಕರೆಯುವ ಅಂತರರಾಷ್ಟ್ರೀಯ ಜೊತೆಯಲ್ಲಿ ಹೋಗುವ ವಿಧಾನದ ಮೂಲಕ ರಕ್ಷಣೆ ಮತ್ತು ವ್ಯಾಪ್ತಿಯನ್ನು ಸೃಷ್ಟಿಸುತ್ತದೆ. ಕ್ಷೇತ್ರ ಮಟ್ಟದ ಶಾಂತಿ ವೀಕ್ಷಕರು ಭೌತಿಕವಾಗಿ ಹಾಜರಾಗುತ್ತಾರೆ, ಉದಾಹರಣೆಗೆ, ಅಪಾಯಕಾರಿ ಪ್ರವಾಸಗಳು ಅಥವಾ ಪ್ರದರ್ಶನಗಳು, ಅವರು ಮಾನವ ಹಕ್ಕುಗಳ ರಕ್ಷಕರ ಪರಿಸ್ಥಿತಿಯ ಬಗ್ಗೆ ಮಾಹಿತಿಯನ್ನು ಪ್ರಸಾರ ಮಾಡುತ್ತಾರೆ, ರಾಷ್ಟ್ರೀಯ ಅಧಿಕಾರಿಗಳಿಗೆ ಮತ್ತು ಅಂತರರಾಷ್ಟ್ರೀಯ ಸಂಸ್ಥೆಗಳಿಗೆ ತಮ್ಮ ಜವಾಬ್ದಾರಿಗಳನ್ನು ನೆನಪಿಸುತ್ತಾರೆ ಮತ್ತು ಸ್ಥಳೀಯ ಸಂಸ್ಥೆಗಳಿಗೆ ತಮ್ಮ ಭದ್ರತೆಯನ್ನು ಹೇಗೆ ಬಲಪಡಿಸಬೇಕು ಎಂಬುದರ ಕುರಿತು ಶಿಕ್ಷಣವನ್ನು ನೀಡುತ್ತಾರೆ.

ಶಾಂತಿ ವೀಕ್ಷಕರು ಕೊಲಂಬಿಯಾದ ಸ್ವೆಫೋರ್ ದೇಶೀಯ ಕಚೇರಿಗಳಲ್ಲಿ (ಬೊಗೊಟಾ ಮತ್ತು ಕ್ವಿಬ್ಡೆ), ಗ್ವಾಟೆಮಾಲಾ ನಗರ, ಮತ್ತು ದಕ್ಷಿಣ ಮೆಕ್ಸಿಕೊದ ಚಿಯಾಪಾಸ್ ರಾಜ್ಯದ ಸ್ಯಾನ್ ಕ್ರಿಸ್ಟೋಬಲ್ ಡೆ ಲಾಸ್ ಕಾಸಾಸ್ನ ದಲ್ಲಿ ನೆಲೆಸಿದ್ದಾರೆ. ಅವರು ಆಗಾಗ್ಗೆ ಮಾನವ ಹಕ್ಕುಗಳ ರಕ್ಷಕರೊಂದಿಗೆ ದೇಶಗಳ ಇತರ ಭಾಗಗಳಿಗೆ ಭೇಟಿ ನೀಡುತ್ತಾರೆ.

ಸ್ವೇಫಾರ್ – ವೆಬ್‌ಸೈಟ್: https://bit.ly/2wu0Tv2

32 https://bit.ly/397UmUd
33 https://bit.ly/2UuAc17
34 https://bit.ly/33Fhx7h
35 https://bit.ly/2UqZQUA





# ಟಿಪ್ಪಣಿಗಳು (NOTES)

# ನಿರೂಪಣೆಯನ್ನು ಪುನ: ಪಡೆದುಕೊಂಡಿರುವುದು

## ಕ್ಷೇತ್ರದಲ್ಲಿ ಮಾನವ ಹಕ್ಕುಗಳ ರಕ್ಷಕರ ಸಂಗ್ರಹಿಸಿದ ಕಥೆಗಳ ಕಿರು–ಚಿತ್ರಣ

ಯಾವುದೇ ಸಂಘಟನೆಯು ಎಷ್ಟೇ ಚಿಕ್ಕದಾದರೂ, ಅದರ ಅಸ್ತಿತ್ವಕ್ಕೆ ಮತ್ತು ಪರಿಣಾಮಕಾರಿ ಕಾರ್ಯಾಚರಣೆಗಳಿಗೆ ಸಂಪನ್ಮೂಲಗಳನ್ನು ಹುಡುಕುವುದು, ಪಡೆಯುವುದು ಮತ್ತು ಬಳಸುವ ಸಾಮರ್ಥ್ಯವು ಅತ್ಯಗತ್ಯವಾಗಿರುತ್ತದೆ. ಸಂಘಟನೆಯ ಸ್ವಾತಂತ್ರ್ಯದ ಹಕ್ಕಿನಲ್ಲಿ ವ್ಯಕ್ತಿಗಳು ಅಥವಾ ಕಾನೂನು ಘಟಕಗಳು ಸಂಘಟನೆಯನ್ನು ರಚಿಸುವ ಮತ್ತು ಸಂಘಟನೆಯನ್ನು ಸೇರುವ ಸಾಮರ್ಥ್ಯವನ್ನು ಒಳಗೊಂಡಿರುವುದರ ಜೊತೆಗೆ ದೇಶೀಯ, ವಿದೇಶಿ ಮತ್ತು ಅಂತರರಾಷ್ಟ್ರೀಯ ಮೂಲಗಳಿಂದ ಮಾನವ ಸಂಪನ್ಮೂಲ, ಭೌತಿಕ ಸಂಪನ್ಮೂಲ ಮತ್ತು ಹಣಕಾಸು ಸಂಪನ್ಮೂಲಗಳನ್ನು ಹುಡುಕುವುದು, ಸ್ವೀಕರಿಸುವುದು ಮತ್ತು ಬಳಸುವುದನ್ನೂ ಸಹ ಒಳಗೊಂಡಿರುತ್ತದೆ.

**- ಲಟೊಯಾ ನುಜೆಂಟ್, ಜಮೈಕಾದ ಮಾನವ ಹಕ್ಕುಗಳ ರಕ್ಷಕರು**



ಸಿಂಧ್ # ಹ್ಯೂಮನ್ ರೈಟ್ಸ್ ಡಿಫೆಂಡರ್ಸ್ ನೆಟ್ವರ್ಕ್ ಚೆನ್ನಾಗಿ ನಡೆಯುತ್ತಿದೆ. ನಮ್ಮ ಮಾಹಿತಿ ಹಂಚುವಿಕೆಯ ವ್ಯವಸ್ಥೆಯು ಸುಧಾರಿಸಿದೆ. ಈಗ, ಈ ನೆಟ್‌ವರ್ಕ್ ಮೂಲಕ, ಜಾಕೋಬಾದ್‌ನಲ್ಲಿ ಏನು ನಡೆಯುತ್ತಿದೆ, ಉಮಾರ್ಕೋಟ್, ಮಿಥಿಯಲ್ಲಿ ಏನು ನಡೆಯುತ್ತಿದೆ ಮತ್ತು ಮಾನವ ಹಕ್ಕುಗಳ ಉಲ್ಲಂಘನೆ ಏನಾಗಿದೆ ಎಂಬುವುದು ನಮಗೆ ತಿಳಿಯುತ್ತಿದೆ. ಇದರ ಜೊತೆಯಲ್ಲಿ, [ನಮಗೆ ತಿಳಿದಿದೆ] ರಾಜ್ಯ ಮತ್ತು ರಾಜ್ಯೇತರ ಪಾತ್ರಧಾರರು ಯಾವ ಸಾಧನಗಳನ್ನು ಬಳಸುತ್ತಿದ್ದಾರೆ. ಅಲ್ಲಿ ಮಾನವ ಹಕ್ಕುಗಳ ಉಲ್ಲಂಘನೆಯ ಯಾವ ಪ್ರವೃತ್ತಿಗಳಿವೆ. ವಿಭಿನ್ನ ತಂತ್ರಗಳ ಮೂಲಕ ನಾವು ಮಾನವ ಹಕ್ಕುಗಳ ರಕ್ಷಕರ ಭದ್ರತೆ ಮತ್ತು ಸುರಕ್ಷತೆಯನ್ನು ಹೇಗೆ ಸುಧಾರಿಸಬಹುದು. ಆದ್ದರಿಂದ, ಇದು ತುಂಬಾ ಪರಿಣಾಮಕಾರಿ.

**- ಅಲಿ ಪಾಲ್ಹ್, ಪಾಕಿಸ್ತಾನದ ಮಾನವ ಹಕ್ಕುಗಳ ರಕ್ಷಕರು**



ನಾನು ಸಾಕಷ್ಟು ಮಾಡುತ್ತಿಲ್ಲ ಎಂದು ನಾನು ಯಾವಾಗಲೂ ಭಾವಿಸುತ್ತೇನೆ. ನಾನು ಸಾಕಷ್ಟು ಕೆಲಸ ಮಾಡುತ್ತೇನೆ, ಆದರೆ ಅದು ಸಾಕಾಗುವುದಿಲ್ಲ ಮತ್ತು ಅದು ನಿಜವಾಗಿಯೂ ನಿರಾಶಾದಾಯಕವಾಗಿದೆ ಎಂದು ನಾನು ಯಾವಾಗಲೂ ಭಾವಿಸುತ್ತೇನೆ. ಮತ್ತು, ಕೆಲವೊಮ್ಮೆ ನೀವು ನಿಜವಾಗಿಯೂ ಒಂಟಿಯಾಗಿರುತ್ತೀರಿ ಏಕೆಂದರೆ ಮಾನವ ಹಕ್ಕುಗಳ ರಕ್ಷಕರಾಗಿ ನಿಮ್ಮ ಕೆಲಸವನ್ನು ನಿಜವಾಗಿಯೂ ಬೆಂಬಲಿಸುವ ಕೆಲವೇ ಜನರಿದ್ದಾರೆ, ಸರ್ಕಾರವು ಹಾಗೆಯೇ ಖಾಸಗೀ ವಲಯ ಮತ್ತು ಸಮಾಜವು ನಿಮ್ಮನ್ನು ಶತ್ರುವಾಗಿ ನೋಡುತ್ತದೆ, ಏಕೆಂದರೆ, ಉದಾಹರಣೆಗೆ ಮೆಕ್ಸಿಕೊದಲ್ಲಿ ಹೆಚ್ಚಿನ ಜನರು ಮಾನವ ಹಕ್ಕುಗಳು ಏನೆಂದು ಅರ್ಥವಾಗುವುದಿಲ್ಲ. ಮಾನವ ಹಕ್ಕುಗಳ ಉಲ್ಲಂಘನೆಯ ಬಲಿಪಶುಗಳಿಂದ ನಾನು ಆಳವಾಗಿ ಸ್ಫೂರ್ತಿ ಪಡೆದಿದ್ದೇನೆ, ವಿಶೇಷವಾಗಿ ನಾನು [ಯಾರನ್ನು] ಕಾಣೆಯಾದ ಜನರ ತಾಯಂದಿರನ್ನು ಬೆಂಬಲಿಸುತ್ತೇನೆ, ಏಕೆಂದರೆ, ವಿರೋಧಗಳ ಹೊರತಾಗಿಯೂ ಮತ್ತು ಅವರ ಪ್ರೀತಿಪಾತ್ರರ ಕಣ್ಮರೆಯಿಂದಾಗಿ ಉಂಟಾದ ಸಂಕಟಗಳ ಹೊರತಾಗಿಯೂ, ಆ ಮಹಿಳೆಯರು ತಮ್ಮ ಹಕ್ಕುಗಳಿಗಾಗಿ ನಿಂತಿದ್ದಾರೆ ಮತ್ತು ದಿನದಿಂದ ದಿನಕ್ಕೆ ನ್ಯಾಯಕ್ಕಾಗಿ ಒತ್ತಾಯಿಸುತ್ತಿದೆ.

**– ಜೆರೋಮಿ ರೆನಾಕ್ಸ್, ಮಾನವ ಹಕ್ಕುಗಳ ರಕ್ಷಕರು**

*"Siempre siento que no estoy haciendo lo suficiente, trabajo mucho pero siempre siento que no es suficiente y es realmente frustrante, y a veces realmente te sientes solo porque hay pocas personas que realmente apoyan tu trabajo como defensor de derechos humanos, el gobierno te ve como un enemigo, igual el sector privado y la sociedad porque en México, por ejemplo, la mayoría de la gente no entiende lo que son los derechos humanos... Me inspiran profundamente las víctimas de violaciones de los derechos humanos que apoyo, especialmente las madres de las personas desaparecidas, porque a pesar de la adversidad y a pesar del sufrimiento causado por la desaparición de sus seres queridos, esas mujeres están defendiendo sus derechos y exigiendo justicia día tras día."*



ವಿಕಲಚೇತನ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಸಮಾಜವು ಒಂದು ಮನಸ್ಥಿತಿಯನ್ನು ಹೊಂದಿದೆ. ಅದರಲ್ಲಿ ಆಲ್ಬಿನಿಸಂ ಕೂಡಾ ಒಂದು (ಆಲ್ಬಿನಿಸಂ ಒಂದು ಅನುವಂಶಿಕ ಸ್ಥಿತಿಯಾಗಿದ್ದು ಅದು ಚರ್ಮ, ಕೂದಲು ಮತ್ತು / ಅಥವಾ ಕಣ್ಣುಗಳಲ್ಲಿ ರೂಪುಗೊಳ್ಳುವ ಮೆಲನಿನ್ ವರ್ಣದ್ರವ್ಯದ ಪ್ರಮಾಣವನ್ನು ಕಡಿಮೆ ಮಾಡುತ್ತದೆ). ನಿಮ್ಮ ಹಕ್ಕುಗಳನ್ನು ನೀವು ಹೇಳಿಕೊಳ್ಳುತ್ತಿದ್ದರೆ, ನಿಮ್ಮ ಪರಿಸ್ಥಿತಿ ಅಥವಾ ಸ್ಥಿತಿಯ ಕಾರಣದಿಂದಾಗಿ ಜನರು ನಿಮ್ಮ ಬಗ್ಗೆ ವಿಷಾದಿಸುತ್ತಿರಬೇಕು ಎಂದು ಅದನ್ನು ಜನರು ವ್ಯಾಖ್ಯಾನಿಸುತ್ತಾರೆ. ನಿಮ್ಮ ಜೀವನವನ್ನು ಸುಧಾರಿಸಲು ಅವರು ನಿಮಗೆ ಏನನ್ನಾದರೂ ನೀಡಲು ಪ್ರಯತ್ನಿಸುತ್ತಾರೆ. ಆದರೆ ಅವರು ನಿಮಗೆ ಏನನ್ನಾದರೂ ನೀಡಬೇಕು ಎಂಬುವುದು ಅಲ್ಲ, ಅಲ್ಲದೇ ಯಾರೂ ನಿಮ್ಮ ಬಗ್ಗೆ ವಿಷಾದಿಸಬಾರದು ಮತ್ತು ನೀವು ಏಳಿಗೆ ಹೊಂದುವಂತಹ ವಾತಾವರಣವನ್ನು ರಚಿಸಬೇಕು.

**– ತುಮೆಲಿವಾ ಎಚಿಫೆಪ್ಪೋ,**
**ಮಲವಿಯ ಮಾನವ ಹಕ್ಕುಗಳ ರಕ್ಷಕರು**

ನಿಮ್ಮ ಕಥೆಯನ್ನು ಹಂಚಿಕೊಳ್ಳಿ
I Defend Rights
https://bit.ly/2JcV7Rj



ನನ್ನ ಅಭಿಪ್ರಾಯದಲ್ಲಿ, [...] ಮಾನವ ಹಕ್ಕುಗಳ ಈ ಆಂದೋಲನವನ್ನು ಸುಸ್ಥಿರಗೊಳಿಸುವುದೆಂದರೆ, ನನ್ನ ಪ್ರಕಾರ, ನಿಜವಾದ ಅರ್ಥವೆಂದರೆ ಯುವ ಮಹಿಳಾ ನಾಯಕರನ್ನು ತರುವುದು, ಅವರಿಗೆ ಎಲ್ಲ ರೀತಿಯ ಬೆಂಬಲವನ್ನು ಒದಗಿಸುವುದು, ಅವರನ್ನು ಪೋಷಿಸುವುದು, ಮತ್ತು ನಂತರ ಅವರನ್ನು ಮುಂದಕ್ಕೆ ಹೋಗಲು ಬಿಡುವುದು, ಏಕೆಂದರೆ ನದಿ ಹರಿದು ಹೋಗುವಂತೆ ಅವರು ಅದನ್ನು ತೆಗೆದುಕೊಂಡು ಹೋಗುತ್ತಾರೆ, ಅವರು ಅದನ್ನು ತಮ್ಮ ಶಕ್ತಿ ಮತ್ತು ಉತ್ಸಾಹದಿಂದ ಮುಂದಕ್ಕೆ ತೆಗೆದುಕೊಂಡು ಹೋಗುತ್ತಾರೆ ಮತ್ತು ಸಾಮಾಜಿಕ ನ್ಯಾಯಕ್ಕಾಗಿ ಈ ಹೋರಾಟದ ಗುಂಪು ಎಂದಿಗೂ ಹಿಂದೆ ತಿರುಗುವುದಿಲ್ಲ.

**– ಆಶಾ ಕವಿತಾಳ್, ಭಾರತದ ಮಾನವ ಹಕ್ಕುಗಳ ರಕ್ಷಕರು**





2013 ರಲ್ಲಿ, ನನ್ನ ಮಗನ ಹತ್ಯೆಯಲ್ಲಿ ಭಾಗಿಯಾದ 6 ಮಿಲಿಟರಿ ಸಿಬ್ಬಂದಿಯನ್ನು 54 ವರ್ಷಗಳ ಜೈಲು ಶಿಕ್ಷೆಗೆ ಒಳಪಡಿಸಲು ಮತ್ತು ಈ ಅಪರಾಧವನ್ನು ಮಾನವೀಯತೆಯ ವಿರುದ್ಧದ ಒಂದು ಅಪರಾಧವೆಂದು ಗುರುತಿಸಲು ನಾವು ಅಂತಿಮವಾಗಿ ಯಶಸ್ವಿಯಾಗಿದ್ದೇವೆ. ಆದರೆ ಇದು ನನ್ನ ಹೋರಾಟ ಮಾತ್ರವಲ್ಲ; ಈ ಹೋರಾಟವು ಒಂದು ದೇಶದ, ಸಾವಿರಾರು ತಾಯಂದಿರು, ಹೆಂಡತಿಯರು, ಹೆಣ್ಣುಮಕ್ಕಳು, ಸಹೋದರಿಯರ ಹೋರಾಟವಾಗಿದ್ದು, ಏಕೆ [...] ಅವರ ಸಂಬಂಧಿಕರನ್ನು ಕೊಲ್ಲಲಾಯಿತು ಎಂಬ ಸತ್ಯವನ್ನು ನಿಜವಾಗಿಯೂ ತಿಳಿದುಕೊಳ್ಳಲು ಪ್ರಯತ್ನಿಸುತ್ತಿರುವುದು [ಬಗ್ಗೆ]. ನಿಜವಾಗಿಯೂ ದೇಶದಲ್ಲಿ ಬದಲಾವಣೆಯನ್ನು ಹೆಣೆಯ ಬೇಕಾದರೆ, ನಮ್ಮ ಹೊಸ ಪೀಳಿಗೆಗೆ ದೀರ್ಘ ಮತ್ತು ಶಾಶ್ವತ ಶಾಂತಿ ಪ್ರಕ್ರಿಯೆಯನ್ನು ಹೆಣೆಯಲು ಪ್ರಾರಂಭಿಸಿದಲ್ಲಿ ಮಾತ್ರ ಇದು ಸಾಧ್ಯವಾಗುತ್ತದೆ.


**- ಲುಜ್ ಮರೀನಾ ಬರ್ನಾಲ್**

*"En el 2013 al fin logramos que 6 militares que están implicados en el asesinato de mi hijo se condenaran a 54 años y se reconociera crimen de lesa humanidad. Pero también no es solamente mi lucha, sino es la lucha de un país, la lucha de miles de madres, de esposas, de hijas, de hermanas que están tratando de realmente saber la verdad, porqué asesinaron a cada uno de sus familiares. Pero también poder empezar a tejer un cambio realmente para el país, tejer un proceso de paz largo y duradero para nuestras nuevas generaciones que vienen."*






# ಟಿಪ್ಪಣಿಗಳು (NOTES)



## ಟಿಪ್ಪಣಿಗಳು (NOTES)





## ಟಿಪ್ಪಣಿಗಳು (NOTES)



www.nhrf.no